# ಕರ್ನಾಟಕ ವಿಕಾಸ

# KARNATAKA VIKAS

ಮೇ
May
2012

ಕೇಂದ್ರ ಸರ್ಕಾರದ
ನಿರ್ಮಲ ಗ್ರಾಮ ಪುರಸ್ಕಾರ



## ಸಾಧನೆಗೆ ಸಂದ ಪುರಸ್ಕಾರಗಳು





ಕರ್ನಾಟಕ ರಾಜ್ಯವು ಪಂಚಾಯತ್ ಸಬಲೀಕರಣ ಹಾಗೂ ಉತ್ತರದಾಯಿತ್ವಕ್ಕಾಗಿ
ಸತತವಾಗಿ ಮೂರನೇ ಬಾರಿ ಪಡೆಯಲಾಗುತ್ತಿರುವ ಕೇಂದ್ರ ಸರ್ಕಾರದ ಪ್ರಶಸ್ತಿ




ಬಾಗಲಕೋಟೆ ಜಿಲ್ಲೆಯಲ್ಲಿ ನಡೆದ ಸ್ವಚ್ಛತಾ ಉತ್ಸವ ಮಾಸಾಚರಣೆ ಕಾರ್ಯಕ್ರಮದಲ್ಲಿ ಗ್ರಾ.ಪಂ. ರಾಜ್ ಸಚಿವರಾದ ಮಾನ್ಯ ಶ್ರೀ ಜಗದೀಶ್ ಶೆಟ್ಟರ್ ರವರು, ಗ್ರಾ.ಪಂ. ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾದ ಡಾ|| ಅಮಿತಾ ಪ್ರಸಾದ್‌ರವರು, ಗಣ್ಯರು ಹಾಗೂ ಹಿರಿಯ ಅಧಿಕಾರಿಗಳು ಭಾಗವಹಿಸಿದ್ದರು



# ಕರ್ನಾಟಕ ವಿಕಾಸ
KARNATAKA VIKAS

ಮೇ May 2012 | ಸಂಪುಟ VOLUME 53 | ಸಂಚಿಕೆ ISSUE 6


## ಈ ಸಂಚಿಕೆಯೊಳಗೆ


5 ಸಚಿವಾಲಯದಿಂದ ಸಂದೇಶ – ಡಾ. ಅಮಿತಾ ಪ್ರಸಾದ್

7 ನಿರ್ದೇಶಕರ ಸಂದೇಶ – ಡಾ. ಜೆ. ರವಿಶಂಕರ್

8 ಕಾವ್ಯ ವಿಕಾಸ – ರಾಷ್ಟ್ರಕವಿ ಡಾ. ಜಿ.ಎಸ್. ಶಿವರುದ್ರಪ್ಪ


9 ಮುಖಪುಟ ವರದಿ – ಪ್ರವೀಣ್ ಹುಲಿಕುಂಟೆ

11 ಯಶೋಗಾಥೆಗಳು – ಅರ್ಜುನ ಎಸ್ ಕಡೆಟ್ಟಿ
ಪ್ರವೀಣ್ ಹುಲಿಕುಂಟೆ
ರಾಮಾಂಜನೇಯ ವಿ.ಎಚ್.

42 ಲೇಖನ – ಡಾ. ಟಿ. ರಮೇಶ್

44 ಕವಿಯ(ಕ್ಷ) ಪ್ರಶ್ನೆಗಳು
– ಚೇತನ್‌ಕುಮಾರ್ ಎಸ್. ರಾಂಪೂರ

45 ಸುತ್ತೋಲೆಗಳು



ಪ್ರಕಾಶಕರು
ಪಿ. ಕುಮಾರ್
ನಿರ್ದೇಶಕರು (ಪಂ.ರಾಜ್)
ಹಾಗೂ ಸರ್ಕಾರದ ಪದನಿಮಿತ್ತ
ಉಪಕಾರ್ಯದರ್ಶಿಗಳು

ಪ್ರಧಾನ ಸಂಪಾದಕರು
ಶ್ರೀ ಬೂವನಹಳ್ಳಿ ನಾಗರಾಜ್

ಸಂಪಾದಕರು
ಶ್ರೀ ವೈ. ಮಹಾಂಕಾಳಪ್ಪ

ಸಹಾಯಕ ಸಂಪಾದಕರು
ಡಾ|| ಎಂ.ಎಸ್. ಮಂಜುನಾಥ್
ನಾಗರಾಜ್.ಬಿ.ವಾಗಾ



**ವಾರ್ಷಿಕ ಚಂದಾ :**
ವ್ಯಕ್ತಿಗಳಿಗೆ ರೂ. 50/–
ಸಂಸ್ಥೆಗಳಿಗೆ ರೂ. 60/–
ಬಿಡಿ ಪ್ರತಿ ರೂ. 5/–
ಚಂದಾ ಹಣವನ್ನು ಮನಿಯಾರ್ಡರ್ ಮೂಲಕ ನಿಮ್ಮ ಅಂಚೆ ವಿಳಾಸದೊಂದಿಗೆ ನಮ್ಮ ಕಚೇರಿ ವಿಳಾಸಕ್ಕೆ ತಲುಪಿಸಬಹುದು.



**ಕಚೇರಿ ವಿಳಾಸ**
ಮುಖ್ಯ ಸಂಪಾದಕರು, "ಕರ್ನಾಟಕ ವಿಕಾಸ"
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ನಂ. 309, 3ನೇ ಮಹಡಿ, ಗೇಟ್ ನಂ. 1,
ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ,
ಬೆಂಗಳೂರು – 560 001.
ದೂರವಾಣಿ : (080) 22353857
www.rdpr.kar.nic.in
**email:karnatakavikasa@ymail.com**



ವಿಶೇಷ ಸೂಚನೆ
ಕರ್ನಾಟಕ ವಿಕಾಸದಲ್ಲಿ ಪ್ರಕಟಿಸುವ ಸರ್ಕಾರಿ ಆದೇಶ, ಸುತ್ತೋಲೆಗಳು ಅಧಿಕೃತವಾದವುಗಳಾಗಿದ್ದು ಎಲ್ಲಾ ಪಂಚಾಯತ್ ರಾಜ್ ಸಂಸ್ಥೆಗಳು ಅನುಷ್ಠಾನಕ್ಕೆ ತರಬೇಕು.

ಲೇಖನಗಳಲ್ಲಿರುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತದೆ ಹೊರತು ಸರ್ಕಾರದ ಅಭಿಪ್ರಾಯಲ್ಲ.

## ಪತ್ರಿಕೆ ಕುರಿತು ನಿಮ್ಮ ನುಡಿ

ಮಾನ್ಯರೇ,

ಕರ್ನಾಟಕ ವಿಕಾಸ ಏಪ್ರಿಲ್ 2012ನೇ ಮಾಹೆಯ ಸಂಚಿಕೆಯಲ್ಲಿ ಮೂಡಿಬಂದ ಡಾ॥ ಅಮಿತಾ ಪ್ರಸಾದ್, ಸರ್ಕಾರದ ಪ್ರಧಾನ ಕಾರ್ಯದರ್ಶಿಯವರ ಲೇಖನ 'ಸಂರಕ್ಷಿಸೋಣ ನೀರಿನ ಬವಣೆಯನ್ನು ನೀಗಿಸೋಣ' ಲೇಖನವನ್ನು ಓದಿ ಸಾಕಷ್ಟು ಅರ್ಥಪೂರ್ಣ ವಿಷಯಗಳನ್ನು ತಿಳಿದುಕೊಳ್ಳುವಲ್ಲಿ ಸಹಕಾರಿಯಾಯಿತು. ಅಂತೆಯೇ ಸಂಗಮೇಶ ಮೆಣಸಿನಕಾಯಿ ಇವರ 'ನೀರು ಸರಬರಾಜು ಜೊತೆಗೆ ಒಳಚರಂಡಿ ವ್ಯವಸ್ಥೆಯನ್ನು ಆಳವಾಗಿ ನಿರ್ವಹಿಸುತ್ತಿರುವ ಗದಗ ಹುಲಕೋಟಿ ಗ್ರಾಮ' ಲೇಖನದಲ್ಲಿ ಯೋಜನಾ ಸೌಲಭ್ಯ ಉಪಯೋಗ ಸಮಸ್ಯೆ ಹಾಗೂ ಪರಿಹಾರ ಕುರಿತಾದ ವಿಶ್ಲೇಷಿತ ವಿಚಾರಧಾರೆ ಲೇಖನ ಅರ್ಥಪೂರ್ಣವಾಗಿತ್ತು. ಒಟ್ಟಾರೆಯಾಗಿ ಕರ್ನಾಟಕ ವಿಕಾಸ ಪತ್ರಿಕೆಯಲ್ಲಿ ಮೂಡಿಬಂದ 'ಸಚಿವಾಲಯದಿಂದ ಸಂದೇಶ', 'ನಿರ್ದೇಶಕರ ಸಂದೇಶ', 'ಕಾವ್ಯ ವಿಕಾಸ', 'ಪರಿಚಯ', 'ಕವಿಯ(ಕ್ಷ) ಪ್ರಶ್ನೆಗಳು', 'ಯಶೋಗಾಥೆಗಳು', 'ಸುತ್ತೋಲೆ' ಪ್ರತಿಯೊಂದು ಪುಟದ ಮಾಹಿತಿಯು ಜ್ಞಾನಾರ್ಜನೆಯಾಗಿತ್ತು. ಜೊತೆಗೆ ಸಾಮಾಜಿಕ ಕಾಳಜಿಯ ಪತ್ರಿಕೆಯಾಗಿದೆ. 'ಕರ್ನಾಟಕ ವಿಕಾಸ' ದಿನಪತ್ರಿಕೆಯನ್ನು ಗ್ರಂಥಾಲಯದಲ್ಲಿ ಓದಿದ ತಕ್ಷಣವೇ ಪತ್ರಿಕೆಯ ಚಂದಾದಾರನಾಗಲು ಬಯಸಿ ಜ್ಞಾನವನ್ನು ಪಡೆಯಲು ಹಾಗೂ ಸಾಮಾಜಿಕ ಮಾಹಿತಿಯು ಪ್ರತಿಯೊಬ್ಬರಿಗೂ ಉಪಯುಕ್ತವಾಗಿದ್ದು, ಪತ್ರಿಕೆ ಇನ್ನಷ್ಟು ಸಾಮಾಜಿಕ ಕಾಳಜಿಯ ಮಾಹಿತಿಯು ನಿರಂತರ ಅರಿವು ಮೂಡಿಬರಲಿ ಎಂಬ ಆಶಯದೊಂದಿಗೆ ನಿಮ್ಮ ಪತ್ರಿಕಾಭಿಮಾನಿಯ ಮನವಿ.

**– ಎ.ಜಿ. ಸುರೇಂದ್ರಬಾಬು,** ಮಾರುಕಟ್ಟೆ ಸಹಾಯಕ,
ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಳ್ಳಕೆರೆ, ಚಿತ್ರದುರ್ಗ ಜಿಲ್ಲೆ.




'ಕರ್ನಾಟಕ ವಿಕಾಸ' ಮಾಸ ಪತ್ರಿಕೆಯು ಕನ್ನಡ ನಾಡಿನ ಕೈಪಿಡಿಯಾಗಿದೆ. ಇನ್ನು ಮುಂದೆ ಕರ್ನಾಟಕ ವಿಕಾಸದಲ್ಲಿ ಸಂಸ್ಕೃತಿ, ಕಲೆ ಮತ್ತು ಸಾಹಿತ್ಯಗಳ ಕುರಿತು ಹೆಚ್ಚಿನ ಲೇಖನಗಳು ಮೂಡಿಬಂದು ನನ್ನಂತ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಲಿ.

**– ಸಾಗರ,** 9ನೇ ತರಗತಿ, ಶ್ರೀ ಕೊತ್ತಲ ಬಸವೇಶ್ವರ ಪ್ರೌಢಶಾಲೆ,
ಅಂಚೆ : ಮುಧೋಳ, ಸೇಡಂ ತಾ॥, ಗುಲ್ಬರ್ಗಾ ಜಿಲ್ಲೆ.

ಕರ್ನಾಟಕ ವಿಕಾಸ ಏಪ್ರಿಲ್ ಮಾಹೆಯಲ್ಲಿ ಪ್ರಕಟವಾದ ಸುನೀತ ಜಗದೀಶ್‌ರವರ 'ಸೋಲು–ಗೆಲುವುಗಳ ನಡುವೆ ಏಳು ಬೀಳಿನ ಕಥೆ' ಶೀರ್ಷಿಕೆಯ ಪರಿಚಯ ಲೇಖನವು ಇತರ ಸದಸ್ಯರುಗಳಿಗೆ ಮಾದರಿಯಾಗಿದೆ. ಅವರ ಹೋರಾಟ ಮನೋಭಾವ ಮೆಚ್ಚತಕ್ಕ ವಿಷಯವಾಗಿದೆ. ಡಾ॥ ಜೆ. ರವಿಶಂಕರ್‌ರವರ ನಿರ್ದೇಶಕರ ಸಂದೇಶವು ಅರ್ಥಪೂರ್ಣವಾಗಿದೆ. ಅಲ್ಲದೆ ಪತ್ರಿಕೆಯಲ್ಲಿ ಪ್ರಕಟವಾದ ಇತರ ಎಲ್ಲ ಲೇಖನಗಳು ಇತರ ಹಳ್ಳಿಗಳಿಗೆ ಮಾದರಿಯಾಗಿವೆ ಮತ್ತು ಉಪಯುಕ್ತವಾಗಿವೆ. ಜಲನಿರ್ಮಲ ಯೋಜನೆಯ ಸಮರ್ಪಕ ಉಪಯೋಗ ಮಾಡಿಕೊಂಡ ಗ್ರಾಮ ಪಂಚಾಯತಿಗಳು ಪುರಸ್ಕಾರಕ್ಕೆ ಅರ್ಹವಾಗಿವೆ.

**– ಆರ್.ಯು. ಮಹಾಲೇ,** ವಿಜಯನಗರ, ಮೈಸೂರು.

ಏಪ್ರಿಲ್ 2012ರ ಮಾಹೆಯ 'ಕರ್ನಾಟಕ ವಿಕಾಸ' ಪತ್ರಿಕೆಯಲ್ಲಿ ಪ್ರಕಟವಾದ ಸಮುದಾಯದ ಜವಾಬ್ದಾರಿ ಹೆಚ್ಚಿಸಿದ ಗುತ್ತೇದಾರಿ ಪದ್ಧತಿ ಎಂಬ ಶೀರ್ಷಿಕೆ ಅರ್ಥಪೂರ್ಣವಾಗಿದೆ. ಔರಾದ್ ತಾಲ್ಲೂಕಿನ ಏಕಂಬಾ ಗ್ರಾಮದ ಜನರು ಒಗ್ಗಟ್ಟಿನಿಂದ ಸಾಧಿಸಲಾಗದ ಕೆಲಸವಿಲ್ಲ ಎಂದು ತೋರಿಸಿಕೊಟ್ಟು ಇತರೆ ಗ್ರಾಮಗಳಿಗೆ ಮಾದರಿಯಾಗುವಂತಹ ಕಾರ್ಯ ಕೈಗೆತ್ತಿಕೊಂಡು ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಸಚಿವಾಲಯದಿಂದ ಸಂದೇಶ ಅಂಕಣದಲ್ಲಿ ಪ್ರಕಟವಾದ ಡಾ॥ ಅಮಿತಾ ಪ್ರಸಾದ್‌ರವರ ಸಂದೇಶವು ಅವರ ದೂರ ದೃಷ್ಟಿಗೆ ಹಿಡಿದ ಕೈಗನ್ನಡಿಯಾಗಿದೆ. ಇಂಥಹ ಅಚ್ಚುಮೆಚ್ಚಿನ ಲೇಖನಗಳನ್ನು ತರುವ ಪತ್ರಿಕೆ ನಿಜಕ್ಕೂ ಗ್ರಾಮೀಣ ಜನತೆಗೆ ಮಾರ್ಗದರ್ಶಕವಾಗಿದೆ.

**– ರಾಮಚಂದ್ರ,** ಹಂಪಿನಗರ, ಬೆಂಗಳೂರು.

ಸಚಿವಾಲಯದಿಂದ ಸಂದೇಶ

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಮೂರನೆ ಮಹಡಿ – 'ಸಿ' ಬ್ಲಾಕ್
ಬಹುಮಹಡಿ ಕಟ್ಟಡ,
ಬೆಂಗಳೂರು – 560 001.



ಡಾ. ಅಮಿತಾ ಪ್ರಸಾದ್, ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ

ಪ್ರಿಯ ಬಂಧುಗಳೇ,

## ಸ್ವಚ್ಛತೆ ಹಾಗೂ ನೈರ್ಮಲ್ಯತೆಗೆ ಆದ್ಯತೆ ಇರಲಿ.. ಸಂಪೂರ್ಣ ಸ್ವಚ್ಛತಾ ಆಂದೋಲನ ಕಾಲಮಿತಿಯಲ್ಲಿರಲಿ...

ವೈಯಕ್ತಿಕ ಸ್ವಚ್ಛತೆ, ಸ್ವಚ್ಛ ಸುಂದರ ಗ್ರಾಮೀಣ ಪರಿಸರ ನಿರ್ಮಾಣದ ಪರಿಕಲ್ಪನೆಯು ಮಹಾತ್ಮ ಗಾಂಧೀಜಿಯವರು ಪ್ರತಿಪಾದಿಸುವ ಪ್ರಮುಖ ಅಂಶಗಳಲ್ಲೊಂದಾಗಿತ್ತು. ಸ್ವಾವಲಂಬನೆಯೊಂದಿಗೆ ಸ್ವಚ್ಛ ಗ್ರಾಮೀಣ ಪರಿಸರ ನಿರ್ಮಾಣಗೊಳ್ಳದ ಹೊರತು ಹಳ್ಳಿಗಳ ಏಳ್ಗೆ ಸಾಧ್ಯವಿಲ್ಲದ ಮಾತು ಎಂದು ಗಾಂಧೀಜಿಯವರು ಪ್ರಬಲವಾಗಿ ಪ್ರತಿಪಾದಿಸುತ್ತಿದ್ದರು. ಇದಕ್ಕಾಗಿ ಅವರು ನೀರಿನ ಸದ್ಬಳಕೆ, ವೈಯಕ್ತಿಕ ಶುಚಿತ್ವ ಹಾಗೂ ನೈರ್ಮಲ್ಯದ ಬಗ್ಗೆ ಗ್ರಾಮೀಣ ಜನರಿಗೆ ಅರಿವು ಮೂಡಿಸುವ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಈ ಹಿನ್ನೆಲೆಯಲ್ಲಿ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯತೆ ಸಾಧಿಸುವ ಸಲುವಾಗಿ ಅಕ್ಟೋಬರ್ 2, 2005ರ ಗಾಂಧೀ ಜಯಂತಿಯಂದು ರಾಜ್ಯದಲ್ಲಿ ಕೇಂದ್ರ ಸರ್ಕಾರದ ನೆರವಿನೊಂದಿಗೆ "ಸಂಪೂರ್ಣ ಸ್ವಚ್ಛತಾ ಆಂದೋಲನ" ಎಂಬ ಮಹತ್ವಾಕಾಂಕ್ಷಿ ಯೋಜನೆಯನ್ನು ಸರ್ಕಾರವು ಅನುಷ್ಠಾನಗೊಳಿಸಿ ಗ್ರಾಮೀಣ ಪ್ರದೇಶವನ್ನು ಬಯಲು ಮಲ ವಿಸರ್ಜನಾ ಮುಕ್ತ ಪ್ರದೇಶವನ್ನಾಗಿ ಪರಿವರ್ತಿಸುವತ್ತ ಯಶಸ್ಸಿನ ಹಾದಿಯಲ್ಲಿರುವುದು ನಮಗೆಲ್ಲ ತಿಳಿದ ವಿಷಯವೇ ಆಗಿದೆ.

ಗ್ರಾಮೀಣ ಪ್ರದೇಶಗಳಲ್ಲಿನ ಪ್ರತಿಯೊಂದು ಕುಟುಂಬಗಳು ಸ್ವಂತವಾಗಿ ಅಥವಾ ಸರ್ಕಾರದ ನೆರವನ್ನು ಪಡೆದು ಶೌಚಾಲಯಗಳನ್ನು ಹೊಂದುವ ಮೂಲಕ ಬಯಲು ಮಲ ವಿಸರ್ಜನೆಯನ್ನು ತೊಡೆದು ಹಾಕಲು ಪ್ರೇರೆಪಿಸುವುದಲ್ಲದೆ ಗ್ರಾಮಗಳಲ್ಲಿನ ಪ್ರತಿಯೊಂದು ಶಾಲೆ ಹಾಗೂ ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯ ಸೌಲಭ್ಯಗಳನ್ನು ಒದಗಿಸಿ ಮಕ್ಕಳಲ್ಲಿ ನೈರ್ಮಲ್ಯದ ಅಭ್ಯಾಸಗಳನ್ನು ಬಾಲ್ಯದಿಂದಲೆ ಉತ್ತೇಜಿಸುವುದು, ಹಳ್ಳಿಗಳಲ್ಲಿ ಅನೈರ್ಮಲ್ಯಗಳನ್ನು ತೊಡೆದು ಹಾಕಿ, ತನ್ಮೂಲಕ ಗ್ರಾಮೀಣ ಜನರ ಆರೋಗ್ಯ ಸುಧಾರಣೆ ತರುವುದಲ್ಲದೆ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸುವುದು "ಸ್ವಂಪೂರ್ಣ ಸ್ವಚ್ಛತಾ ಆಂದೋಲನ"ದ ಪ್ರಮುಖ ಉದ್ದೇಶ.

ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವಲ್ಲಿ ಕರ್ನಾಟಕವು ಯಾವತ್ತಿಗೂ ಮುಂಚೂಣಿಯ ರಾಜ್ಯ. ಹಾಗಾಗಿ ಇಡೀ ರಾಜ್ಯ 2017 ರೊಳಗೆ ಸಂಪೂರ್ಣ ನೈರ್ಮಲ್ಯವನ್ನು ಸಾಧಿಸುವಲ್ಲಿ ತನ್ನ ಬದ್ಧತೆಯನ್ನು ಸಾಕಾರಗೊಳಿಸಬೇಕಿದೆ. ಆ ಮೂಲಕ ರಾಜ್ಯದ ಸರ್ವ ಗ್ರಾಮಗಳ ಸುಧಾರಣೆಗೆ ಅಂಕಿತ ಹಾಕಬೇಕಿದೆ. ಇದು ಸಾಧ್ಯವಾಗಬೇಕೆಂದರೆ ಗ್ರಾಮ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ನೈರ್ಮಲ್ಯ ಸಾಧನೆಗೆ ಹೆಚ್ಚಿನ ಆದ್ಯತೆ ನೀಡಿ ಅನುಷ್ಠಾನಗೊಳಿಸಬೇಕಾಗಿದೆ.

ಆದಾಗ್ಯೂ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಅದರಲ್ಲೂ ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ನೈರ್ಮಲ್ಯದ ಪ್ರಗತಿ ನಿರೀಕ್ಷಿತ ಮಟ್ಟದಲ್ಲಿ ಆಗುತ್ತಿಲ್ಲ. ಇದಕ್ಕೆ ಕಾರಣಗಳು ಹತ್ತು–ಹಲವು. ಸಂಪ್ರದಾಯಗಳು, ತಪ್ಪು ತಿಳುವಳಿಕೆಗಳು, ಸಹಸ್ರಾರು ವರ್ಷಗಳಿಂದ ರೂಢಿಸಿಕೊಂಡು ಬಂದಿರುವ ರೂಢಿಗತ ಅಭ್ಯಾಸಗಳು ಇತ್ಯಾದಿ. ಶೌಚಾಲಯದ ಕುರಿತು ಅರಿವು ಇಲ್ಲದಿರುವುದು, ಅರಿವು ಮೂಡಿದರೂ ಸಹ ಶೌಚಾಲಯ ಎಂಬುದು ಅವರಿಗೆ ಆದ್ಯತೆ ಅಥವಾ ಅನಿವಾರ್ಯ ಅನ್ನಿಸದಿರುವುದು, ಅನಕ್ಷರತೆ, ಬಡತನ, ಮೂಢನಂಬಿಕೆ, ಶೌಚಾಲಯ ನಿರ್ಮಾಣ ತುಂಬಾ ದುಬಾರಿ, ಶೌಚಾಲಯಕ್ಕೆ ಹೆಚ್ಚು ನೀರು ಬೇಕು, ಮುಂತಾದ ಕಾರಣಗಳಿಂದಾಗಿ ಜನರು ಶೌಚಾಲಯದ ಕುರಿತು ವಿಶೇಷ ಆಸಕ್ತಿ ವಹಿಸುತ್ತಿಲ್ಲ. ಜನರ ನಿರಾಸಕ್ತಿಯಿಂದಾಗಿ ಅಧಿಕಾರಿಗಳು ಹಾಗೂ ಚುನಾಯಿತ ಪ್ರತಿನಿಧಿಗಳು ಹೆಚ್ಚಿನ ಮುತುವರ್ಜಿ ವಹಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ನೈರ್ಮಲ್ಯದ ಅಭ್ಯಾಸಗಳಿಗೆ ಸಂಬಂಧಿಸಿದಂತೆ ಗ್ರಾಮಿಣ ಜನರು ಹೊಂದಿರುವ ವರ್ತನೆಗಳಲ್ಲಿ ಕ್ಷಿಪ್ರಗತಿಯ ಬದಲಾವಣೆಗಳು ಉಂಟಾಗುತ್ತಿಲ್ಲ, ಆದರೂ ಇದನ್ನು ಕೊನೆಗಾಣಿಸಲೇಬೇಕಾಗಿರುವುದು ಇಂದಿನ ತುರ್ತು ವಿಷಯವಾಗಿದೆ. ಯಾಕೆಂದರೆ ಸ್ವಚ್ಛತೆ ಮತ್ತು ಶೌಚಾಲಯಗಳು ಕೇವಲ ಸಣ್ಣ ಸಂಗತಿಗಳಲ್ಲ, ಇವು ಆರ್ಥಿಕ ಹಾಗೂ ಸಾಮಾಜಿಕ ಅಭಿವೃದ್ಧಿಗಳಿಗೆ ದಾರಿಯಾಗುತ್ತವೆ.

ಸಂಪೂರ್ಣ ಸ್ವಚ್ಛತಾ ಆಂದೋಲನ ಯೋಜನೆಯ ಅನುಷ್ಠಾನ ಮಾತ್ರ ಅತ್ಯಂತ ವಿಭಿನ್ನ. ಏಕೆಂದರೆ ಸಂಪೂರ್ಣ ಸ್ವಚ್ಛತಾ ಯೋಜನೆಯು ಗ್ರಾಮೀಣ ಜನರನ್ನು ಸ್ವಚ್ಛತೆಯತ್ತ ನೈರ್ಮಲ್ಯದ ವಿಷಯವಾಗಿ ಮನವೊಲಿಸಿ ಅವರಿಗೆ ಅರಿವು ಮೂಡಿಸಿದಲ್ಲಿ ಬಹುತೇಕ ಯೋಜನೆ ಯಶಸ್ವಿಯಾದಂತೆಯೇ ಸರಿ. ಆದ್ದರಿಂದ ಕಾರ್ಯಕ್ರಮದಲ್ಲಿ ಪಂಚಾಯತ್‌ನ ಎಲ್ಲಾ ಅಧಿಕಾರಿ ಸಿಬ್ಬಂದಿ ವರ್ಗದವರು ಖುದ್ದಾಗಿ ಆಸಕ್ತಿ ವಹಿಸಿದಲ್ಲಿ ಹಾಗೂ ಜನಪ್ರತಿನಿಧಿಗಳು, ಸಮುದಾಯ, ಸರ್ಕಾರೇತರ ಸಂಘ–ಸಂಸ್ಥೆಗಳು ಹೀಗೆ ಎಲ್ಲರ ಪಾಲ್ಗೊಳ್ಳುವಿಕೆ ಮತ್ತು ಬದ್ಧತೆಗಳಿದ್ದಲ್ಲಿ ಮಾತ್ರ ಯೋಜನೆಯಲ್ಲಿ ಪ್ರಗತಿ ಸಾಧಿಸಲು ಸಾಧ್ಯವಿರುತ್ತದೆ.

### ಸಾಧನೆಗೆ ಸಂದ ಗೌರವ – ಇತರರಿಗೂ ಮಾದರಿಯಾಲಿ......

ನೈರ್ಮಲ್ಯ ಸಾಧಿಸುವ ಗ್ರಾಮ ಪಂಚಾಯತಿಗಳನ್ನು ಉತ್ತೇಜಿಸುವ ಸಲುವಾಗಿ “ನಿರ್ಮಲ ಗ್ರಾಮ ಪುರಸ್ಕಾರ” ಪ್ರಶಸ್ತಿಯನ್ನು ಕೇಂದ್ರ ಸರ್ಕಾರವು ನೀಡಿ ಗೌರವಿಸುತ್ತಿರುವುದು ನೈರ್ಮಲ್ಯ ಸಾಧನೆಗೆ ಉತ್ತೇಜನಕಾರಿಯಾಗಿದೆ.

ಪ್ರಸ್ತುತ ಸಾಲಿನಲ್ಲಿ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯು ಸಂಪೂರ್ಣ ಸ್ವಚ್ಛತೆ ಸಾಧಿಸುವ ಮೂಲಕ ರಾಜ್ಯದಲ್ಲಿ ನಿರ್ಮಲ ಗ್ರಾಮ ಪುರಸ್ಕಾರ ಪಡೆದ ಪ್ರಥಮ ಜಿಲ್ಲೆಯೆಂಬ ಹೆಗ್ಗಳಿಕೆಗೆ ಪಾತ್ರವಾಗಿರುವುದು ಹೆಮ್ಮೆಯ ವಿಷಯ. ಜಿಲ್ಲೆಯ ಮಂಗಳೂರು ಮತ್ತು ಸುಳ್ಯ ತಾಲ್ಲೂಕುಗಳು ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಭಾಜನವಾಗಿರುವುದಲ್ಲದೆ ರಾಜ್ಯದ 103 ಗ್ರಾಮ ಪಂಚಾಯತಿಗಳು ಬಯಲು ಮಲ ವಿಸರ್ಜನೆಯಿಂದ ಮುಕ್ತಗೊಂಡು ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸುವ ಮೂಲಕ ನಿರ್ಮಲ ಗ್ರಾಮ ಪುರಸ್ಕಾರದ ಗೌರವಕ್ಕೆ ಪಾತ್ರವಾಗಿವೆ. ಒಟ್ಟಾರೆ ಇದುವರೆಗೆ ರಾಜ್ಯದ 1069 ಗ್ರಾಮ ಪಂಚಾಯತಿಗಳು, 06 ತಾಲ್ಲೂಕು ಪಂಚಾಯತಿಗಳು ಮತ್ತು 01 ಜಿಲ್ಲಾ ಪಂಚಾಯತ್ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಿ ಕೇಂದ್ರ ಸರ್ಕಾರದ ನಿರ್ಮಲ ಗ್ರಾಮ ಪುರಸ್ಕಾರ ಪಡೆದಿರುವುದು ಯೋಜನೆಯ ಯಶಸ್ಸಿನ ಮೈಲುಗಲ್ಲು ಎಂದು ಪರಿಗಣಿಸಬಹುದು.

ಭಾರತದ ರಾಷ್ಟ್ರಪತಿಗಳಿಂದ ನವದೆಹಲಿಯ ವಿಜ್ಞಾನ ಭವನದಲ್ಲಿ ದಿನಾಂಕ 21–03–2012 ರಂದು ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಅಧ್ಯಕ್ಷರಿಗೆ ಮತ್ತು ಗ್ರಾಮ ಪಂಚಾಯತಿಗಳ ಪರವಾಗಿ ಮೈಸೂರು ಜಿಲ್ಲೆಯ ಅಂಕನಹಳ್ಳಿ ಗ್ರಾಮ ಪಂಚಾಯತಿಯ ಅಧ್ಯಕ್ಷರು “ನಿರ್ಮಲ ಗ್ರಾಮ ಪುರಸ್ಕಾರವನ್ನು ಪಡೆದಿರುವುದು ರಾಜ್ಯದ ಇತರ ಎಲ್ಲಾ ಜಿಲ್ಲಾ, ತಾಲ್ಲೂಕು ಮತ್ತು ಗ್ರಾಮ ಪಂಚಾಯತಿಗಳಿಗೆ ಮಾದರಿಯಾಗಿದ್ದು, ಅವರೂ ಸಹ ನೈರ್ಮಲ್ಯ ಸಾಧಿಸುವಲ್ಲಿ ಸಹಕಾರಿಯಾಗಲಿ, ರಾಜ್ಯದೆಲ್ಲೆಡೆ ಸ್ವಚ್ಛ ಸುಂದರ ಗ್ರಾಮೀಣ ಪರಿಸರ ನಿರ್ಮಾಣವಾಗಲಿ ಎಂಬುದೇ ನನ್ನ ಆಶಯ.

**(ಡಾ. ಅಮಿತಾ ಪ್ರಸಾದ್)**

## ನಿರ್ದೇಶಕರ ಸಂದೇಶ



**ಡಾ|| ಜೆ. ರವಿಶಂಕರ್,** ಐ.ಎ.ಎಸ್
ನಿರ್ದೇಶಕರು

ಕರ್ನಾಟಕ ಗ್ರಾಮೀಣ ನೀರು ಸರಬರಾಜು
ಮತ್ತು ನೈರ್ಮಲ್ಯ ಸಂಸ್ಥೆ,
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ
ಬೆಂಗಳೂರು.

**ಪ್ರಿಯ ಬಂಧುಗಳೇ,**


ಗ್ರಾಮೀಣ ಪ್ರದೇಶಗಳ ಜನರ ಆರೋಗ್ಯ ಹಾಗೂ ಜೀವನದ ಸ್ಥಿತಿ–ಗತಿಗಳನ್ನು ಗಮನಿಸುವುದಾದರೆ ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲೂ ಒಂದೆ ತೆರನಾದ ಸಂಗತಿಗಳು ಹಾಗೂ ಸಮಸ್ಯೆಗಳನ್ನು ಗುರುತಿಸಬಹುದಾಗಿದೆ. ಗ್ರಾಮೀಣ ಪ್ರದೇಶಗಳ ಮಕ್ಕಳು ಮತ್ತು ಮಹಿಳೆಯರ ಅರೋಗ್ಯ ಸಂಬಂಧಿ ಸಮಸ್ಯೆಗಳಲ್ಲೂ ಸಾಮ್ಯತೆಯನ್ನು ಕಾಣಬಹುದಾಗಿದೆ. ಕಾಲರಾ, ಕಾಮಾಲೆ, ಅತಿಸಾರಬೇದಿ, ಉದರ ಸಂಬಂಧಿ ಸಮಸ್ಯೆಗಳು, ವಿಷಮಶೀತ ಜ್ವರ, ಅನಿಮಿಯಾ ಮುಂತಾದ ರೋಗಗಳೇ ಹೆಚ್ಚಾಗಿ ಕಾಡುತ್ತಿರುತ್ತವೆ. ಇದಕ್ಕೆ ಮುಖ್ಯ ಕಾರಣ ಗ್ರಾಮೀಣ ಜನರ ನೈರ್ಮಲ್ಯ ಸಂಬಂಧಿ ಅಭ್ಯಾಸಗಳು. ಶುದ್ಧ ನೀರು ಮತ್ತು ಸ್ವಚ್ಛತೆಯ ಅಭ್ಯಾಸಗಳು ಜನರ ಜೀವನ ಸುಧಾರಣೆಯಲ್ಲಿ ಪ್ರಮುಖ ಪಾತ್ರವನ್ನು ವಹಿಸುವ ಬಹು ಮುಖ್ಯ ಅಂಶಗಳಾಗಿವೆ. ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ಉತ್ತಮ ಅಭ್ಯಾಸಗಳನ್ನು ಕೇವಲ ಒಂದು ಮನೆಯಲ್ಲಿ ಪಾಲಿಸಿದರೆ ಸಾಲದು. ಅದು ಇಡೀ ಗ್ರಾಮ ಸಮುದಾಯದ ಪಾಲನೆಯಾಗಬೇಕು. ಹಾಗಾದಾಗ ಮಾತ್ರ ಗ್ರಾಮೀಣ ಜನರ ಆರೋಗ್ಯ ಹಾಗೂ ಜೀವನ ಮಟ್ಟದಲ್ಲಿ ಸುಧಾರಣೆಯನ್ನು ಕಾಣಲು ಸಾಧ್ಯವಾಗುತ್ತದೆ. ಸಂಪೂರ್ಣ ಗ್ರಾಮ ನೈರ್ಮಲ್ಯದ ಮೂಲಕ ಗ್ರಾಮೀಣ ಭಾರತವನ್ನು ಸುಧಾರಣೆಯತ್ತ ಕೊಂಡೊಯುವ ಮಹತ್ತರ ಉದ್ದೇಶದೊಂದಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಸಂಪೂರ್ಣ ನೈರ್ಮಲ್ಯ ಆಂದೋಲನವನ್ನು ಜಾರಿಗೊಳಿಸ ಲಾಗುತ್ತಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಸಂಪೂರ್ಣ ನೈರ್ಮಲ್ಯವನ್ನು ತರುವುದು ಈ ಯೋಜನೆಯ ಪ್ರಮುಖ ಉದ್ದೇಶ. ಪ್ರತಿ ಕುಟುಂಬವೂ ಶೌಚಾಲಯವನ್ನು ಹೊಂದಿರಬೇಕು ಹಾಗೂ ಮಲ–ಮೂತ್ರಗಳ ವಿಸರ್ಜನೆಗೆ ಶೌಚಾಲಯವನ್ನೇ ಬಳಸಬೇಕು. ಶಾಲೆ ಮತ್ತು ಅಂಗನವಾಡಿಗಳ ಪುಟ್ಟ ಮಕ್ಕಳೂ ಶೌಚಾಲಯಗಳನ್ನು ಬಳಸಬೇಕು. ಈ ಮೂಲಕ ಚಿಕ್ಕವಯಸ್ಸಿನಿಂದಲೇ ನೈರ್ಮಲ್ಯದ ಅಭ್ಯಾಸಗಳನ್ನು ರೂಢಿಸಿಕೊಳ್ಳಬೇಕು. ಮನೆಯ ಕಸ, ಸಮುದಾಯದ ಕಸ, ಬಳಸಿದ ನೀರು ವ್ಯವಸ್ಥಿತವಾಗಿ ವಿಲೇವಾರಿಯಾಗುವಂತೆ ನೋಡಿಕೊಳ್ಳಬೇಕು. ವ್ಯಕ್ತಿಗಳು, ಮನೆಗಳು, ಮನೆಯ ಅಂಗಳ, ಗ್ರಾಮದ ಬೀದಿಗಳು ಹಾಗೂ ಒಟ್ಟಾರೆ ಗ್ರಾಮ ಪಂಚಾಯಿತಿಯಲ್ಲಿ ಸಂಪೂರ್ಣ ನೈರ್ಮಲ್ಯವನ್ನು ಸಾಧಿಸುವ ಮೂಲಕ ಗ್ರಾಮೀಣ ಸ್ವಚ್ಛತೆಯನ್ನು ಸಾಧಿಸುವುದು ಹಾಗೂ ಈ ಮೂಲಕ ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ರೋಗಗಳಿಗೆ ಕಡಿವಾಣ ಹಾಕುವುದು ಸಂಪೂರ್ಣ ಸ್ವಚ್ಛತಾ ಆಂದೋಲನದ ಬಹು ಮುಖ್ಯ ಉದ್ದೇಶವಾಗಿರುತ್ತದೆ.

ಈ ನಿಟ್ಟಿನಲ್ಲಿ ಎಲ್ಲ ಹಂತಗಳ ಜನಪ್ರತಿನಿಧಿಗಳು, ಅಧಿಕಾರಿಗಳು, ಜನಸಮುದಾಯ ಹಾಗೂ ಸರ್ಕಾರೇತರ ಸಂಘ ಸಂಸ್ಥೆಗಳು ಕೈಜೋಡಿಸುವಂತಾಗಲಿ ಹಾಗೂ ಇಡೀ ರಾಜ್ಯ ನಿಗಧಿತ ಅವಧಿಯೊಳಗೆ ಸಂಪೂರ್ಣ ನೈರ್ಮಲ್ಯ ರಾಜ್ಯವಾಗಲಿ ಎಂದು ಆಶಿಸುತ್ತೇನೆ.

**ಡಾ|| ಜೆ. ರವಿಶಂಕರ್**

# ನೆಲದ ಕರೆ



ರಾಷ್ಟ್ರಕವಿ
ಡಾ|| ಜಿ.ಎಸ್. ಶಿವರುದ್ರಪ್ಪ *

ಎಲ್ಲಿ ಹೋಗುವಿರಿ ನಿಲ್ಲಿ ಮೋಡಗಳೆ
ನಾಲ್ಕು ಹನಿಯ ಚೆಲ್ಲಿ
ದಿನ ದಿನವು ಕಾದು ಬಾಯಾರಿ ಬೆಂದೆ
ಬೆಂಗದಿರ ತಾಪದಲ್ಲಿ.

ನನ್ನದೆಯ ಹಸಿರ ಉಸಿರು ಕುಗ್ಗಿದರು
ಬರಲಿಲ್ಲ ನಿಮಗೆ ಕರುಣ.
ನನ್ನ ಹೃದಯಲಿ ನೋವು ಮಿಡಿಯುತಿದೆ
ನಾನು ನಿಮಗೆ ಶರಣ.

ಬಡವಾದ ನನ್ನ ಒಡಲುರಿಯ ಬೇಗೆ
ನಿಮಗರಿವು ಆಗಲಹುದೆ?
ನೀಲಗಗನದಲಿ ತೇಲಿಹೋಗುತಿಹ
ನಿಮ್ಮ ನೆಳೆಯಬಹುದೆ?

ಬಾಯುಂಟು ನನಗೆ, ಕೂಗಬಲ್ಲೆ ನಾ
ನಿಮ್ಮೆದೆಯ ಪ್ರೇಮವನ್ನು
ನೀವು ಕರುಣಿಸಲು ನನ್ನ ಹಸಿರೆದೆಯು
ಉಸಿರುವುದು ತೋಷವನ್ನು.

ಓ ಬನ್ನಿ ಬನ್ನಿ, ಓ ಬನ್ನಿ ಬನ್ನಿ,
ನನ್ನದೆಗೆ ತಂಪ ತನ್ನಿ
ನೊಂದ ಜೀವರಿಗೆ ತಂಪನೀಯುವುದೆ
ಪರಮಪೂಜೆಯೆನ್ನಿ !

❑

* ರಾಷ್ಟ್ರಕವಿಗಳು, 'ಚೈತ್ರ' ನಂ. 867, 18ನೇ ಮುಖ್ಯರಸ್ತೆ, ಬನಶಂಕರಿ 2ನೇ ಹಂತ, ಬೆಂಗಳೂರು – 560 070.




# ಗ್ರಾಮೀಣ ಸ್ವಚ್ಛತೆಗೆ ರಾಷ್ಟ್ರ ಪ್ರಶಸ್ತಿಯ ಗೌರವ



ಪ್ರವೀಣ್ ಹುಲಿಕುಂಟೆ *

ಇಡೀ ರಾಷ್ಟ್ರದಲ್ಲಿಯೇ ಸಂಪೂರ್ಣ ಸ್ವಚ್ಛತಾ ಆಂದೋಲನದ ಅನುಷ್ಠಾನದಲ್ಲಿ ಅತ್ಯುತ್ತಮ ಸಾಧನೆ ಮಾಡಿದ ೩ ಜಿಲ್ಲೆಗಳ ಪೈಕಿ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸಹ ಒಂದಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿನ ಎಲ್ಲ ಕುಟುಂಬಗಳು ಶೌಚಾಲಯಗಳನ್ನು ಹೊಂದಿ ಬಳಸುವ ಮೂಲಕ ಬಯಲು ಮಲವಿಸರ್ಜನೆಯನ್ನು ತೊಡೆದುಹಾಕುವುದು. ಗ್ರಾಮಗಳಲ್ಲಿನ ಎಲ್ಲ ಶಾಲೆ ಹಾಗೂ ಅಂಗನವಾಡಿಗಳಲ್ಲಿ ಶೌಚಾಲಯ ಸೌಲಭ್ಯಗಳನ್ನು ಒದಗಿಸುವುದು ಹಾಗೂ ಗ್ರಾಮದ ಘನ ಮತ್ತು ದ್ರವ ತ್ಯಾಜ್ಯಗಳ ನಿರ್ವಹಣೆ ಮಾಡುವ ಮೂಲಕ ಹಳ್ಳಿಗಳಲ್ಲಿ ಸ್ವಚ್ಛ ಪರಿಸರವನ್ನು ನಿರ್ಮಿಸುವ ಉದ್ದೇಶದೊಂದಿಗೆ ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮವನ್ನು 2005 ರಿಂದ ರಾಜ್ಯದಾದ್ಯಂತ ಅನುಷ್ಠಾನಗೊಳಿಸಲಾಗುತ್ತಿದೆ.

ಗ್ರಾಮೀಣ ಪ್ರದೇಶದಲ್ಲಿ ಸ್ವಚ್ಛತೆಯನ್ನು ಸಾಧಿಸಲು ಗ್ರಾಮ ಪಂಚಾಯಿತಿಗಳನ್ನು ಉತ್ತೇಜಿಸುವ ಸಲುವಾಗಿ ಹಾಗೂ ಗ್ರಾಮೀಣ ನೈರ್ಮಲ್ಯದಲ್ಲಿ ಉತ್ತಮ ಸಾಧನೆ ಮಾಡಲು ಪೂರಕವಾಗುವಂತೆ ಕೇಂದ್ರ ಸರ್ಕಾರವು 'ನಿರ್ಮಲ ಗ್ರಾಮ ಪುರಸ್ಕಾರ' ನೀಡಿ ಗೌರವಿಸುತ್ತಿದೆ.

ಪ್ರಸಕ್ತ ಸಾಲಿನಲ್ಲಿ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲೆಯು ಸಂಪೂರ್ಣ ಸ್ವಚ್ಛತೆ ಸಾಧಿಸುವ ಮೂಲಕ ರಾಜ್ಯದಲ್ಲಿ ನಿರ್ಮಲ ಗ್ರಾಮ ಪುರಸ್ಕಾರ ಪಡೆದ ಪ್ರಥಮ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ಮತ್ತು ಸುಳ್ಯ ತಾಲ್ಲೂಕುಗಳು ಸಹ ನಿರ್ಮಲ ಗ್ರಾಮ ಪುರಸ್ಕಾರ ಪಡೆಯುವ ಮೂಲಕ ಸಂಪೂರ್ಣ ಸ್ವಚ್ಛತೆ ಸಾಧಿಸಿದ ತಾಲ್ಲೂಕು ಪಂಚಾಯತ್‌ಗಳು ಎಂಬ ಹೆಗ್ಗಳಿಕೆಗೆ ಪಾತ್ರವಾಗಿವೆ. ಇದರ ಜೊತೆಗೆ ರಾಜ್ಯದ ವಿವಿಧ ಜಿಲ್ಲೆಗಳ 103 ಗ್ರಾಮ ಪಂಚಾಯಿತಿಗಳು ಬಯಲು ಮಲ ವಿಸರ್ಜನೆಯಿಂದ ಮುಕ್ತಗೊಂಡು, ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸುವ ಮೂಲಕ 2011-12 ನೇ ಸಾಲಿನ ನಿರ್ಮಲ ಗ್ರಾಮ ಪುರಸ್ಕಾರದ ಗೌರವಕ್ಕೆ ಪಾತ್ರವಾಗಿವೆ. ಪ್ರಶಸ್ತಿಗೆ ಬಾಜನವಾದ ಎಲ್ಲ ಪಂಚಾಯತ್‌ಗಳಿಗೆ ಭಾರತ ಸರ್ಕಾರದ ಘನತೆವೆತ್ತ ರಾಷ್ಟ್ರಪತಿಗಳಾದ ಶ್ರೀಮತಿ ಪ್ರತಿಭಾದೇವಿ ಸಿಂಗ್ ಪಾಟಿಲ್‌ರವರು ದಿನಾಂಕ : 21-3-2012 ರಂದು ನವದೆಹಲಿಯ ವಿಜ್ಞಾನಭವನದಲ್ಲಿ 'ನಿರ್ಮಲ ಗ್ರಾಮ ಪುರಸ್ಕಾರ' ಪ್ರಶಸ್ತಿಯನ್ನು ಪ್ರಧಾನ ಮಾಡಿದರು.

ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಅಧ್ಯಕ್ಷರಾದ ಶ್ರೀಮತಿ ಕೆ.ಟಿ. ಶೈಲಜಾ ಭಟ್‌ರವರು ಹಾಗೂ ನಿರ್ಮಲ ಗ್ರಾಮ ಪುರಸ್ಕಾರ ಪ್ರಶಸ್ತಿಗೆ ಪಾತ್ರವಾದ 103 ಗ್ರಾಮ ಪಂಚಾಯಿತಿಗಳ ಪರವಾಗಿ ಮೈಸೂರು ಜಿಲ್ಲೆಯ ಅಂಕನಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀಮತಿ ದೇವಮ್ಮ ರವರು ಭಾರತದ ಘನತೆವೆತ್ತ ರಾಷ್ಟ್ರಪತಿಗಳಿಂದ ಪ್ರಶಸ್ತಿ ಸ್ವೀಕರಿಸಿದರು.

ನಿರ್ಮಲ ಗ್ರಾಮ ಪುರಸ್ಕಾರ ಪ್ರಶಸ್ತಿ ಪ್ರಧಾನ ಮಾಡಿ ಮಾತನಾಡಿದ ರಾಷ್ಟ್ರಪತಿಗಳು, ಪ್ರಸಕ್ತ ಸಾಲಿನ ನಿರ್ಮಲ ಗ್ರಾಮ ಪುರಸ್ಕಾರ ಪ್ರಧಾನ ಸಮಾರಂಭದಲ್ಲಿ ಭಾಗವಹಿಸಲು ನನಗೆ ಹೆಮ್ಮೆ ಎನಿಸುತ್ತಿದೆ. ಇದೊಂದು ರಾಷ್ಟ್ರಮಟ್ಟದ ಪ್ರಶಸ್ತಿ ಯಾಗಿದ್ದು, ಈ ಪ್ರಶಸ್ತಿಗೆ ಬಾಜನರಾದ ಜಿಲ್ಲಾ ಪಂಚಾಯತ್‌ಗಳು, ತಾಲ್ಲೂಕು ಪಂಚಾಯತ್‌ಗಳು ಹಾಗೂ ಗ್ರಾಮ ಪಂಚಾಯತ್‌ಗಳ ಪ್ರತಿನಿಧಿಗಳಿಗೆ ಅಭಿನಂದಿಸುತ್ತೇನೆ ಎಂದು ತಿಳಿಸಿದರು. ನಿಮ್ಮನ್ನು ನೋಡಿ ನಿಮ್ಮ ನೆರೆಹೊರೆಯ ಪಂಚಾಯತ್ ರಾಜ್ ಸಂಸ್ಥೆಗಳೂ ಸಹ ನಿಮ್ಮಂತೆಯೇ ಸಂಪೂರ್ಣ

* ಐ.ಇ.ಸಿ ಸಂಯೋಜಕರು, ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ, ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್, ಬೆಂಗಳೂರು.

ಸ್ವಚ್ಛತಾ ಆಂದೋಲನವನ್ನು ಅರ್ಥೈಸಿಕೊಂಡು, ಮನಃಪೂರ್ವಕವಾಗಿ ಶ್ರಮಿಸುವ ಮೂಲಕ ಭಾರತ ದೇಶವನ್ನು ಬಯಲು ಮಲ ವಿಸರ್ಜನೆ ಮುಕ್ತ ರಾಷ್ಟ್ರವನ್ನಾಗಿ ಮಾಡುವ ಮೂಲಕ ಸುಂದರ, ಆರೋಗ್ಯ ಹಾಗೂ ಸ್ವಚ್ಛ ಪರಿಸರವನ್ನು ನಿರ್ಮಿಸುವಂತಾಗಲಿ ಎಂದು ಭಾರತದ ಘನತೆವೆತ್ತ ರಾಷ್ಟ್ರಪತಿಗಳಾದ ಶ್ರೀಮತಿ ಪ್ರತಿಭಾದೇವಿ ಸಿಂಗ್ ಪಾಟಿಲ್ ರವರು ಹಾರೈಸಿದರು.

ಗ್ರಾಮೀಣ ಪ್ರದೇಶಗಳಲ್ಲಿನ ಎಲ್ಲ ಕುಟುಂಬಗಳು ಶೌಚಾಲಯಗಳನ್ನು ಹೊಂದಿ ಬಳಸುವ ಮೂಲಕ ಬಯಲು ಮಲ ವಿಸರ್ಜನೆಯನ್ನು ತೊಡೆದುಹಾಕಿ, ಗ್ರಾಮಗಳಲ್ಲಿನ ಎಲ್ಲ ಶಾಲೆ ಹಾಗೂ ಅಂಗನವಾಡಿಗಳಲ್ಲಿ ಶೌಚಾಲಯ ಸೌಲಭ್ಯಗಳನ್ನು ಒದಗಿಸಿ, ಗ್ರಾಮಗಳಲ್ಲಿ ಘನ ಹಾಗೂ ದ್ರವ ತ್ಯಾಜ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುವ ಮೂಲಕ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಿದ ಗ್ರಾಮ ಪಂಚಾಯಿತಿಗಳನ್ನು ಉತ್ತೇಜಿಸುವ ಸಲುವಾಗಿ ಕೇಂದ್ರ ಸರ್ಕಾರ 'ನಿರ್ಮಲ ಗ್ರಾಮ ಪುರಸ್ಕಾರ' ನೀಡಿ ಗೌರವಿಸುತ್ತಿರುವುದು ನೈರ್ಮಲ್ಯದ ಸಾಧನೆಗೆ ಉತ್ತೇಜನಕಾರಿಯಾಗಿದೆ.

ಇಡೀ ರಾಷ್ಟ್ರದಲ್ಲಿಯೇ ಸಂಪೂರ್ಣ ಸ್ವಚ್ಛತಾ ಆಂದೋಲನದ ಅನುಷ್ಠಾನದಲ್ಲಿ ಅತ್ಯುತ್ತಮ ಸಾಧನೆ ಮಾಡಿದ 3 ಜಿಲ್ಲೆಗಳ ಪೈಕಿ ಕರ್ನಾಟಕ ರಾಜ್ಯದ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್ ಸಹ ಒಂದಾಗಿದೆ. ಇದರೊಂದಿಗೆ ಮಂಗಳೂರು ಮತ್ತು ಸುಳ್ಯ ತಾಲ್ಲೂಕು ಪಂಚಾಯತ್‌ಗಳು ಹಾಗೂ ರಾಜ್ಯದ ವಿವಿಧ ಜಿಲ್ಲೆಗಳ 103 ಗ್ರಾಮ ಪಂಚಾಯತ್‌ಗಳು ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಪಾತ್ರವಾಗುವ ಮೂಲಕ ಕರ್ನಾಟಕದ ರಾಜ್ಯದ ಹಿರಿಮೆಯನ್ನು ಎತ್ತಿಹಿಡಿದಿವೆ.

ಈ ಸಮಾರಂಭದಲ್ಲಿ ಕೇಂದ್ರ ಸರ್ಕಾರದ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರಾದ ಶ್ರೀ ಜೈರಾಮ್ ರಮೇಶ್‌ರವರು, ಮಾನ್ಯ ಪಂಚಾಯತ್ ರಾಜ್ ಸಚಿವರಾದ ಶ್ರೀ ಕಿಶೋರ್ ಚಂದ್ರದೇವ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಮಂತ್ರಾಲಯದ ಕಾರ್ಯದರ್ಶಿಗಳಾದ ಶ್ರೀಮತಿ ವಿಲಾಸಿನಿ ರಾಮಚಂದ್ರನ್, ವಿವಿಧ ರಾಜ್ಯಗಳ ಸಚಿವರುಗಳು, ಪಂಚಾಯತ್ ರಾಜ್ ಸಂಸ್ಥೆಗಳ ಪ್ರತಿನಿಧಿಗಳು ಹಾಗೂ ಹಿರಿಯ ಅಧಿಕಾರಿಗಳು ಪಾಲ್ಗೊಂಡಿದ್ದರು. ❑

## ಕರ್ನಾಟಕ ರಾಜ್ಯವು ಪಂಚಾಯತ್ ಸಬಲೀಕರಣ ಹಾಗೂ ಉತ್ತರದಾಯಿತ್ವಕ್ಕಾಗಿ ಸತತವಾಗಿ ಮೂರನೇ ಬಾರಿ ಪಡೆಯುತ್ತಿರುವ ಕೇಂದ್ರ ಸರ್ಕಾರದ ಪ್ರಶಸ್ತಿ



ಕೇಂದ್ರದ ಪಂಚಾಯತ್ ಸಚಿವರಾದ ಮಾನ್ಯಶ್ರೀ ವಿ. ಕಿಶೋರ ಚಂದ್ರ, ಗ್ರಾಮೀಣಾಭಿವೃದ್ಧಿ ಸಚಿವರಾದ ಮಾನ್ಯಶ್ರೀ ಜಯರಾಮ್ ರಮೇಶ್, ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರಾದ ಮಾನ್ಯಶ್ರೀ ಜಗದೀಶ್ ಶೆಟ್ಟರ್, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಕಾರ್ಯದರ್ಶಿಗಳಾದ ಡಾ. ಶಾಲಿನಿ ರಜನೀಶ್ ಮತ್ತು ಪಂಚಾಯತ್ ರಾಜ್ ಸಂಸ್ಥೆಯ ಅಧ್ಯಕ್ಷರುಗಳು ಹಾಜರಿದ್ದರು.

ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿಗೆ 25 ಲಕ್ಷ. ಚಿಕ್ಕಮಗಳೂರು ಜಿಲ್ಲೆಯ ಕೊಪ್ಪ ತಾಲ್ಲೂಕು ಪಂಚಾಯತಿ, ಬಸವ ಕಲ್ಯಾಣ ತಾಲ್ಲೂಕು ಪಂಚಾಯತಿಗೆ ತಲಾ 15 ಲಕ್ಷ. ರಾಮನಗರ ಜಿಲ್ಲೆಯ ಇಟ್ಟಮಡು ಗ್ರಾಮ ಪಂಚಾಯತಿ, ಬೀದರ ಜಿಲ್ಲೆಯ ಘಾಟ್ ಬೊರಾಳ್ ಗ್ರಾಮ ಪಂಚಾಯತಿ, ಧಾರವಾಡ ಜಿಲ್ಲೆಯ ಗುಮ್ಮಗೋಳ ಗ್ರಾಮ ಪಂಚಾಯತಿ, ಉಡುಪಿ ಜಿಲ್ಲೆ ಮಡಮಕ್ಕಿ ಗ್ರಾಮ ಪಂಚಾಯತಿಗೆ ತಲಾ 13 ಲಕ್ಷ ರೂಪಾಯಿ ನಗದು ಬಹುಮಾನ ದೊರೆತಿದೆ.



# ದಕ್ಷಿಣ ಕನ್ನಡ ಜಿಲ್ಲೆಗೆ ರಾಷ್ಟ್ರ ಪ್ರಶಸ್ತಿಯ ಹಿರಿಮೆ

ಸಂಪೂರ್ಣ ಸ್ವಚ್ಛತಾ ಆಂದೋಲನದ ಅನುಷ್ಠಾನದಲ್ಲಿ ಮೊದಲ ಸಾಲಿನಲ್ಲಿ ನಿಲ್ಲುವ ಜಿಲ್ಲೆ ದಕ್ಷಿಣ ಕನ್ನಡ. ಈ ಜಿಲ್ಲೆಯ ಎಲ್ಲಾ ತಾಲ್ಲೂಕುಗಳು ಹಾಗೂ ಎಲ್ಲಾ 203 ಗ್ರಾಮ ಪಂಚಾಯಿತಿಗಳು ರಾಷ್ಟ್ರಪತಿಗಳು ನೀಡುವ ನಿರ್ಮಲ ಗ್ರಾಮ ಪುರಸ್ಕಾರದ ಗೌರವಕ್ಕೆ ಪಾತ್ರವಾಗಿವೆ.

ನೈಸರ್ಗಿಕ ಸಂಪತ್ತು, ಪ್ರಕೃತಿ ಸೌಂದರ್ಯ, ಪೌರಾಣಿಕ ಕ್ಷೇತ್ರಗಳಿಗೆ ಹೆಸರುವಾಸಿಯಾಗಿರುವ ದಕ್ಷಿಣ ಕನ್ನಡ ಜಿಲ್ಲೆಯು ವಿವಿಧ ಧಾರ್ಮಿಕ ಕ್ಷೇತ್ರ ಮತ್ತು ಸಂಸ್ಕೃತಿಗಳಿಗೆ ತಾಯ್ನಾಡಾಗಿದೆ. ಜಿಲ್ಲೆಯು ಶೈಕ್ಷಣಿಕ, ಆರ್ಥಿಕ, ವಾಣಿಜ್ಯ, ಕೃಷಿ ಕ್ಷೇತ್ರಗಳಲ್ಲೂ ರಾಜ್ಯಕ್ಕೆ ವಿಶೇಷ ಕೊಡುಗೆಯನ್ನು ಕೊಡುವ ಮೂಲಕ ಅಭಿವೃದ್ಧಿ ಪಥದಲ್ಲಿ ಸಾಗುತ್ತಿದೆ. ಅರಬ್ಬಿ ಸಮುದ್ರದ ಕಿನಾರೆಯಲ್ಲಿರುವ ಮಂಗಳೂರು, ಪಶ್ಚಿಮ ಘಟ್ಟದ ತಪ್ಪಲಲ್ಲಿರುವ ಬೆಳ್ತಂಗಡಿ, ಕಾಡುಗಳ ಮಧ್ಯ ಕೊಡಗಿನ ಪಕ್ಕದಲ್ಲಿರುವ ಸುಳ್ಯ, ತೆಂಗು, ಕಂಗುಗಳಿಂದ ಕಂಗೊಳಿಸುತ್ತಿರುವ ಪುತ್ತೂರು ಮತ್ತು ಬಂಟ್ವಾಳ ತಾಲ್ಲೂಕುಗಳಲ್ಲಿ ಒಟ್ಟು 368 ಗ್ರಾಮಗಳಿದ್ದು, 203 ಗ್ರಾಮ ಪಂಚಾಯತ್‌ಗಳಿವೆ. ಬುದ್ಧಿವಂತರ ಜಿಲ್ಲೆ ಎನಿಸಿಕೊಂಡಿರುವ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕ್ಷರತೆ ಮಟ್ಟ ಶೇ 83.4 ಅದರಲ್ಲೂ ಮಹಿಳೆಯರ ಸಾಕ್ಷರತೆ ಮಟ್ಟ ಶೇ 77.21 ಇದೆ. ಆದರೂ ಸಂಪೂರ್ಣ ಸ್ವಚ್ಛತಾ ಆಂದೋಲನದಡಿ ಜಿಲ್ಲೆಯ ಎಲ್ಲ 2,43,568 ಕುಟುಂಬಗಳೂ ಶೌಚಾಲಯಗಳನ್ನು ನಿರ್ಮಿಸಿಕೊಂಡು ಬಳಸುತ್ತಿವೆ ಹಾಗೂ ಸ್ವಚ್ಛತೆಯ ಅಭ್ಯಾಸಗಳನ್ನು ತಪ್ಪದೆ ಪಾಲಿಸುತ್ತಿವೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಶೇ. 100 ವೈಯಕ್ತಿಕ ಶೌಚಾಲಯ ಹೊಂದಿದ ಸ್ವ ಸಹಾಯ ಒಕ್ಕೂಟಕ್ಕೆ ನಿರ್ಮಲ ಒಕ್ಕೂಟ ಎಂಬ ಪ್ರಶಸ್ತಿ ಹಾಗೂ ಕುಟುಂಬಗಳಿಗೆ ರೂ. 500/- ಸಹಾಯಧನ ಹಾಗೂ ಸ್ವ ಸಹಾಯ ಸಂಘಗಳ ಮೂಲಕ ಬಡ್ಡಿ ರಹಿತ ಆಂತರಿಕ ಸಾಲ ನೀಡುವ ಮೂಲಕ ಆಂದೋಲನಕ್ಕೆ ಸಹಕಾರ ಹಾಗೂ ಸಹಭಾಗಿತ್ವ ನೀಡಿರುವುದು ಅತ್ಯಂತ ಸ್ಮರಣೀಯವಾದುದು.





ಸಂಪೂರ್ಣ ಸ್ವಚ್ಛತಾ ಆಂದೋಲನದ ಅಡಿಯಲ್ಲಿ ಶೇ. 100 ಪ್ರಗತಿ ಸಾಧಿಸಿದ್ದು, ಜಿಲ್ಲೆಯ ಎಲ್ಲಾ ಗ್ರಾಮ ಪಂಚಾಯತ್‌ಗಳು, 5 ತಾಲ್ಲೂಕು ಪಂಚಾಯತ್‌ಗಳು ಹಾಗೂ ಇಡೀ ಜಿಲ್ಲೆ ನಿರ್ಮಲ ಗ್ರಾಮ ಪುರಸ್ಕಾರ ಪಡೆಯುವ ಮೂಲಕ ಕರ್ನಾಟಕ ರಾಜ್ಯದಲ್ಲಿ ಸಂಪೂರ್ಣ ಸ್ವಚ್ಛತೆ ಸಾಧಿಸಿದ ಹಾಗೂ ಕೇಂದ್ರ ಸರ್ಕಾರದ ನಿರ್ಮಲ ಗ್ರಾಮ ಪುರಸ್ಕಾರ ಪಡೆದ ಪ್ರಥಮ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

**ಸಾಧನೆಯ ಹಾದಿಯಲ್ಲಿ ಸಹಸ್ರಾರು ಕೈಗಳು....!**

ಈ ಸಾಧನೆಯ ಹಿಂದೆ ದುಡಿದ ಕೈಗಳು ಅಸಂಖ್ಯ. ಅಧಿಕಾರಿ ವರ್ಗದವರಿಂದ ಹಿಡಿದು ಚುನಾಯಿತ ಪ್ರತಿನಿಧಿಗಳು, ಸ್ವಯಂ ಸೇವಾ ಸಂಘ ಸಂಸ್ಥೆಗಳು ಹಾಗೂ ಸ್ವಸಹಾಯ ಸಂಘಗಳ ಸಹಕಾರ ಪ್ರಮುಖ ಪಾತ್ರವಹಿಸಿದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮಾನ್ಯ ಪ್ರಧಾನ ಕಾರ್ಯದರ್ಶಿಗಳು, ಕರ್ನಾಟಕ ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ಸಂಸ್ಥೆಯ ಮಾನ್ಯ ನಿರ್ದೇಶಕರು ಹಾಗೂ ಇತರ ಹಿರಿಯ ಅಧಿಕಾರಿಗಳ ಮಾರ್ಗದರ್ಶನ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ನೇತೃತ್ವದ ಅಡಿಯಲ್ಲಿ ಅಧಿಕಾರಿಗಳು ಹಾಗೂ ಜನಪ್ರತಿನಿಧಿಗಳ ಸಹಕಾರ ಹಾಗೂ ಸಹಭಾಗಿತ್ವಗಳು ಆಂದೋಲನದ ಯಶಸ್ಸಿಗೆ ಕಾರಣವಾಗಿವೆ.

ಜಿಲ್ಲಾ ಮಟ್ಟದಿಂದ ಹಿಡಿದು ಗ್ರಾಮ ಮಟ್ಟದವರೆಗಿನ ಅಧಿಕಾರಿಗಳಿಗೆ ವಿವಿಧ ಹಂತಗಳಲ್ಲಿ ಸಮಾಲೋಚನಾ ಸಭೆಗಳನ್ನು ನಡೆಸುವ ಮೂಲಕ ಉತ್ತೇಜನ ನೀಡಲಾಯಿತು. ಜನಶಿಕ್ಷಣ ಟ್ರಸ್ಟ್ ಹಾಗೂ ಜಿಲ್ಲಾ ನೆರವು ಘಟಕದ ಸಹಭಾಗಿತ್ವದೊಂದಿಗೆ ಗ್ರಾಮಗಳಿಗೆ ಭೇಟಿ ನೀಡಿ, ಮನೆ-ಮನೆ ಭೇಟಿ, ಶ್ರಮದಾನ, ಜಾಥ, ಬೀದಿ ನಾಟಕ, ಚಲನಚಿತ್ರ, ಯಕ್ಷಗಾನ, ಜಾಗೃತಿ ಶಿಬಿರಗಳನ್ನು ಏರ್ಪಡಿಸುವ ಮೂಲಕ ಜಿಲ್ಲೆಯ 203 ಗ್ರಾಮ ಪಂಚಾಯತ್‌ಗಳಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನದ ಜಾಗೃತಿ ಮೂಡಿಸಲಾಯಿತು. ಸ್ವಚ್ಛತೆಯ ಸಾಧನೆಯಲ್ಲಿ ಶಾಲಾ ಮಕ್ಕಳು, ಶಿಕ್ಷಕರು ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಸಹಕಾರ ಶ್ಲಾಘನೀಯವಾದುದು.

ಬೆಳ್ತಂಗಡಿ ತಾಲೂಕಿನ ವೇಣೂರು ಕ್ಷೇತ್ರದ ಜಿಲ್ಲಾ ಪಂಚಾಯತ್ ಸದಸ್ಯರು, ಮಾಜಿ ಉಪಾಧ್ಯಕ್ಷ, ಶ್ರೀ ಧರಣೇಂದ್ರ ಕುಮಾರ್, ಇವರ ನೇತೃತ್ವದಲ್ಲಿ ತಮ್ಮ ಕ್ಷೇತ್ರದ 8 ಗ್ರಾಮ ಪಂಚಾಯತ್‌ಗಳು ಪ್ರಥಮ ಬಾರಿಗೆ ನಿರ್ಮಲ ಗ್ರಾಮ ಪುರಸ್ಕಾರ ಪಡೆಯುವಲ್ಲಿ ಯಶಸ್ವಿಯಾದವು. ಅದೇ ರೀತಿ ಶಿಬಾಜೆ, ಕಾಶಿಪಟ್ನ, ಮಡಂತ್ಯಾರು, ಬನ್ನೂರು, ಆಲೆಟ್ಟಿ, ಹಳೆಯಂಗಡಿ ಗ್ರಾಮ ಪಂಚಾಯತ್‌ಗಳು ಮಾದರಿ ಗ್ರಾಮ ಪಂಚಾಯತ್‌ಗಳ ಪಟ್ಟಿಯಲ್ಲಿ ಸೇರ್ಪಡೆಯಾದವು ಜಿಲ್ಲೆಗೆ ಯೂನಿಸೆಫ್ ತಂಡ, ಅಪಘಾನಿಸ್ಥಾನ, ನೈಜೀರಿಯಾ, ಜಿಂಬಾಬ್ವೆ, ಝಾಂಬಿಯಾ, ಜಿಬೋತ್, ಮೊಝಾಂಬಿ ದೇಶದ ಪ್ರತಿನಿಧಿಗಳು ಮತ್ತು ರಾಷ್ಟ್ರಮಟ್ಟದಿಂದ ಒರಿಸ್ಸಾ, ಕೇರಳ, ತಮಿಳ್ನಾಡು ರಾಜ್ಯದ ತಂಡಗಳು ಹಾಗೂ ಧಾರವಾಡ, ಮೈಸೂರು, ಗುಲ್ಬರ್ಗ, ಬೆಳಗಾಂವ ಮುಂತಾದ ಜಿಲ್ಲೆಗಳ ತಂಡಗಳು ಕ್ಷೇತ್ರ ಅಧ್ಯಯನಕ್ಕಾಗಿ ಭೇಟಿ ನೀಡಿ ಜಿಲ್ಲೆಯಲ್ಲಿ ಆದ ಸಾಧನೆಯ ಬಗ್ಗೆ ಶ್ಲಾಘಿಸಿರುತ್ತಾರೆ.

ಜಿಲ್ಲೆಯ ಪ್ರತೀ ಗ್ರಾಮ ಪಂಚಾಯತ್‌ಗಳಿಗೆ ನೋಡಲ್ ಅಧಿಕಾರಿಗಳನ್ನು ನೇಮಿಸಿ ಅವರ ಉಸ್ತುವಾರಿಯಲ್ಲಿ ಗ್ರಾಮ ಪಂಚಾಯತ್‌ಗಳ ಪ್ರಗತಿಯ ಅನುಸರಣೆ ಮಾಡಿದ ಪರಿಣಾಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸ್ವಚ್ಛತೆಯ ಕಾರ್ಯಗಳು ತೀವ್ರಗತಿಯಲ್ಲಿ ನಡೆಯಲು ಕಾರಣವಾಯಿತು.

ಜಿಲ್ಲೆಯ ಎಲ್ಲ ತಾಲ್ಲೂಕು ಕೇಂದ್ರ ಸ್ಥಾನಗಳಲ್ಲಿ ಸ್ಯಾನಿಟರಿ ಮಾರ್ಟ್ ಲಭ್ಯವಿದ್ದು, ಪರಿಕರಗಳ ಸರಬರಾಜಿಗೆ ಸೂಕ್ತ ವ್ಯವಸ್ಥೆ ಕಲ್ಪಿಸಲಾಯಿತು. ಜೊತೆಗೆ ಸ್ಥಳೀಯ ದಾನಿಗಳು ಶೌಚಾಲಯಗಳ ನಿರ್ಮಾಣಕ್ಕಾಗಿ ಬೇಸಿನ್, ಪೈಪ್, ಕಲ್ಲು, ಸಿಮೆಂಟ್, ಚಪ್ಪಡಿ

ಕಲ್ಲುಗಳನ್ನು ಉಚಿತವಾಗಿ ನೀಡುವ ಮೂಲಕ ಪ್ರೋತ್ಸಾಹಿಸಿದ್ದಾರೆ. ಪ್ರತೀ ಗ್ರಾಮ ಪಂಚಾಯತ್‌ನಲ್ಲಿ ನೈರ್ಮಲ್ಯಕ್ಕೆ ಸಂಬಂಧಿಸಿದಂತೆ ಶೌಚಾಲಯ ಹೊಂದಿ ಮಳೆ ಕೊಯ್ಲು ಯೋಜನೆ ಅಳವಡಿಸಿ ಕೈತೋಟ ನಿರ್ಮಿಸಿದ ಕುಟುಂಬಕ್ಕೆ ತೆರಿಗೆಯಲ್ಲಿ ಶೇ 20. ವಿನಾಯಿತಿ ನೀಡುವಂತಹ ಉತ್ತಮ ನೀತಿಯೊಂದಿಗೆ ಸ್ವಚ್ಛತಾ ನೀತಿಯನ್ನು ರೂಪಿಸಲಾಗಿರುತ್ತದೆ. ಜೊತೆಗೆ ವಾರ್ಡ್‌ವಾರು ಸ್ವಚ್ಛತಾ ಸಮಿತಿಯನ್ನು ರಚಿಸಲಾಗಿದೆ.

ಶಾಲೆ ಮತ್ತು ಅಂಗನವಾಡಿ ಕೇಂದ್ರಗಳಲ್ಲಿ ಮಕ್ಕಳಲ್ಲಿ ಜಾಗೃತಿ ಮೂಡಿಸುವುದರ ಮೂಲಕ ಮಕ್ಕಳಿಂದ ಕುಟುಂಬಕ್ಕೆ ಮಾಹಿತಿಯನ್ನು ತಲುಪಿಸಲಾಗಿದೆ. ಪ್ರತೀ ಶಾಲೆಯಲ್ಲಿ ಮಂತ್ರಿಮಂಡಲ ರಚಿಸುವ ಮೂಲಕ ಶಾಲೆಯಲ್ಲಿ ನೈರ್ಮಲ್ಯದ ಸುಸ್ಥಿರತೆಯನ್ನು ಕಾಯ್ದುಕೊಳ್ಳಲಾಗುತ್ತಿದೆ. ಶಾಲಾಭಿವೃದ್ಧಿ ಸಮಿತಿ, ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ ಹಾಗೂ ವಾರ್ಡ್‌ವಾರು ಸ್ವಚ್ಛತಾ ಸಮಿತಿಗಳು ತಮ್ಮ ವ್ಯಾಪ್ತಿಯ ಶಾಲೆ, ಅಂಗನವಾಡಿ, ಕಾಲೋನಿಗಳಿಗೆ ಭೇಟಿ ನೀಡುವ ಮೂಲಕ ನಿರಂತರತೆಯನ್ನು ಕಾಯ್ದುಕೊಳ್ಳುವ ವ್ಯವಸ್ಥೆ ರೂಪಿಸಲಾಗಿದೆ.

ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮೀಣಾಭಿವೃದ್ಧಿ ಸಂಸ್ಥೆಯು ಶೇ. 100 ವೈಯಕ್ತಿಕ ಶೌಚಾಲಯ ಹೊಂದಿದ ಸ್ವ ಸಹಾಯ ಒಕ್ಕೂಟಕ್ಕೆ ನಿರ್ಮಲ ಒಕ್ಕೂಟ ಎಂಬ ಪ್ರಶಸ್ತಿ ಹಾಗೂ ಕುಟುಂಬಗಳಿಗೆ ರೂ. 500/– ಸಹಾಯಧನ ಹಾಗೂ ಸ್ವ ಸಹಾಯ ಸಂಘಗಳ ಮೂಲಕ ಬಡ್ಡಿ ರಹಿತ ಆಂತರಿಕ ಸಾಲ ನೀಡುವ ಮೂಲಕ ಆಂದೋಲನಕ್ಕೆ ಸಹಕಾರ ಹಾಗೂ ಸಹಭಾಗಿತ್ವ ನೀಡಿರುವುದು ಅತ್ಯಂತ ಸ್ಮರಣೀಯವಾದುದು.



ಸ್ವಚ್ಛತೆ ಕಡೆಗೆ ಗ್ರಾಮ ನಡಿಗೆ ಎಂಬ ಕಾರ್ಯಕ್ರಮದೊಂದಿಗೆ ಜಿಲ್ಲೆಯ ಎಲ್ಲಾ ಇಲಾಖೆಗಳು, ಮೂಲಭೂತ ಸೌಕರ್ಯಗಳ ಸಹಿತ ತಮ್ಮ



ಇಲಾಖೆಯ ಎಲ್ಲಾ ಸೇವಾ ಸೌಲಭ್ಯಗಳು ಗ್ರಾಮದ ಅತೀ ಬಡ ಕುಟುಂಬಗಳಿಗೆ ತಲುಪಿಸಲು ಸಹಭಾಗಿತ್ವದಿಂದ ಕಾರ್ಯ ನಿರ್ವಹಿಸಿದ್ದು, ಜಿಲ್ಲೆಯ ಸಂಪೂರ್ಣ ಸ್ವಚ್ಛತೆಯ ಸಾಧನೆಗೆ ಸಹಕಾರಿಯಾಗಿರುತ್ತದೆ.

ಇವೆಲ್ಲವುಗಳ ಜೊತಗೆ ಪತ್ರಿಕೆ, ಟೀವಿ, ರೇಡಿಯೋ ಮಾಧ್ಯಮಗಳು, ಜಿಲ್ಲೆಯಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನ ದಡಿ ಆದ ಪ್ರತಿಯೊಂದು ಕಾರ್ಯಕ್ರಮಗಳನ್ನು ವಿಶೇಷ ರೀತಿಯಲ್ಲಿ ಬಿತ್ತರಿಸುವ ಮೂಲಕ ಆಂದೋಲನಕ್ಕೆ ತೀವ್ರ ಚಾಲನೆ ನೀಡಿವೆ.

ಈ ಎಲ್ಲ ಕಾರ್ಯತಂತ್ರಗಳ ಫಲವಾಗಿ ಇಡೀ ಜಿಲ್ಲೆಯಲ್ಲಿ ಸ್ವಚ್ಛತೆಯ ಕೆಲಸಗಳು ಸಮರೋಪಾದಿಯಲ್ಲಿ ನಡೆದವು. ಜನಪ್ರತಿನಿಧಿಗಳು, ಅಧಿಕಾರಿಗಳು, ಸ್ವಯಂಸೇವಾ ಸಂಸ್ಥೆಗಳ ಪ್ರತಿನಿಧಿಗಳು, ಜನಸಮುದಾಯ ಹೀಗೆ ಎಲ್ಲರ ಸಾಮೂಹಿಕ ಪ್ರಯತ್ನದ ಫಲವಾಗಿ ಜಿಲ್ಲೆಯ ಎಲ್ಲ ಗ್ರಾಮ ಪಂಚಾಯಿತಿಗಳು, ತಾಲೂಕು ಪಂಚಾಯಿತಿಗಳು ಹಾಗೂ ಇಡೀ ಜಿಲ್ಲೆ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಿ ನಿರ್ಮಲ ಗ್ರಾಮ ಪುರಸ್ಕಾರದ ಮನ್ನಣೆಗೆ ಪಾತ್ರವಾಗಿದೆ. ಈ ಮೂಲಕ ಜಿಲ್ಲೆಯಲ್ಲಿ ಸಂಪೂರ್ಣ ಸ್ವಚ್ಛತೆಯ ಸಾಧನೆಗೆ ಹೊಸ ಭಾಷ್ಯ ಬರೆದ ದಕ್ಷಿಣ ಕನ್ನಡ ಜಿಲ್ಲೆಗೆ ರಾಜ್ಯ, ಅಂತರರಾಜ್ಯ ಹಾಗೂ ವಿವಿಧ ದೇಶಗಳ ಜನರು ಸ್ವಚ್ಛತೆಯ ಸಾಧನೆಯನ್ನು ನೋಡಲು ಭೇಟಿ ನೀಡುತ್ತಿದ್ದಾರೆ. ಅಫಘಾನಿಸ್ಥಾನ, ನೈಜೀರಿಯಾ, ಜಿಂಬಾಬ್ವೆ, ಝಾಂಬಿಯಾ, ಜಿಬೋತ್, ಮೊಝಾಂಬೆ ಮುಂತಾದ ದೇಶಗಳ ತಂಡವನ್ನೊಳಗೊಂಡ ಯುನಿಸೆಫ್ ಪ್ರತಿನಿಧಿಗಳು ದಕ್ಷಿಣ ಕನ್ನಡ ಜಿಲ್ಲೆಗೆ ಭೇಟಿ ನೀಡಿ ಸ್ವಚ್ಛತೆಯ ಸಾಧನೆಯನ್ನು ಕಂಡು ಪ್ರಶಂಶಿಸಿದ್ದಾರೆ. ಹಾಗೆಯೇ ಒರಿಸ್ಸಾ, ಕೇರಳ, ತಮಿಳುನಾಡು,




ರಾಜ್ಯದ ತಂಡಗಳು ಹಾಗೂ ನಮ್ಮದೇ ರಾಜ್ಯದ ಹಲವಾರು ಜಿಲ್ಲೆಗಳ ತಂಡಗಳು ಕ್ಷೇತ್ರ ಅಧ್ಯಯನಕ್ಕಾಗಿ ಭೇಟಿ ನೀಡಿದ ಹೆಗ್ಗಳಿಕೆಗೆ ದಕ್ಷಿಣ ಕನ್ನಡ ಜಿಲ್ಲೆ ಪಾತ್ರವಾಗಿದೆ.

## ಸುಸ್ಥಿರತೆಗಾಗಿ ಕೈಗೊಂಡ ಕ್ರಮಗಳು

ನಿರ್ಮಲ ಗ್ರಾಮ ಪುರಸ್ಕಾರ ಪಡೆದ ಜಿಲ್ಲೆಯ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ಸುಸ್ಥಿರತೆಯನ್ನು ಕಾಯ್ದುಕೊಳ್ಳುವಲ್ಲಿ ಘನ ಹಾಗೂ ದ್ರವ ತ್ಯಾಜ್ಯಗಳ ಸೂಕ್ತ ನಿರ್ವಹಣೆ ಹಾಗೂ ವಿಲೇವಾರಿ ಕುರಿತು ಹೆಚ್ಚಿನ ಆದ್ಯತೆ ನೀಡಲಾಗಿದೆ. ಇದಕ್ಕಾಗಿ ಮಿತವ್ಯಯ, ಸರಳ ಮತ್ತು ವೈಜ್ಞಾನಿಕ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಗಿದೆ. ಗ್ರಾಮ ಪಂಚಾಯಿತಿಗಳನ್ನು ಅದರ ಜನಸಂಖ್ಯೆ ಹಾಗೂ ಉತ್ಪನ್ನವಾಗುವ ತ್ಯಾಜ್ಯಗಳ ಆಧಾರದಲ್ಲಿ ವರ್ಗೀಕರಿಸಿ ಈ ಪೈಕಿ ಜಿಲ್ಲೆಯ ಐದು ತಾಲ್ಲೂಕುಗಳ ಐದು ಗ್ರಾಮ ಪಂಚಾಯಿತಿಗಳನ್ನು ಪೈಲಟ್ ಪ್ರಾಜೆಕ್ಟ್‌ಗೆ ಆಯ್ಕೆ ಮಾಡಿ ತ್ಯಾಜ್ಯ ನಿರ್ವಹಣಾ ವಿಧಾನವನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಗ್ರಾಮ ಪಂಚಾಯಿತಿಗಳ ತ್ಯಾಜ್ಯದ ಪ್ರಮಾಣ ಹಾಗೂ ಅವಶ್ಯಕತೆಗಳಿಗನುಗುಣವಾಗಿ ಸ್ವಚ್ಛತಾ ವಾಹನದ ವ್ಯವಸ್ಥೆ ಮಾಡಲಾಗಿದೆ. ಪಂಚಾಯಿತಿಗಳಲ್ಲಿ ಸ್ವಚ್ಛತಾ ನೀತಿ ರೂಪಿಸಿ ವರ್ತಕರಿಂದ ಮಾಸಿಕ ಶುಲ್ಕ ವಸೂಲಿಯೊಂದಿಗೆ ತ್ಯಾಜ್ಯ ನಿರ್ವಹಣೆಯಲ್ಲಿ ಸುಸ್ಥಿರತೆ ಸಾಧಿಸಲಾಗಿದೆ. ಮಹಾತ್ಮಾ ಗಾಂಧಿ ಉದ್ಯೋಗ ಖಾತರಿ ಯೋಜನೆಯಡಿಯಲ್ಲಿ ಜಿಲ್ಲೆಯ ಎಲ್ಲ ಶಾಲೆ ಮತ್ತು ಅಂಗನವಾಡಿಗಳಲ್ಲಿ ತ್ಯಾಜ್ಯ ಗುಂಡಿ ಹಾಗೂ ಇಂಗು ಗುಂಡಿಗಳ ನಿರ್ಮಾಣಕ್ಕೆ ಅವಕಾಶ ಕಲ್ಪಿಸಲಾಗಿದೆ. ಮನೆಗಳಲ್ಲಿಯೇ ಕಸದ ವಿಂಗಡಣೆಯನ್ನು ಉತ್ತೇಜಿಸಲಾಗಿದೆ. ಪ್ಲಾಸ್ಟಿಕ್ ಬಳಕೆ ಮಿತಗೊಳಿಸಿ ಪರಿಸರ ಸಂರಕ್ಷಣೆಗೆ ಒತ್ತು ನೀಡಲಾಗಿದೆ. ಹೀಗೆ ಹಲವಾರು ವಿನೂತನ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಮೂಲಕ ಸ್ವಚ್ಛತೆಯಲ್ಲಿ ಸುಸ್ಥಿರತೆಯನ್ನು ನಿರ್ವಹಿಸಲಾಗುತ್ತಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳ ತಾಲೂಕಿನ ಕುರ್ನಾಡು ಗ್ರಾಮ ಪಂಚಾಯಿತಿಯಲ್ಲಿ ಘನ ತ್ಯಾಜ್ಯ ವಿಲೇವಾರಿ ಜೈವಿಕ ಘಟಕ ನಿರ್ಮಾಣ, ಹಸಿ ಕಸದಿಂದ ಸಾವಯವ ಗೊಬ್ಬರ ತಯಾರಿಕೆ ಮತ್ತು ಪ್ಲಾಸ್ಟಿಕ್‌ಗಳನ್ನು ಪ್ರತ್ಯೇಕಿಸಿ ಪ್ಲಾಸ್ಟಿಕ್ ಸೌಧದಲ್ಲಿ ಸಂಗ್ರಹ ಮಾಡಲಾಗುತ್ತಿದೆ. ವರ್ತಕರ ಸಹಕಾರದಿಂದ ಗ್ರಾಮೀಣ ಪ್ರದೇಶಗಳಲ್ಲಿ ಘನ ತ್ಯಾಜ್ಯ ವಸ್ತುಗಳ ಸೂಕ್ತ ವಿಲೇವಾರಿಗಾಗಿ ಸರಳ ಮಿತವ್ಯಯ ತಂತ್ರಜ್ಞಾನ ಅಳವಡಿಸಲಾಗಿದೆ. ಇದೇ ರೀತಿ ಬೆಳ್ತಂಗಡಿ ತಾಲ್ಲೂಕಿನ ಲಾಯ್ಲ, ಮಂಗಳೂರು ತಾಲೂಕಿನ ಮೆನ್ನಬೆಟ್ಟು, ಕಿನ್ನಿಗೋಳಿ, ಪುತ್ತೂರು ತಾಲ್ಲೂಕಿನ ಕಡಬ, ಬೆಳ್ತಂಗಡಿ ತಾಲ್ಲೂಕಿನ ಅಳಂದಡಿ ಗ್ರಾಮ ಪಂಚಾಯಿತಿಗಳಲ್ಲೂ ಸಹ ತ್ಯಾಜ್ಯ ವಿಲೇವಾರಿಗಾಗಿ ವಿನೂತನ ಕ್ರಮಗಳನ್ನು ಕೈಗೊಳ್ಳಲಾಗಿದೆ. ಜೊತೆಗೆ ಈಗಾಗಲೇ ಜಿಲ್ಲೆಯಲ್ಲಿ ನಿರ್ಮಾಣಗೊಂಡ ಗೃಹ ಶೌಚಾಲಯ, ಶಾಲಾ ಮತ್ತು ಅಂಗನವಾಡಿ ಶೌಚಾಲಯಗಳ ಬಳಕೆ ಮತ್ತು ನಿರ್ವಹಣೆ ಕುರಿತು ಉಸ್ತುವಾರಿ ಕೈಗೊಳ್ಳಲಾಗುತ್ತಿದೆ. ಒಟ್ಟಾರೆ ಇಂದು ದಕ್ಷಿಣ ಕನ್ನಡ ಜಿಲ್ಲೆ ಸಾಕ್ಷರರ ನಾಡು ಎಂಬ ಹೆಸರಿನ ಜೊತೆಗೆ ಸಂಪೂರ್ಣ ಸ್ವಚ್ಛ ಹಾಗೂ ಸುಂದರ ನಾಡು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಇಂತಹುದೊಂದು ಸಾಧನೆಯ ಹಿಂದೆ ನೂರಾರು, ಸಹಸ್ರಾರು ಕೈಗಳು ದುಡಿದಿವೆ. ಗ್ರಾಮ ಪಂಚಾಯಿತಿಯಿಂದ ಹಿಡಿದು ಜಿಲ್ಲಾ ಪಂಚಾಯಿತಿವರೆಗಿನ ಎಲ್ಲ ಹಂತಗಳ ಅಧಿಕಾರಿಗಳು, ಚುನಾಯಿತ ಪ್ರತಿನಿಧಿಗಳು, ಸ್ವಯಂಸೇವಾ ಸಂಸ್ಥೆಗಳು, ಸ್ತ್ರೀಶಕ್ತಿ/ಸ್ವಸಹಾಯ ಸಂಘಗಳು, ಯುವಕ/ಯುವತಿ ಮಂಡಲಗಳು, ಹೀಗೆ ಸಹಸ್ರ-ಸಹಸ್ರ ಕೈಗಳು ಜಿಲ್ಲೆಯ ಸ್ವಚ್ಛತೆಯ ಕಾರ್ಯದಲ್ಲಿ ಕೆಲಸಮಾಡಿವೆ. ಹೀಗೆ ಸಾಮೂಹಿಕ ಹೊಣೆಗಾರಿಕೆ ಹಾಗೂ ಶ್ರಮದ ಪ್ರತಿಫಲವಾಗಿ ಇಂದು ದಕ್ಷಿಣ ಕನ್ನಡ ಜಿಲ್ಲೆ ಸಂಪೂರ್ಣ ಸ್ವಚ್ಛ ಜಿಲ್ಲೆಯಾಗಿ ರೂಪುಗೊಂಡು ಎಲ್ಲರ ಗಮನ ಸೆಳೆದಿದೆ.

❑

ಯಶೋಗಾಥೆ

# ಬೆಕ್ಕಿನಕೇರಿ ನೈರ್ಮಲ್ಯ ಮಾದರಿ



ಅರ್ಜುನ ಎಸ್ ಕಡೆಟ್ಟಿ *

ಭಾರತ ಹಳ್ಳಿಗಳ ದೇಶ. ಗ್ರಾಮೀಣ ಭಾಗದ ಅಭಿವೃದ್ಧಿಯೇ ದೇಶದ ಪ್ರಗತಿ ಎಂಬುದಾಗಿ ಗಾಂಧೀಜಿಯವರು ಹೇಳಿದ್ದರು. ಅದರಂತೆ ಕುಗ್ರಾಮವೊಂದು ರಾಜ್ಯದ ಅತ್ಯಂತ ಪ್ರಗತಿಪರ ಗ್ರಾಮವಾಗಿ ಮಾರ್ಪಟ್ಟ ಕಥೆಯಿದು.

ಬೆಳಗಾವಿ ತಾಲೂಕಿನ ಬೆಕ್ಕಿನಕೇರಿ ಗ್ರಾಮ ಪಂಚಾಯತಿಯು 6250 ಜನಸಂಖ್ಯೆ ಹೊಂದಿದ್ದು, 1122 ಕುಟುಂಬಗಳನ್ನು ಹೊಂದಿದೆ. ಇದು ನಗರ ಪ್ರದೇಶಗಳ ಸೌಲಭ್ಯಗಳಿಗಿಂತಲೂ ಅಧಿಕವಾದ ಸೌಲಭ್ಯಗಳನ್ನು ಹೊಂದಿ ನಂದನವನವಾದಂತೆ ಭಾಸವಾಗುತ್ತಿದೆ.

ಬೆಳಗಾವಿ ಜಿಲ್ಲಾ ಪಂಚಾಯತಿಯು ಸಂಪೂರ್ಣ ಸ್ವಚ್ಛತಾ ಆಂದೋಲನ ಜಿಲ್ಲಾ ನೆರವು ಘಟಕದ ಸಿಬ್ಬಂದಿಗಳು ಗ್ರಾಮ ಪಂಚಾಯತಿಯಲ್ಲಿ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿಯು ಸಭೆ ನಡೆಸಿ ಅವರಿಗೆ ನೈರ್ಮಲ್ಯ ಮತ್ತು ಮಾದರಿ ಗ್ರಾಮದ ಪರಿಕಲ್ಪನೆ ಮಾಡುವಲ್ಲಿ ಯಶಸ್ವಿಯಾದರು. ನಂತರ ವಿಡಬ್ಲ್ಯುಎಸ್‌ಸಿಯವರು ಸಂಪೂರ್ಣ ಸ್ವಚ್ಛತಾ ಆಂದೋಲನದ ಜಿಲ್ಲಾ ನೆರವು ಘಟಕದೊಂದಿಗೆ ಗ್ರಾಮೀಣ ಭಾಗದ ಶಾಸಕರಾದ ಶ್ರೀ ಸಂಜಯ ಪಾಟೀಲ ಅವರೊಂದಿಗೆ ಚರ್ಚಿಸಿ ನೈರ್ಮಲ್ಯ ಮಾದರಿ ಗ್ರಾಮ ಮಾಡಲು ಪ್ರತಿಜ್ಞೆ ಮಾಡಿದರು.

ಗ್ರಾಮದ ಶಾಲಾ ಮಕ್ಕಳು ಹಾಗೂ ಸಮುದಾಯದವರಿಗೆ ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲಾಗಿದೆ.



* ಜಿಲ್ಲಾ ಸಂಯೋಜಕರು, ಸಂಪೂರ್ಣ ಸ್ವಚ್ಛತಾ ಆಂದೋಲನ, ಜಿಲ್ಲಾ ಪಂಚಾಯತ, ಬೆಳಗಾವಿ.



ಆಗ ಶಾಸಕರಾದ ಸಂಜಯ ಪಾಟೀಲ ಅವರು ಗ್ರಾಮದ ಸುಮಾರು 200 ಜನರನ್ನು ಮತ್ತು ತಾಲ್ಲೂಕಿನ ಎಲ್ಲ ಇಲಾಖೆಗಳ ಅಧಿಕಾರಿಗಳನ್ನು ಅಣ್ಣಾ ಹಜಾರೆಯವರ ಮಾದರಿ ಗ್ರಾಮವಾದ ರಾಳೆಗಣಸಿದ್ಧಿಗೆ ಕ್ಷೇತ್ರ ಭೆಟ್ಟಿಯನ್ನು ತಮ್ಮ ಖರ್ಚಿನಲ್ಲಿಯೇ ಮಾಡಿಸಿದರು. ಇದರಿಂದ ಪ್ರೇರಿತರಾದ ಗ್ರಾಮಸ್ಥರು ನೈರ್ಮಲ್ಯ ಮಾದರಿ ಗ್ರಾಮ ಮಾಡಲು ಪ್ರಾರಂಭಿಸಿದರು.

ಪ್ರತಿ ವಾರಕ್ಕೊಮ್ಮೆ ಸಭೆ ಸೇರುವುದು, ಮಾಡಬೇಕಾದ ಕೆಲಸ ಕಾರ್ಯಗಳ ಚರ್ಚೆ ಮಾಡುವುದು, ಮುಂದಿನ ವಾರ ಮಾಡಬೇಕಾದ ಕಾರ್ಯಗಳ ಕ್ರಿಯಾಯೋಜನೆ ಮಾಡುವುದು ಸಮಿತಿಯ ಕೆಲಸವಾಗತೊಡಗಿತು. ದಿನಕಳೆದಂತೆ ಗ್ರಾಮೀಣ ಅಭಿವೃದ್ಧಿಗೆ ಶ್ರಮಿಸುವ ಜನರ ಉತ್ಸಾಹ ಹೆಚ್ಚಾಗತೊಡಗಿತು.

ಪ್ರತಿ ಮನೆಗೂ ಶೌಚಾಲಯ ಕಟ್ಟುವ ದೃಷ್ಟಿಯಿಂದ ಸಂಪೂರ್ಣ ಸ್ವಚ್ಛತಾ ಆಂದೋಲನದ ಜಿಲ್ಲಾ ನೆರವು ಘಟಕವು ಸಾರ್ವಜನಿಕ ಶಿಕ್ಷಣ ಇಲಾಖೆ, ಆರೋಗ್ಯ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆಗಳ ಸಿಬ್ಬಂದಿಗಳನ್ನೊಳಗೊಂಡ ಸಿಬ್ಬಂದಿಗಳ ತಂಡ ರಚಿಸಿ ಮನೆ ಮನೆಗೆ ಭೇಟಿ ನೀಡಿ ಶೌಚಾಲಯ ನಿರ್ಮಾಣ, ನಿರ್ವಹಣೆ, ಅದರಿಂದಾಗುವ ಲಾಭಗಳು ಮುಂತಾದ ವಿಷಯಗಳ ಕುರಿತು ತಿಳುವಳಿಕೆ ಮತ್ತು ಅರಿವು ಮೂಡಿಸುವ ಕೆಲಸ ಮಾಡಿದರು. ಇದರಿಂದಾಗಿ ಸಮುದಾಯದಲ್ಲಿ ಶೌಚಾಲಯ ನಿರ್ಮಾಣ ತ್ವರಿತವಾಗತೊಡಗಿತು. ಬಯಲು ಮಲವಿಸರ್ಜನೆ ಮುಕ್ತ ಗ್ರಾಮವಾಗಿ ಆರೋಗ್ಯಯುತ ಸಮುದಾಯವು ಸದೃಢ ಸಮಾಜದ ಸಂಕೇತವಾದುದು.

ಜಲನಿರ್ಮಲ ಯೋಜನೆ ಮತ್ತು ಎನ್‌ಆರ್‌ಇಜಿಎ ದಲ್ಲಿ ಗ್ರಾಮದ ಎಲ್ಲಾ ಬೀದಿಗಳ ವ್ಯವಸ್ಥೆ ಮತ್ತು ವ್ಯವಸ್ಥಿತ ಚರಂಡಿ ವ್ಯವಸ್ಥೆ ಮಾಡಲಾಯಿತು. ಇದರಿಂದಾಗಿ ಗ್ರಾಮದ ದ್ರವ ತ್ಯಾಜ್ಯವು ಸಲೀಸಾಗಿ ಊರ ಹೊರಗೆ ಹೋಗಲು ಸಾಧ್ಯವಾಯಿತು. ಸ್ವಚ್ಛ ಗಟಾರು ಮತ್ತು ರಸ್ತೆಗಳು ಗ್ರಾಮದ ಸೌಂದರ್ಯವನ್ನು ಮತ್ತಷ್ಟು ಹೆಚ್ಚಿಸಿದವು.

ಈ ಗ್ರಾಮದಲ್ಲಿ ಮೂರು ಶಾಲೆಗಳಿದ್ದು, ಎಲ್ಲ ಶಾಲೆಗಳಿಗೆ ಶೌಚಾಲಯಗಳ ವ್ಯವಸ್ಥೆಯಿದೆ. ಶಾಲಾ ಆವರಣದಲ್ಲಿ ಕೈತೋಟ ನಿರ್ಮಿಸಲು ಮತ್ತು ಆವರಣದ ಗೋಡೆಗಳಿಗೆ ಬಣ್ಣ, ಬರಹ ಮಾಡಲು ಶಾಲಾ ಅಭಿವೃದ್ಧಿ ಮತ್ತು ಉಸ್ತುವಾರಿ ಸದಸ್ಯರನ್ನು ಸಭೆ ಕರೆದು ತೀರ್ಮಾನ ಮಾಡಲಾಯಿತು. ಇದರಿಂದಾಗಿ ಶಾಲೆಗಳು ಆಕರ್ಷಣೀಯ ಕೇಂದ್ರವಾಗಿ ಮಾರ್ಪಾಡಾದವು. ಮಕ್ಕಳಿಗೆ ಪ್ರತಿದಿನ ಪ್ರಾರ್ಥನೆಯಲ್ಲಿ ವೈಯಕ್ತಿಕ ಶುಚಿತ್ವ ಮತ್ತು ಸಮುದಾಯ ಶಾಲಾ ಶುಚಿತ್ವದ ಕುರಿತು ಅರಿವು, ಜಾಗೃತಿ ಮೂಡಿಸಲಾಯಿತು.

ನಾಲ್ಕು ಅಂಗನವಾಡಿಗಳಿಗೆ ಶೌಚಾಲಯ ಮತ್ತು ನೀರಿನ ವ್ಯವಸ್ಥೆಯನ್ನು ಗ್ರಾಮ ಪಂಚಾಯತಿಯಿಂದ ಮಾಡಲಾಯಿತು. ಅಂಗನವಾಡಿಗಳಿಗೆ ಬಿದಿರಿನಿಂದ ಆವರಣ ನಿರ್ಮಾಣ ಮಾಡಲಾಯಿತು. ಅಂಗನವಾಡಿ ಬಾಲ ವಿಕಾಸ ಸಮಿತಿಯವರ ಸಹಕಾರದಿಂದ ಕೈತೋಟ ನಿರ್ಮಿಸಲಾಯಿತು. ಅಂಗನವಾಡಿ ಗಳಿಗೆ ಗೋಡೆ ಮತ್ತು ಶೌಚಾಲಯಗಳನ್ನು ಮಕ್ಕಳ ಪ್ರೀತಿಯ ಪ್ರಾಣಿ, ಪಕ್ಷಿಗಳ ಚಿತ್ರಗಳಿಂದ ಆಕರ್ಷಣೀಯವನ್ನಾಗಿ ಮಾಡಲು



ಆ ಇಲಾಖೆಯ ಅಧಿಕಾರಿಗಳು ಶ್ರಮ ವಹಿಸಿದ್ದಾರೆ. ಇದರ ಪರಿಣಾಮವಾಗಿ ಇಂದು ಅಂಗನವಾಡಿ ಕೇಂದ್ರಗಳು ಮಕ್ಕಳ ಕಲಿಕೆಯ ಮತ್ತು ಮನರಂಜನೆಯ ಕೇಂದ್ರಗಳಾಗಿ ಮಾರ್ಪಾಡಾಗಿವೆ.

ಸಾಮಾಜಿಕ ಅರಣ್ಯ ಇಲಾಖೆಯವರ ಗ್ರಾಮದ ಎಲ್ಲ ಬೀದಿಗಳ ಬದಿಯಲ್ಲಿ ಹಾಗೂ ಶಾಲೆ, ಅಂಗನವಾಡಿ ಆವರಣಗಳಲ್ಲಿ ಸಸಿ ನೆಡುವ ಕಾರ್ಯ ಮಾಡಿದರು. ಇದರಿಂದಾಗಿ ಗ್ರಾಮ ಹಸರೀಕರಣಗೊಂಡು ಸುಂದರ ತಾಣದಂತೆ ಅನಿಸತೊಡಗಿತು. ಘನ ತ್ಯಾಜ್ಯ ವಸ್ತು ವಿಲೇವಾರಿ ಮತ್ತು ಸಂಗ್ರಹಣಾ ಘಟಕದ ಸುತ್ತಮುತ್ತಲೂ ಸಸಿ ನೆಡುವುದರ ಮೂಲಕ ಆ ಜಾಗವನ್ನು ವಿಶ್ರಾಂತಿ ಸ್ಥಳವನ್ನಾಗಿ ಮಾರ್ಪಡಿಸಿದರು.

ಗ್ರಾಮದಲ್ಲಿ ಒಂದು ಘನತ್ಯಾಜ್ಯ ವಸ್ತು ವಿಲೇವಾರಿ ಮತ್ತು ಸಂಗ್ರಹಣಾ ತೊಟ್ಟಿ ವ್ಯವಸ್ಥೆ ಮಾಡಲಾಗಿದೆ. ಸಂಪೂರ್ಣ ಸ್ವಚ್ಛತಾ ಆಂದೋಲನದ ವತಿಯಿಂದ ಮಾಡಲಾದ ಈ ವ್ಯವಸ್ಥೆಯಲ್ಲಿ ಪ್ರತಿ ಬೀದಿಗೆ ಎರಡರಂತೆ ಕಸ ಹಾಕಲು ಕಸದ ಸಿಮೆಂಟಿನ ತೊಟ್ಟಿ ಇಡಲಾಗಿದೆ. ಇದರಿಂದ ಬಂದ ಕಸವನ್ನು ಪಂಚಾಯತಿಯವರು ವಾರಕ್ಕೊಮ್ಮೆ ಊರ ಹೊರಗಿನ ಕಸದ ತೊಟ್ಟಿಗೆ ವಿಲೇವಾರಿ ಮಾಡುತ್ತಾರೆ. ಅಲ್ಲಿ ಕೊಳೆಯುವ ವಸ್ತುಗಳು ಮತ್ತು ಕೊಳೆಯಲಾರದ ವಸ್ತುಗಳನ್ನು ಬೇರ್ಪಡಿಸುವ ಕೆಲಸ ಮಾಡುತ್ತಾರೆ. ಘನತ್ಯಾಜ್ಯ ವಸ್ತುಗಳ ಘಟಕದ ಬದಿಯಲ್ಲೇ ಕೃಷಿ ಇಲಾಖೆಯಿಂದ ಎರೆಹುಳು





ಗೊಬ್ಬರ ಘಟಕ ನಿರ್ಮಿಸಲಾಗಿದೆ. ಕೊಳೆಯುವ ವಸ್ತುಗಳನ್ನು ಇಲ್ಲಿ ಹಾಕಿ ಅತ್ಯುಪಯುಕ್ತ ಸಾವಯವ ಎರೆಹುಳು ಗೊಬ್ಬರ ತಯಾರಿಸಲಾಗುತ್ತಿದೆ. ಇದನ್ನು ಒಂದು ಸ್ವಸಹಾಯ ಸಂಘಕ್ಕೆ ನೀಡಲಾಗಿದೆ. ಆ ಸಂಘವು ಇದರ ನಿರ್ವಹಣೆ ಮತ್ತು ಜವಾಬ್ದಾರಿ ವಹಿಸಿಕೊಂಡಿದೆ.

ಗ್ರಾಮದಲ್ಲಿ ಸಹಜವಾಗಿ ಮಾವಿನ ತೋಟ ಇದೆ. ಇದನ್ನು ಜನರ ಸಾಯಂಕಾಲದ ವಿಶ್ರಾಂತಿ ತಾಣವನ್ನಾಗಿ ಮಾಡಲಾಗಿದೆ. ತೋಪಿನ ಸುತ್ತಲೂ ಸುಮಾರು 2 ಕಿಮೀನಷ್ಟು ಬಿದಿರಿನ ಆವರಣ ಮಾಡಲಾಗಿದೆ. ಗಿಡಗಳ ಕಾಂಡಕ್ಕೆ ಬಿಳಿ ಮತ್ತು ಕೆಂಪು ಬಣ್ಣ ಹಚ್ಚಿ ಸುಂದರ ವನವನ್ನಾಗಿ ನಿರ್ಮಿಸಲಾಗಿದೆ. ಗ್ರಾಮದ ಪ್ರತಿ ಬೀದಿಗೂ ಒಂದೊಂದು ಹೆಸರಿಡಲಾಗಿದೆ. ಇಂದು ಗ್ರಾಮವು ರಾಜ್ಯದ, ಅಷ್ಟೇ ಏಕೆ ದೇಶದ ಗಮನ ಸೆಳೆಯುತ್ತಿದೆ. ಗ್ರಾಮವು ವ್ಯವಸ್ಥಿತ ಸುಂದರ ನೈರ್ಮಲ್ಯ ಮಾದರಿ ಗ್ರಾಮ ಪಂಚಾಯತಿಯಾಗಿ ಕಣ್ಮನ ಸೆಳೆದಿದೆ. ಗ್ರಾಮದ ಶಾಲಾ ಮಕ್ಕಳು ಹಾಗೂ ಸಮುದಾಯದವರಿಗೆ ಪ್ಲಾಸ್ಟಿಕ್ ಬಳಕೆಯಿಂದಾಗುವ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲಾಗಿದೆ. ಇದರಿಂದಾಗಿ ತಿಂಗಳಿಗೊಮ್ಮೆ ಶಾಲಾ ಮಕ್ಕಳು ಮನೆಯಿಂದ ಶಾಲೆಗೆ ಬರುವಾಗ ಒಂದು ಕೈಯಲ್ಲಿ ಪುಸ್ತಕ ಚೀಲ, ಮತ್ತೊಂದು ಕೈಯಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ ಮನೆಯಿಂದ ಶಾಲೆಯವರೆಗೆ ಸಿಗುವ ಪ್ಲಾಸ್ಟಿಕ್ ಹಾಗೂ ಗಾಜುಗಳನ್ನು ತೆಗೆದುಕೊಂಡು ಬಂದು ಶಾಲಾ ಆವರಣದ ಹೊರಗೆ ಇಡಲಾದ ಪ್ಲಾಸ್ಟಿಕ್ ಮನೆಯಲ್ಲಿ ಹಾಕುತ್ತಾರೆ. ಇದರಿಂದಾಗಿ ಗ್ರಾಮದಲ್ಲಿ ಪ್ಲಾಸ್ಟಿಕ್‌ನಿಂದಾಗುವ ಅನಾಹುತವನ್ನು ತಪ್ಪಿಸಲಾಗಿದೆ.



ಸುಂದರ ರಸ್ತೆಗಳು, ವ್ಯವಸ್ಥಿತ ಚರಂಡಿಗಳು, ಶೌಚಾಲಯ ಬಳಸುತ್ತಿರುವ ನೈರ್ಮಲ್ಯ ಮನೆಗಳು, ಬೀದಿಗುಂಟ ಗಿಡಗಳು, ಕಸದ ವಿಲೇವಾರಿ, ವೈಜ್ಞಾನಿಕ ಘಟಕ, ಆರೋಗ್ಯವಂತ ಮಕ್ಕಳನ್ನು ಹೊಂದಿದ ಅಂಗನವಾಡಿ ಶಾಲೆಗಳು ಈ ಊರಿನ ಪ್ರಮುಖ ಆಕರ್ಷಣೀಯವಾಗಿವೆ.

ವಿಶ್ವ ಬ್ಯಾಂಕಿನ ಅಧಿಕಾರಿಗಳೊಂದಿಗೆ ಶ್ರೀ ಜೆ. ರವಿಶಂಕರ್ ನಿರ್ದೇಶಕರು ಕ.ಗ್ರಾ.ನೀ.ಸೈ.ಸಂಸ್ಥೆ ಗ್ರಾ.ಅ.ಪಂ.ರಾ. ಇಲಾಖೆ ಬೆಂಗಳೂರು, ಶ್ರೀಮತಿ ಚೇತನಗಂಗಾ ಮುಂತಾದ ಅಧಿಕಾರಿಗಳು ಮಾದರಿ ಗ್ರಾಮಕ್ಕೆ ಭೇಟಿ ನೀಡಿ, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.



ಇಂದು ಜಿಲ್ಲೆಯ ವಿವಿಧ ಭಾಗಗಳಿಂದ ಹಾಗೂ ಜಿಲ್ಲಾ ಹೊರಗಿನಿಂದಲೂ ಜನರು ಮಾದರಿ ಗ್ರಾಮವನ್ನು ನೋಡಲು ಬರುತ್ತಿದ್ದಾರೆ. ಇದು ಗ್ರಾಮಸ್ಥರಲ್ಲಿ ಮತ್ತಷ್ಟು ಜವಾಬ್ದಾರಿ ಹೆಚ್ಚಿಸಿದೆ. ಈ ಮಹತ್ತರ ಕಾರ್ಯದಲ್ಲಿ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ. ಅಜಯ ನಾಗಭೂಷಣ ಎಂ.ಎನ್., ಶಾಸಕರಾದ ಸಂಜಯ ಪಾಟೀಲ, ಯೋಜನಾ ವ್ಯವಸ್ಥಾಪಕರಾದ ಶ್ರೀ ರವಿ ಬಸರಿಹಳ್ಳಿ, ಕಾರ್ಯನಿರ್ವಾಹಕ ಅಧಿಕಾರಿಗಳಾದ ಎ.ಎಂ. ಪಾಟೀಲ ಹಾಗೂ ಶಿಶು ಅಭಿವೃದ್ಧಿ ಅಧಿಕಾರಿ ಎ.ಎಸ್. ಮರಿಕಟ್ಟಿ, ಅರಣ್ಯ ಇಲಾಖೆಯ ಸತೀಶ ಹಾಗೂ ತಾಲ್ಲೂಕು ಆರೋಗ್ಯಾಧಿಕಾರಿಗಳು, ಕ್ಷೇತ್ರ ಶಿಕ್ಷಣಾಧಿಕಾರಿಗಳು ಮುಂತಾದವರ ಪಾತ್ರ ಮರೆಯಲಾರದಂತಹದ್ದು. ಮಾದರಿ ನೈರ್ಮಲ್ಯ ಗ್ರಾಮ ಪಂಚಾಯತಿಯನ್ನಾಗಿ ಮಾಡಲು ಜಿಲ್ಲಾ ಸಂಯೋಜಕರಾದ




ಅರ್ಜುನ ಕಡೆಟ್ಟಿ ಹಾಗೂ ಜಲನಿರ್ಮಲ ಯೋಜನೆಯ ಸಹಾಯಕ ನಿರ್ದೇಶಕಿಯಾದ ಪೂರ್ಣಿಮಾ ಚವ್ಹಾಣ ಇವರುಗಳು ಪ್ರತಿ ಹಂತದಲ್ಲಿಯೂ ಸೂಕ್ತ ಮಾರ್ಗದರ್ಶನ ಮತ್ತು ಎಲ್ಲ ಇಲಾಖೆಗಳಲ್ಲಿ ಸಮನ್ವಯತೆ ತರುವುದರ ಮೂಲಕ ಯಶಸ್ವಿಯಾಗಿದ್ದಕ್ಕೆ ಗ್ರಾಮಸ್ಥರು ಸ್ಮರಿಸುತ್ತಾರೆ.

❑

ಯಶೋಗಾಥೆ

# ಸಂಪೂರ್ಣ ಸ್ವಚ್ಛತಾ ಆಂದೋಲನ

**ಪ್ರವೀಣ್ ಹುಲಿಕುಂಟೆ ***

ಗ್ರಾಮೀಣ ಪ್ರದೇಶಗಳಲ್ಲಿನ ಅನೈರ್ಮಲ್ಯದ ಅಂಶಗಳನ್ನು ತೊಡೆದು ಹಾಕಿ, ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಲು ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮವೇ ಸಂಪೂರ್ಣ ಸ್ವಚ್ಛತಾ ಆಂದೊಲನ.

ಗ್ರಾಮೀಣ ಪ್ರದೇಶಗಳಲ್ಲಿ ರೂಢಿಯಲ್ಲಿರುವ ಬಯಲು ಮಲ ವಿಸರ್ಜನೆಯ ಅಭ್ಯಾಸಗಳನ್ನು ನಿರ್ಮೂಲನೆ ಮಾಡುವುದು, ಗ್ರಾಮೀಣ ಪ್ರದೇಶಗಳ ಎಲ್ಲ ಶಾಲೆ ಮತ್ತು ಅಂಗನವಾಡಿಗಳಿಗೆ ನೈರ್ಮಲ್ಯದ ಸೌಲಭ್ಯಗಳನ್ನು ಒದಗಿಸುವ ಮೂಲಕ ಮಕ್ಕಳಲ್ಲಿ ಚಿಕ್ಕ ವಯಸ್ಸಿನಿಂದಲೇ ಸ್ವಚ್ಛತೆಯ ಅಭ್ಯಾಸಗಳನ್ನು ರೂಢಿಸುವುದು, ಗ್ರಾಮಗಳಲ್ಲಿನ ಘನ ಹಾಗೂ ದ್ರವ ತ್ಯಾಜ್ಯಗಳನ್ನು ಸೂಕ್ತವಾಗಿ ನಿರ್ವಹಣೆ ಮಾಡುವುದು ಹಾಗೂ ಈ ಮೂಲಕ ಹಳ್ಳಿಗಳಲ್ಲಿ ಸ್ವಚ್ಛ ಪರಿಸರ ನಿರ್ಮಿಸುವುದು ಸಂಪೂರ್ಣ ಸ್ವಚ್ಛತಾ ಆಂದೋಲನದ ಪ್ರಮುಖ ಉದ್ದೇಶವಾಗಿರುತ್ತದೆ.

ಸಂಪೂರ್ಣ ಸ್ವಚ್ಛತಾ ಆಂದೋಲನವು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ, ಎಲ್ಲಾ ಗ್ರಾಮ ಪಂಚಾಯಿತಿಗಳಲ್ಲಿ 2005 ರ ಅಕ್ಟೋಬರ್ 2 ರಿಂದ ಜಾರಿಯಲ್ಲಿದೆ. ಇದು ನಿರ್ಧಿಷ್ಟ ಕಾಲಾವಧಿಯ ಯೊಜನೆಯಾಗಿದ್ದು, 2017ಕ್ಕೆ ಮುಕ್ತಾಯಗೊಳ್ಳಬೇಕಿದೆ. ಇರುವ ಸೀಮಿತ ಅವಧಿಯಲ್ಲಿ ಇಡೀ ರಾಜ್ಯದ ಎಲ್ಲ ಗ್ರಾಮಗಳು ಬಯಲು ಮಲವಿಸರ್ಜನೆಯಿಂದ ಮುಕ್ತಗೊಳ್ಳಬೇಕಿದೆ. ಸಂಪೂರ್ಣ ಸ್ವಚ್ಛತಾ

ರಾಜ್ಯದಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನದ ಅಡಿಯಲ್ಲಿನ ಈವರೆಗಿನ ಒಟ್ಟಾರೆ ಸಾಧನೆಯನ್ನು ಗಮನಿಸಿದಾಗ ಶೇ. 69 ರಷ್ಟು ಗ್ರಾಮೀಣ ಕುಟುಂಬಗಳು ಶೌಚಾಲಯಗಳನ್ನು ಹೊಂದಿದ್ದು ಸ್ವಚ್ಛತೆಯ ಅಭ್ಯಾಸಗಳನ್ನು ಪಾಲಿಸತೊಡಗಿದ್ದಾರೆ.





ಆಂದೋಲನವೆಂದರೆ ಕೇವಲ ಶೌಚಾಲಯಗಳನ್ನು ಹೊಂದುವಂತೆ ಮಾಡುವುದಷ್ಟೇ ಅಲ್ಲ, ಇಡೀ ಗ್ರಾಮದಲ್ಲಿ ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸುವುದಾಗಿರುತ್ತದೆ. ಗ್ರಾಮದ ಎಲ್ಲ ಕುಟುಂಬಗಳಲ್ಲಿ, ಶಾಲೆಗಳಲ್ಲಿ, ಅಂಗವಾಡಿಗಳಲ್ಲಿ ಶೌಚಾಲಯಗಳಿರಬೇಕು, ಮಲ-ಮೂತ್ರ ವಿಸರ್ಜನೆಗಳಿಗೆ ಶೌಚಾಲಯಗಳನ್ನೆ ಬಳಸಬೇಕು. ಉತ್ತಮ ನಿರ್ವಹಣೆ ಇರಬೇಕು. ಗ್ರಾಮದ ಬೀದಿಗಳು, ಓಣಿಗಳು ಶುಚಿಯಾಗಿರ ಬೇಕು. ಇದರ ಜೊತೆಗೆ ಮನೆಗಳ ಹಾಗೂ ಗ್ರಾಮದ ಕಸ, ಬಳಸಿದ ನೀರು ಮುಂತಾದವುಗಳನ್ನು ಉತ್ತಮವಾಗಿ ನಿರ್ವಹಿಸಬೇಕು. ಒಟ್ಟಾರೆ ಇಡೀ ಗ್ರಾಮದ ಸಂಪೂರ್ಣ ಸ್ವಚ್ಛತೆಗೆ ಪೂರಕವಾದ ಎಲ್ಲ ಚಟುವಟಿಕೆಗಳನ್ನು ಆಂದೋಲನದ ಅಡಿಯಲ್ಲಿ ಕೈಗೊಳ್ಳಲಾಗುತ್ತಿದೆ.

## ನಿರ್ಮಲ ಗ್ರಾಮ ಪುರಸ್ಕಾರ

ಸಂಪೂರ್ಣ ಸ್ವಚ್ಛತಾ ಆಂದೋಲನವು ಇಡೀ ರಾಷ್ಟ್ರದ ಎಲ್ಲ ಹಳ್ಳಿಹಳ್ಳಿಗಳಲ್ಲಿ ಅನುಷ್ಠಾನಗೊಳ್ಳುತ್ತಿರುವ ಕಾರ್ಯಕ್ರಮ. ದೇಶದ ಎಲ್ಲ ಗ್ರಾಮಗಳು ಬಯಲು ಮಲ ವಿಸರ್ಜನೆಯಂತ ಕೆಟ್ಟ ಪದ್ಧತಿಯಿಂದ ಮುಕ್ತಗೊಂಡು ಸ್ವಚ್ಛ ಹಾಗೂ ಸುಂದರ ಗ್ರಾಮಗಳಾಗಿ ರೂಪುಗೊಳ್ಳಬೇಕೆಂಬುದೇ ಆಂದೋಲನದ ಬಹುಮುಖ್ಯ ಉದ್ದೇಶವಾಗಿದೆ.

ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತೆಯನ್ನು ಸಾಧಿಸಲು, ಪಂಚಾಯತ್ ರಾಜ್ ಸಂಸ್ಥೆಗಳನ್ನು ಉತ್ತೇಜಿಸುವ ಸಲುವಾಗಿ ಕೇಂದ್ರ ಸರ್ಕಾರವು ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಿದ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯತಿಗಳಿಗೆ 'ನಿರ್ಮಲ ಗ್ರಾಮ ಪುರಸ್ಕಾರ' ನೀಡುತ್ತದೆ.

ಪಂಚಾಯತ್ ವ್ಯಾಪ್ತಿಯ ಎಲ್ಲ ಕುಟುಂಬಗಳು ಶೌಚಾಲಯಗಳನ್ನು ನಿರ್ಮಿಸಿಕೊಂಡು ಬಳಸುತ್ತಿರಬೇಕು. ಶಾಲೆಗಳು ಮತ್ತು ಅಂಗನವಾಡಿಗಳಲ್ಲೂ ಶೌಚಾಲಯಗಳಿದ್ದು ಮಕ್ಕಳು ಮಲ-ಮೂತ್ರ ವಿಸರ್ಜನೆಗೆ ಶೌಚಾಲಯಗಳನ್ನೇ ಬಳಸುತ್ತಿರಬೇಕು. ಗ್ರಾಮಗಳ ತ್ಯಾಜ್ಯಗಳನ್ನು ಸಮರ್ಪಕವಾಗಿ ನಿರ್ವಹಿಸುತ್ತಿರಬೇಕು. ಒಟ್ಟಾರೆ ಪಂಚಾಯತ್ ಸಂಸ್ಥೆಯ ವ್ಯಾಪ್ತಿಯ ಎಲ್ಲ ಗ್ರಾಮಗಳಲ್ಲೂ ಸ್ವಚ್ಛ ಪರಿಸರ ರೂಪುಗೊಂಡಿರಬೇಕು. ಅಂತಹ ಗ್ರಾಮ ಪಂಚಾಯಿತಿ/ ತಾಲೂಕು ಪಂಚಾಯಿತಿ/ಜಿಲ್ಲಾ ಪಂಚಾಯಿತಿಗಳಿಗೆ ಭಾರತದ ಘನವೆತ್ತ ರಾಷ್ಟ್ರಪತಿಗಳು ನೀಡುವ ಅತ್ಯುನ್ನತ ಗೌರವ ನಿರ್ಮಲ ಗ್ರಾಮ ಪುರಸ್ಕಾರ.

ಜನಸಂಖ್ಯೆಗೆ ಅನುಗುಣವಾಗಿ ಗ್ರಾಮ ಪಂಚಾಯಿತಿಗಳಿಗೆ ಐವತ್ತು ಸಾವಿರ ರೂಪಾಯಿಗಳಿಂದ 5 ಲಕ್ಷಗಳು, ತಾಲ್ಲೂಕು ಪಂಚಾಯಿತಿಗಳಿಗೆ 10 ಲಕ್ಷಗಳಿಂದ 20 ಲಕ್ಷಗಳು ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ರೂ. 30 ಲಕ್ಷಗಳಿಂದ 50 ಲಕ್ಷಗಳವರೆಗೆ ನಗದು ಬಹುಮಾನ ಹಾಗೂ ಪ್ರಶಸ್ತಿ ಫಲಕ ನೀಡಲಾಗುತ್ತದೆ.

ಈವರೆಗೆ ರಾಜ್ಯದ 1069 ಗ್ರಾಮ ಪಂಚಾಯಿತಿಗಳು, 6 ತಾಲೂಕು ಪಂಚಾಯಿತಿಗಳು ಹಾಗೂ 1 ಜಿಲ್ಲಾ ಪಂಚಾಯತ್ ಬಯಲು ಮಲ ವಿಸರ್ಜನೆಯಿಂದ ಮುಕ್ತಗೊಂಡು, ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಿವ ಮೂಲಕ ನಿರ್ಮಲ ಗ್ರಾಮ ಪುರಸ್ಕಾರದ ಗೌರವಕ್ಕೆ ಪಾತ್ರವಾಗಿವೆ.

ಈ ಪುರಸ್ಕಾರ ಪಡೆಯಲು ಗ್ರಾಮ ಪಂಚಾಯಿತಿಗಳು ಸವೆಸಿದ ಹಾದಿ ಸುಲಭದ್ದೇನಲ್ಲ. ಸಹಸ್ರಾರು ವರ್ಷಗಳಿಂದ ಗ್ರಾಮೀಣ ಪರಿಸರದಲ್ಲಿ ರೂಢಿಯಲ್ಲಿರುವ ಬಯಲು ಮಲ ವಿಸರ್ಜನೆಯಂತ ಕೆಟ್ಟ ಪದ್ದತಿಯನ್ನು ನಿರ್ಮೂಲನೆ ಮಾಡಲಾಗಿದೆ. ಬಯಲು ಮಲ ವಿಸರ್ಜನೆ, ನೀರಿಲ್ಲದ ಶೌಚಾಲಯ ಮತ್ತು ಕೈಗಳಿಂದ ಮಲ ವಿಲೇವಾರಿ ಪದ್ಧತಿಗಳಿಗೆ ಸಂಪೂರ್ಣವಾಗಿ ಇತಿಶ್ರೀ ಹಾಡಲಾಗಿದೆ. ಹಾಗಾಗಿ ಇಂದು ಈ ಎಲ್ಲ ಪಂಚಾಯಿತಿಗಳ ಪ್ರತೀ ಮನೆಗಳಲ್ಲಿಯೂ ಶೌಚಾಲಯ ಗಳಿವೆ. ಹಿಂದೆಲ್ಲಾ ಬಯಲಿಗೆ ಹೋಗುತ್ತಿದ್ದ ಇಲ್ಲಿನ ಜನರೀಗ ಮಲ-ಮೂತ್ರ ವಿಸರ್ಜನೆಗೆ ಶೌಚಾಲಯಗಳನ್ನು ಬಳಸುತ್ತಿದ್ದಾರೆ. ಅಷ್ಟೇ ಅಲ್ಲ; ಸದರಿ ಗ್ರಾಮ ಪಂಚಾಯಿತಿಗಳ ಎಲ್ಲ ಶಾಲೆಗಳಿಗೆ

ಹಾಗೂ ಅಂಗನವಾಡಿಗಳಿಗೆ ಶೌಚಾಲಯ ಸೌಲಭ್ಯ ಒದಗಿಸಲಾಗಿದೆ. ಮಕ್ಕಳು ಶಾಲಾ ಸಮಯದಲ್ಲಿ ಮಲ–ಮೂತ್ರಗಳ ವಿಸರ್ಜನೆಗೆ ಖಡ್ಡಾಯವಾಗಿ ಶೌಚಾಲಯವನ್ನು ಬಳಸುತ್ತಿದ್ದಾರೆ. ಶುಚಿತ್ವದ ಅಭ್ಯಾಸಗಳೊಂದಿಗೆ ಎಳೆಯ ವಯಸ್ಸಿನಿಂದಲೇ ಬದುಕಿನ ಸುಧಾರಣೆಯ ಹಾದಿಯಲ್ಲಿ ಹೆಜ್ಜೆ ಹಾಕುತ್ತಿದ್ದಾರೆ.

ಈ ಗ್ರಾಮಗಳಲ್ಲೀಗ ಬಳಸಿದ ನೀರು, ಕೊಳಚೆ, ಕಸ, ಗಲೀಜುಗಳ ಹಾವಳಿಯಿಲ್ಲ; ಬದಲಾಗಿ ಇಡೀ ಗ್ರಾಮದ ಕಸ–ಕೊಳಚೆಗಳ ಸೂಕ್ತ ವಿಲೇವಾರಿ ಮಾಡಲಾಗುತ್ತಿದೆ. ಇಡೀ ಹಳ್ಳಿಗಳಲ್ಲಿ ಸ್ಥಾಪಿತವಾಗಿರುವ ಸ್ವಚ್ಛ ಪರಿಸರ ಆ ಹಳ್ಳಿಗಳಿಗೊಂದು ಮೆರುಗು ನೀಡಿವೆ. ಇದಕ್ಕೊಂದು ಇಂಬು ಎಂಬಂತೆ ನಿರ್ಮಲ ಗ್ರಾಮ ಪುರಸ್ಕಾರದ ಕಳಶ ಈ ಗ್ರಾಮ ಪಂಚಾಯಿತಿಗಳನ್ನು ಅಲಂಕರಿಸಿದೆ.

ಪ್ರಸಕ್ತ ವರ್ಷದಲ್ಲಿ ರಾಜ್ಯದ 103 ಗ್ರಾಮ ಪಂಚಾಯಿತಿಗಳು, 2 ತಾಲ್ಲೂಕು ಪಂಚಾಯಿತಿಗಳು ಹಾಗೂ ಒಂದು ಜಿಲ್ಲಾ ಪಂಚಾಯಿತಿ ಸಂಪೂರ್ಣ ಸ್ವಚ್ಛತಾ ಆಂದೋಲನದ ಅಡಿಯಲ್ಲಿ ನೀಡಲಾಗುವ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಭಾಜನವಾಗಿವೆ.

## ನೈರ್ಮಲ್ಯ ಪ್ರಗತಿಯ ಚಿತ್ರಣ

ರಾಜ್ಯದಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನದ ಅಡಿಯುಲ್ಲಿನ ಈವರೆಗಿನ ಒಟ್ಟಾರೆ ಸಾಧನೆಯುನ್ನು ಗಮನಿಸಿದಾಗ ಶೇ. 69 ರಷ್ಟು ಗ್ರಾಮೀಣ ಕುಟುಂಬಗಳು ಶೌಚಾಲಯಗಳನ್ನು ಹೊಂದಿದ್ದು ಸ್ವಚ್ಛತೆಯ ಅಭ್ಯಾಸಗಳನ್ನು ಪಾಲಿಸತೊಡಗಿದ್ದಾರೆ. ಇನ್ನೂ ಶೇಕಡಾ 31 ರಷ್ಟು ಕುಟುಂಬ






ಗಳು ಶೌಚಾಲಯಗಳನ್ನು ಹೊಂದಬೇಕಾಗಿದೆ. ಗ್ರಾಮೀಣ ನೈರ್ಮಲ್ಯ ಸಾಧನೆಯಲ್ಲಿ ರಾಜ್ಯದ ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಬೆಂಗಳೂರು ಗ್ರಾಮಾಂತರ, ಚಿಕ್ಕಮಗಳೂರು, ಹಾಸನ, ಕೊಡಗು, ಬೆಂಗಳೂರು, ಉತ್ತರಕನ್ನಡ, ಬೆಳಗಾವಿ ಮುಂತಾದ ಜಿಲ್ಲೆಗಳಲ್ಲಿ ಉತ್ತಮ ಪ್ರಗತಿ ಸಾಧಿಸಲಾಗಿದೆ. ಮಂಡ್ಯ, ಮೈಸೂರು, ದಾವಣಗೆರೆ, ಬಾಗಲಕೋಟೆ, ಧಾರವಾಡ, ಕೊಪ್ಪಳ, ಕೋಲಾರ, ರಾಮನಗರ, ಚಿಕ್ಕಬಳ್ಳಾಪುರ, ಚಿತ್ರದುರ್ಗ ಮುಂತಾದ ಜಿಲ್ಲೆಗಳ ಪ್ರಗತಿ ಸಾಧಾರಣ ಮಟ್ಟದಲ್ಲಿದೆ. ಇನ್ನುಳಿದಂತೆ ಬಳ್ಳಾರಿ, ಹಾವೇರಿ, ಬೀದರ್, ಗದಗ, ಚಾಮರಾಜನಗ, ತುಮಕೂರು, ರಾಯಚೂರು, ಬಿಜಾಪುರ ಹಾಗೂ ಗುಲಬರ್ಗ ಜಿಲ್ಲೆಗಳು ನೈರ್ಮಲ್ಯ ಪ್ರಗತಿಯಲ್ಲಿ ಅತ್ಯಂತ ಹಿಂದುಳಿದಿರುತ್ತವೆ.

ನಿರ್ಮಲ ಗ್ರಾಮ ಪುರಸ್ಕಾರ ಸಾಧನೆಗೆ ಸಂಬಂಧಿಸಿದಂತೆ ರಾಜ್ಯದಲ್ಲಿ ಪ್ರಸಕ್ತ ವರ್ಷದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯು ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸುವ ಮೂಲಕ ನಿರ್ಮಲ ಗ್ರಾಮ ಪುರಸ್ಕಾರ ಪಡೆದ ಪ್ರಥಮ ಜಿಲ್ಲೆ ಹಾಗೂ ಬಯಲು ಮಲ ವಿಸರ್ಜನಾ ಮುಕ್ತ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ಹಾಗೂ ಮಂಗಳೂರು ತಾಲ್ಲೂಕುಗಳೂ ಸಹ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಪಾತ್ರವಾಗಿದ್ದು, ಸ್ವಚ್ಛತೆಯ ಸಾಧನೆಯಲ್ಲಿ ರಾಜ್ಯದ ಘನತೆಯನ್ನು ಎತ್ತಿಹಿಡಿದಿವೆ. ಇದರೊಂದಿಗೆ ರಾಜ್ಯದ ವಿವಿಧ ಜಿಲ್ಲೆಗಳ 103 ಗ್ರಾಮ ಪಂಚಾಯಿತಿಗಳು 2011 ನೇ ಸಾಲಿನ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಪಾತ್ರವಾಗಿವೆ.

❑

ಯಶೋಗಾಥೆ

# ಸಂಪೂರ್ಣ ನೈರ್ಮಲ್ಯದತ್ತ ಮುನಿರಾಬಾದ್ ಡ್ಯಾಂ ಗ್ರಾಮ

– ರಾಮಾಂಜನೇಯ ವಿ.ಎಚ್. *

ಶಾಲಾ ಕಾಲೇಜು ವಿದ್ಯಾರ್ಥಿಗಳು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸ್ವಚ್ಛತೆಯ ಸಂದೇಶ ಸಾರುವ ನಾಮ ಫಲಕಗಳನ್ನು ಹಿಡಿದುಕೊಂಡು ಜಾಥ ನಡೆಸುವ ಮೂಲಕ ಜನರಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಿದ್ದಾರೆ.

ಸದಾ ಒಂದಿಲ್ಲೊಂದು ಸುದ್ದಿಯಲ್ಲಿರುವ ತುಂಗಾ ಭದ್ರ ಅಣೆಕಟ್ಟಿನ ಕೂಗಳೆಯ ದೂರದಲ್ಲಿರುವ ಕೊಪ್ಪಳ ತಾಲೂಕಿನ **ಮುನಿರಾಬಾದ್ ಡ್ಯಾಂ ಗ್ರಾಮ,** ಈಗ ಬಯಲು ಶೌಚಕ್ಕೆ ಬ್ರೇಕ್ ಹಾಕುವ ಮೂಲಕ ಪರಿಸರ ಸ್ನೇಹಿಯಾಗಿ ಜನಜನಿತವಾಗಿದೆ. ಇಲ್ಲೀಗ ಪ್ರತಿ ಮನೆಯಲ್ಲೂ ಶೌಚಾಲಯಗಳಿವೆ. ಗಾಂಧೀಜಿಯ ಗ್ರಾಮ ಸುಧಾರಣೆ ಕನಸು ಇಲ್ಲಿ ನನಸಾಗಿದೆ. **ಮುನಿರಾಬಾದ್** ಗ್ರಾಮಸ್ಥರು ಪರಿಸರ ಕಾಳಜಿಯಿಂದ ಬಯಲು ಶೌಚವನ್ನು ತೊರೆದಿದ್ದಾರೆ. ಪ್ರತಿ ಮನೆ ಮುಂದೆಯು ಶೌಚಾಲಯಗಳು ಕಂಡುಬರುತ್ತಿವೆ.

ಅನೇಕ ವರ್ಷಗಳಿಂದ ಅಭಿವೃದ್ಧಿ ಕಾಣದೇ ಹಪಹಪಿಸುತ್ತಿದ್ದ ಐತಿಹಾಸಿಕ ಗ್ರಾಮ ಮುನಿರಾಬಾದ್ ಇಂದು ಸಾಕಾಷ್ಟು ಬದಲಾವಣೆ ಕಂಡಿದೆ, ಶತ ಶತಮಾನಗಳಿಂದ ಇಲ್ಲಿನ ಜನರು ತಮ್ಮ ನಿತ್ಯ ಕರ್ಮಗಳನ್ನು ಪೂರೈಸಿಕೊಳ್ಳಲು ಬಯಲನ್ನೆ ಅವಲಂಬಿಸಿದ್ದರು, ಕಳೆದ ಮೂರು ದಶಕಗಳಿಂದಿಚೆಗೆ ಮುನಿರಾಬಾದ್ ಇಂದು ಸಂಪೂರ್ಣ ನೈರ್ಮಲ್ಯದತ್ತ ಸಾಗಿದೆ.

'ಪಾಯಿಖಾನೆ ಅವಶ್ಯಕತೆ ಗಂಡಸರಿಗೆ ಅಷ್ಟೊಂದಿಲ್ಲಾ ಅದರ ಸಂಕಟ ಅವಮಾನ ಎಷ್ಟೆಂಬುದು ಗೊತ್ತಿಲ್ಲ ಸೂರ್ಯನಿರದ ಸಮಯದಲ್ಲಿ ಮಾತ್ರ ರಸ್ತೆ ಬದಿಯಲ್ಲಿ ಬಹಿರ್ದಿಸೆಗೆ ತೆರಳುವ ನಿಮಗೆ ಮಾತ್ರ ಗೊತ್ತು ಪಡಿಪಾಟಿಲು ಹೆಂಡ್ತಿರೆ ಹಾಗಂತ ಸುಮ್ನೆ ಕೂಡ್ಬೇಡಿ ಗಂಡ್ಸರನ್ನ ನಂಬಬೇಡಿ ಶೌಚಾಲಯ ಕಟ್ಸು ಅಂತ ಹಿಡಿರಿ ಪಟ್ಟು...



* ಐ.ಇ.ಸಿ ಸಮಾಲೋಚಕರು, ಆರ್.ಸಿಸಿಡಿಯು, ಗುಲ್ಬರ್ಗ.



ಹೀಗೆ ಮಹಿಳಾ ಜನಸ್ತೋಮವನ್ನು ಉದ್ದೇಶಿಸಿ ಶೌಚಾಲಯದ ಮಹತ್ವವನ್ನು ಸಾರಿದ ಈ ಹಿಂದಿನ ಜಿ.ಪಂ ಸಿ.ಇ.ಓ. ಶ್ರೀ ಆಂಟನಿ ಮೇಂಡೋನ್ಸರವರ ಶ್ರಮ ಇಂದು ಸಾರ್ಥಕ ವಾಗಿದೆ. ಶೌಚಕ್ಕಾಗಿ ಬಯಲನ್ನೆ ಆಶ್ರಯಸಿದ್ದ ಜನರು ಇಂದು ಶೌಚಾಲಯ ಉಪಯೋಗಿಸಿ ಸ್ವಾಭಿಮಾನ ಮತ್ತು ಗೌರವದಿಂದ, ಹೆಮ್ಮೆಯಿಂದ ಸಂಪೂರ್ಣ ನೈರ್ಮಲ್ಯತೆಯಡೆಗೆ ಸಾಗಿದ್ದಾರೆ.

ಕಳೆದ ಮೂರು ವರ್ಷಗಳಿಂದ ಪಂಚಾಯಿತಿ ಅತ್ಯಂತ ಕಾಳಜಿವಹಿಸಿ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಜಾರಿಗೊಳಿಸಿದೆ, ಪ್ರತಿವಾರ ಪಂಚಾಯಿತಿಯಲ್ಲಿ ಗ್ರಾಮ ಸಭೆಗಳನ್ನು ನಡೆಸುವ ಮೂಲಕ ಪ್ರತಿ ಪಂಚಾಯಿತಿ ಸದಸ್ಯರಿಗೆ ಈ ಬಗ್ಗೆ ಅರಿವು ಮೂಡಿಸುವುದರ ಜತೆಗೆ ಅವರುಗಳು ಆಯ್ಕೆಯಾಗಿರುವ ವಾರ್ಡ್‌ನ ಸಂಪೂರ್ಣ ಜವಾಬ್ದಾರಿಯನ್ನು ತೆಗೆದುಕೊಂಡು ಬಯಲು ಮಲವಿಸರ್ಜನೆಯನ್ನು ತಡೆಗಟ್ಟುವ ಕಾಯಕದಲ್ಲಿ ತೊಡಗಿದರು. ಹೀಗಾಗಿಯೇ ಇಂದು ಮುನಿರಾಬಾದ್ ಗ್ರಾಮ ಪಂಚಾಯಿತಿ ಬಯಲು ಶೌಚದಿಂದ ಮುಕ್ತಿ ಹೊಂದಿದೆ.

ವೈಯುಕ್ತಿಕ ಶೌಚಾಲಯವನ್ನು ಹೊಂದಿರದ ಕುಟುಂಬಗಳನ್ನು ಗುರುತಿಸಿ ಪಂಚಾಯಿತಿ ಸದಸ್ಯರು, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಗ್ರಾಮದ ಸ್ತ್ರೀಶಕ್ತಿ, ಸ್ವ-ಸಹಾಯ ಸಂಘದ ಸದಸ್ಯರು ಈ ಆಂದೋಲನ ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಮನೆ-ಮನೆಗೆ ಮುತ್ತಿಗೆ ಹಾಕಿ ಪ್ರತಿಯೊಬ್ಬರು ಶೌಚಾಲಯ ನಿರ್ಮಾಣ ಮಾಡಿಕೊಂಡು ಪ್ರತಿನಿತ್ಯ ಬಳಸುವಂತೆ ಮಾಡಿದ್ದಾರೆ.

ಇವರ ಕಾರ್ಯಕ್ಕೆ ಬೆನ್ನೆಲುಬಾಗಿ ನಿಂತ ಗ್ರಾಮ ಪಂಚಾಯಿತಿ, ವೈಯಕ್ತಿಕ ಶೌಚಾಲಯವನ್ನು ನಿರ್ಮಾಣ ಮಾಡಿಕೊಳ್ಳಲು ಮುಂದೆ ಬಂದ ಫಲಾನುಭವಿಗಳಿಗೆ ಅವರ ಮನೆಯ ಮುಂದೆ ಅಗತ್ಯವಿರುವ ಸಲಕರಣೆ ಮತ್ತು ಉಪಕರಣಗಳನ್ನು ಒದಗಿಸಿ ಪ್ರೋತ್ಸಾಹ ನೀಡಿದೆ. ಇದರ ಜತೆಗೆ ಆರ್ಥಿಕವಾಗಿ ಹಿಂದುಳಿದಿರುವ ಎ.ಪಿ.ಎಲ್ ಕುಟುಂಬಗಳಿಗೂ ತನ್ನ ಅನುದಾನದಿಂದ ಸಹಾಯಧನವನ್ನು ನೀಡಿ ಪ್ರತಿಯೊಬ್ಬರು ಶೌಚಾಲಯವನ್ನು ನಿರ್ಮಾಣ ಮಾಡಿಕೊಳ್ಳುವಂತೆ ನೆರವು ನೀಡಿದೆ ಈ ಮುನಿರಾಬಾದ್ ಗ್ರಾಮ ಪಂಚಾಯಿತಿ.

ಬಯಲು ಶೌಚಾ ಬಿಟ್ಟು ಸಂಪೂರ್ಣ ಶೌಚಾಲಯ ವ್ಯವಸ್ಥೆ ಕಂಡುಕೊಂಡ ಮುನಿರಾಬಾದ್ ಗ್ರಾಮ ರಾಜ್ಯ ಸರ್ಕಾರ ನೀಡುವ ರಾಜ್ಯ ನೈರ್ಮಲ್ಯ ತಾಲ್ಲೂಕು, ಜಿಲ್ಲಾ ಮಟ್ಟದ ನೈರ್ಮಲ್ಯ ಪ್ರಶಸ್ತಿಗೆ ಭಾಜನವಾಗಿದೆ.

**ಸಂಪೂರ್ಣ ನೈರ್ಮಲ್ಯ ಆಂದೋಲನ ಅನುಷ್ಠಾನ :** ಗ್ರಾಮವನ್ನು ಬಯಲು ಮಲ ವಿಸರ್ಜನೆಯಿಂದ ಮುಕ್ತ ಮಾಡುವ ಸದುದ್ದೇಶದಿಂದ ಜಾರಿಯಾಗಿರುವ ಈ ಕಾರ್ಯಕ್ರಮದ ಅನುಷ್ಠಾನ ಪೂರ್ಣ ಜವಾಬ್ದಾರಿ ಗ್ರಾಮ ಪಂಚಾಯತಿಯದಾಗಿದೆ. ಈ ಕಾರ್ಯಕ್ರಮದ ಬಗ್ಗೆ ಗ್ರಾಮ ಪಂಚಾಯತಿ ಸಾಮಾನ್ಯ ಸಭೆಯಲ್ಲಿ ಚರ್ಚಿಸಿ ಪ್ರತಿಯೊಬ್ಬ ಗ್ರಾಮ ಪಂಚಾಯಿತಿ ಸದಸ್ಯರು ತಮ್ಮ ಮನೆಯಲ್ಲಿ ವೈಯಕ್ತಿಕ



ಶೌಚಾಲಯ ಕಟ್ಟಿಕೊಳ್ಳಬೇಕು ಎಂಬ ವಿಷಯ ಪಂಚಾಯಿತಿ ಸಾಮಾನ್ಯ ಸಭೆಯಲ್ಲಿ ನಿರ್ಣಯ ಪಾಸು ಮಾಡಲಾಯಿತು.

ಪ್ರತಿಯೊಬ್ಬ ಸದಸ್ಯರು ತಮ್ಮ ಮನೆಯಲ್ಲಿ ಶೌಚಾಲಯ ಕಟ್ಟಿಕೊಂಡ ನಂತರ ಗ್ರಾಮದ ಜನರಿಗೆ ಹಾಗೂ ತಮ್ಮ ತಮ್ಮ ವಾರ್ಡಿನ ಜನರಿಗೆ ತಿಳುವಳಿಕೆ ಕೊಡಬೇಕೆಂದು ನಿರ್ಧಾರ ಮಾಡಲಾಯಿತು. ಮತ್ತು ಗ್ರಾಮದಲ್ಲಿ ಬಿ.ಪಿ.ಎಲ್. ಕುಟುಂಬಳಿಗೆ ಸರಕಾರದ ಪ್ರೋತ್ಸಾಹಧನ ನೀಡಲು ನಿರ್ಧರಿಸಿ, ಗ್ರಾಮದ ಜನತೆಗೆ ಈ ಆಂದೋಲನದ ಬಗ್ಗೆ ತಿಳುವಳಿಕೆ ಮೂಡಿಸಲು ವಾರ್ಡ್ ಸಭೆ, ಗ್ರಾಮ ಸಭೆ, ಪ್ರತಿ ಸಾಮಾನ್ಯ ಸಭೆಯಲ್ಲಿ ಚರ್ಚೆ ಮಾಡಲಾಯಿತು.

ಈ ಯೋಜನೆಯ ಬಗ್ಗೆ ಸ್ವಾತಂತ್ರ ದಿನಾಚರಣೆ, ಗಾಂಧಿ ಜಯಂತಿ, ಅಂಬೇಡ್ಕರ ಜಯಂತಿ, ವಿವಿಧ ಜಯಂತಿಗಳಲ್ಲಿ ಸಾರ್ವಜನಿಕರಿಗೆ ಸರಕಾರದ ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮ ಮತ್ತು ಅದರ ಧ್ಯೇಯೋದ್ದೇಶದ ಬಗ್ಗೆ ಅರಿವು ಮೂಡಿಸಲಾಯಿತು.

ಪ್ರತಿಯೊಂದು ಕುಟುಂಬ ಶೌಚಾಲಯ ನಿರ್ಮಾಣ ಮಾಡಿಕೊಳ್ಳಲು ಅನುವಾಗುವಂತೆ ಪಂಚಾಯಿತಿಯಲ್ಲಿ ನಡೆಯುವ ಎಲ್ಲಾ ಸಭೆಗಳಲ್ಲಿ ಚರ್ಚಿಸಿ ನಿರ್ಣಯ ಕೈಗೊಂಡು ಇದಕ್ಕೆ ಒಂದು ಸಮಯ ನಿಗದಿಪಡಿಸಿ ಆ ಅವಧಿಯಲ್ಲಿ ಪಂಚಾಯಿತಿಯ ಗುರಿ ಮುಟ್ಟಲು ಪೂರಕವಾದ ಕ್ರಿಯಾ ಯೋಜನೆಯನ್ನು ರೂಪಿಸಲಾಯಿತು.

ಈ ಆಂದೋಲನದ ಕುರಿತು ಸಾರ್ವಜನಿಕರಲ್ಲಿ ತಿಳುವಳಿಕೆ ಮೂಡಿಸಲು ಪಂಚಾಯಿತಿ ವ್ಯಾಪ್ತಿಯಲ್ಲಿ ಬರುವ ಬೀದಿ ಬೀದಿಗಳಲ್ಲಿ, ಶಾಲಾ, ಅಂಗನವಾಡಿ, ಪಂಚಾಯಿತಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಗೋಡೆ ಬರಹ, ಶೌಚಾಲಯ ಬಿತ್ತಿಪತ್ರ, ಕರಪತ್ರ ಹಂಚಲಾಯಿತು.

ಪಂಚಾಯಿತಿಯಲ್ಲಿನ ಸ್ವಚ್ಛತೆಯ ಸಾಧನೆಗಳ ಬಗ್ಗೆ ಪತ್ರಿಕೆಗಳ ಮೂಲಕ ಪ್ರಕಟಣೆ, ವಿಶ್ವ ಶೌಚಾಲಯ ದಿನಾಚರಣೆ, ಪ್ರಾಥಮಿಕ ಹಾಗೂ ಪ್ರೌಢಶಾಲಾ ಮುಖ್ಯ ಗುರುಗಳ ಸಭೆ ಹಾಗೂ ಅಂಗನವಾಡಿ ಕಾರ್ಯಕರ್ತರ ಸಭೆ ಶಾಲಾ ಮಕ್ಕಳಿಂದ ಕಾರ್ಯಕ್ರಮ 'ಶೌಚಾಲಯ ಕಟ್ಟಿರಿ, ಶೌಚಾಲಯ ಬಳಸಿ'



ಎಂಬ ವಿಷಯದ ಬಗ್ಗೆ ಚರ್ಚಾಕೂಟ ಹಾಗೂ ಆರೋಗ್ಯ ಇಲಾಖೆ ಸಿಬ್ಬಂದಿಗಳ ಸಹಕಾರದಿಂದ ಶಾಲಾ ಮಕ್ಕಳಿಗೆ ಉಚಿತ ಆರೋಗ್ಯ ತಪಾಸಣಾ ಶಿಬಿರ ಹಮ್ಮಿಕೊಂಡು ಮಕ್ಕಳಲ್ಲಿ ವೈಯಕ್ತಿಕ ಸ್ವಚ್ಛತೆ ಬಗ್ಗೆ ಅರಿವು ಮೂಡಿಸಲಾಯಿತು.

ಇದಕ್ಕೆ ಪೂರಕವಾಗಿ ರಾಷ್ಟ್ರೀಯ ಮತ್ತು ಸಾಂಪ್ರದಾಯಿಕ ಹಬ್ಬಗಳಲ್ಲಿ ಸಾರ್ವಜನಿಕರಿಗೆ ರಾಜ್ಯ ನೈರ್ಮಲ್ಯ ಹಾಗೂ ನಿರ್ಮಲ ಗ್ರಾಮ ಪುರಸ್ಕಾರ ಕುರಿತು ಅರಿವನ್ನು ಮೂಡಿಸುವುದಕ್ಕಾಗಿ ಪ್ರಚಾರಾತ್ಮಕವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು. ಸಮುದಾಯ ಆಧಾರಿತ ಸಂಘಟನೆಗಳು ಹಾಗೂ ಗ್ರಾಮ ಪಂಚಾಯತ್ ಸದಸ್ಯರು, ಶಾಲಾ–ಅಂಗನವಾಡಿ ಶಿಕ್ಷಕರು, ಮಕ್ಕಳು ಹಾಗೂ ಕಾಲೇಜು ವಿದ್ಯಾರ್ಥಿಗಳಿಂದ 'ಸ್ವಚ್ಛತೆಗಾಗಿ ಶ್ರಮದಾನ' ಮಾಡಿ ಗ್ರಾಮದಲ್ಲಿ ಸ್ವಚ್ಛತೆಯ ಅರಿವು ಮೂಡಿಸಲಾಯಿತು.

ಗ್ರಾಮ ಪಂಚಾಯಿತಿ ವತಿಯಿಂದ ಸಮುದಾಯ ಶೌಚಾಲಯ ನಿರ್ಮಾಣ ಹಾಗೂ ವೈಯಕ್ತಿಕ ಶೌಚಾಲಯ ಕಟ್ಟಿಕೊಂಡವರಿಗೆ ರೂ. 3000/–ವರೆಗೆ ಪ್ರೋತ್ಸಾಹಧನ ಕೊಡಲಾಗಿದೆ. ಮತ್ತು ಸ್ವಚ್ಛತೆಯ ಬಗ್ಗೆ ಗ್ರಾಮದ ಜನರು ತಮ್ಮ ಮನೆಯಲ್ಲಿರುವ ಕಸವನ್ನು ಚರಂಡಿಗೆ ಎಸೆಯದಂತೆ ವಾರ್ಡ್‌ಗಳಲ್ಲಿ ಕಸದ ತೊಟ್ಟಿಯನ್ನು ಇಡಲಾಗಿದೆ. ಹಾಗೂ ಚರಂಡಿ ಸ್ವಚ್ಛತೆಯನ್ನು ಗ್ರಾಮ ಪಂಚಾಯತಿಯಿಂದ ಮಾಡಿಸಲಾಗುತ್ತಿದೆ.

**ಶಾಲಾ–ಕಾಲೇಜುಗಳ ಪಾತ್ರ :** ಈ ಮುನಿರಾಬಾದ್ ಡ್ಯಾಂ ಸಂಪೂರ್ಣ ಸ್ವಚ್ಛತೆ ಸಾಧಿಸುವಲ್ಲಿ ಇಲ್ಲಿನ ಶಾಲೆಗಳು




ಅತ್ಯಂತ ಮಹತ್ತರವಾದ ಪಾತ್ರವಹಿಸಿವೆ. ಪ್ರತಿ ಶನಿವಾರ ಶಾಲಾ ಕಾಲೇಜು ವಿದ್ಯಾರ್ಥಿಗಳು ಗ್ರಾಮದ ಪ್ರಮುಖ ಬೀದಿಗಳಲ್ಲಿ ಸ್ವಚ್ಛತೆಯ ಸಂದೇಶ ಸಾರುವ ನಾಮ ಫಲಕಗಳನ್ನು ಹಿಡಿದು ಕೊಂಡು ಜಾಥ ನಡೆಸುವ ಮೂಲಕ ಜನರಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಿದ್ದಾರೆ. ಇದರ ಜತೆಗೆ ತಮ್ಮ ಮನೆಗಳಲ್ಲಿ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಾಣ ಮಾಡಲು ತಮ್ಮ ಪೋಷಕರನ್ನು ಮನವೊಲಿಸುವಲ್ಲಿ ಯಶಸ್ವಿಯಾಗಿದ್ದಾರೆ, ಈ ಕಾರಣದಿಂದಲ್ಲೇ ಭಾಗ್ಯನಗರ ಸ್ವಚ್ಛತೆ ಸಾಧಿಸುವಲ್ಲಿ ಯಶಸ್ವಿ ಯಾಗಿದೆ.




**ಐ.ಇ.ಸಿ ಕಾರ್ಯಕ್ರಮಗಳು:** ಬಯಲು ಮಲ ವಿಸರ್ಜನೆ ಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು ಜಿಲ್ಲಾ ನೆರವು ಘಟಕ ಮತ್ತು ಗ್ರಾಮ ಪಂಚಾಯಿತಿ ಹಲವಾರು ಸಭೆ ಸಮಾರಂಭಗಳನ್ನು ಹಮ್ಮಿಕೊಂಡಿದೆ, ಬಯಲು ಮಲವಿಸರ್ಜನೆಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸುವಂತಹ ಗೋಡೆಬರಹಗಳನ್ನು ಬರೆಯಲಾಗಿದೆ. ಬ್ಯಾನರ್‌ಗಳು, ಫ್ಲೆಕ್ಸ್‌ಗಳನ್ನು ಗ್ರಾಮ ಪಂಚಾಯಿತಿಯ ಬೀದಿ ಬೀದಿಗಳಲ್ಲಿ ಪ್ರದರ್ಶನ ಮಾಡಲಾಗಿದೆ.

ಗ್ರಾಮ ಸಭೆ, ಶಾಲಾ ಮಟ್ಟದಲ್ಲಿ ಜಾಥ ಕಾರ್ಯಕ್ರಮ, ಪಂಚಾಯಿತಿ ಸದಸ್ಯರ ನೈರ್ಮಲ್ಯ ಜಾಗೃತಿ ಪಥಸಂಚಲನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಜನರಲ್ಲಿ ನೈರ್ಮಲ್ಯದ



ಬಗ್ಗೆ ಅರಿವು ಮೂಡಿಸಲಾಗಿದೆ. ಈಗಾಗಲೇ ಸ್ವಚ್ಛತೆ ಸಾಧಿಸಿರುವ ಶಿವಮೊಗ್ಗ ಜಿಲ್ಲೆಯಲ್ಲಿ ಸಂಪೂರ್ಣ ನೈರ್ಮಲ್ಯ ಆಂದೋಲನ ಯಶಸ್ವಿಯಾಗಿ ಜಾರಿಯಾದ ಬಗ್ಗೆ ಹೊರತಂದಿರುವ 'ಶಿವಮೊಗ್ಗದ ಕಿರು ಚಿತ್ರ'ವನ್ನು ಬೀದಿ ಬೀದಿಯಲ್ಲಿ ಪ್ರದರ್ಶನ ಮಾಡಲಾಗಿದೆ ಅಲ್ಲದೇ 'ಯಲ್ಡಕ್ಕೆ ಹೋಗುವುದೇಲ್ಲಿ' ಇತ್ಯಾದಿ ಕಿರುಚಿತ್ರಗಳನ್ನು ಪ್ರದರ್ಶನ ಮಾಡುವ ಮೂಲಕ ಜನರಲ್ಲಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಲಾಗಿದೆ. ಗ್ರಾಮ ಪಂಚಾಯಿತಿ ಜನ ಪ್ರತಿನಿಧಿಗಳ ಒಗ್ಗಟಿನ ಫಲವಾಗಿ ಇಂದು ಈ ಗ್ರಾಮ ಪಂಚಾಯಿತಿ ನೈರ್ಮಲ್ಯವನ್ನು ಕಾಣಲು ಸಾಧ್ಯವಾಗಿದೆ.

❑

# ಬೇಡ ಬಯಲು ಶೌಚ ಇರಲಿ ಗ್ರಾಮ ಸ್ವಚ್ಛ !

## ಯಡಹಳ್ಳಿ ಗ್ರಾಮ ಪಂಚಾಯಿತಿ

– ರಾಮಾಂಜನೇಯ ವಿ.ಎಚ್. *

ಆಧುನಿಕ ನವನಾಗರೀಕತೆಯಲ್ಲಿ ಮಾರು ಹೋಗುತ್ತಿರುವ ಇಂದಿನ ಸಮಾಜದಲ್ಲಿ ಪಾಶ್ಚಾತ್ಯ ಜೀವನ ಶೈಲಿಯನ್ನು ಅನುಕರಣೆ ಮಾಡುತ್ತಿರುವ ನಾವುಗಳು ಇಂದು ಸ್ವಚ್ಛ ಸಮಾಜವನ್ನು ನಿರ್ಮಾಣ ಮಾಡಬೇಕಿದೆ. 'ಶೌಚಕ್ಕಾಗಿ ನಮ್ಮ ನಡಿಗೆ ಬಯಲು ಕಡೆಗೆ' ಎನ್ನುವ ಜನರ ಮನೋಭಾವ ಬದಲಾಗಬೇಕು, ರಾಜ್ಯದ ಪ್ರತಿಯೊಂದು ಕುಟುಂಬವೂ ವೈಯಕ್ತಿಕ ಶೌಚಾಲಯವನ್ನು ನಿರ್ಮಾಣ ಮಾಡಿಕೊಂಡು, ಪ್ರತಿಯೊಂದು ಗ್ರಾಮವೂ ಬಯಲು ಮಲವಿಸರ್ಜನೆಯಿಂದ ಮುಕ್ತವಾಗಿ, ಸ್ವಚ್ಛ, ಸುಂದರ ಪರಿಸರದಿಂದ ಕೂಡಿರಬೇಕು. ಆ ಮೂಲಕ ಹಳ್ಳಿಗಾಡಿನ ಜನರ ಬದುಕು ಹಸನಾಗಬೇಕು ಎಂಬುದು ಸರ್ಕಾರದ ಆಶಯ.

ಆದರೆ ಇಂದಿನ ಸ್ಥಿತಿಯಲ್ಲಿ ಉತ್ತರ ಕರ್ನಾಟಕ ಭಾಗದ ಬಹುತೇಕ ಭಾಗಗಳಲ್ಲಿ ಬಯಲು ಮಲ ವಿಸರ್ಜನೆ ಅಲ್ಲಿನ ಜನರ ದಿನಚರಿಯ ಒಂದು ಭಾಗವಾಗಿದೆ. ಮಹಿಳೆಯರು ರಾತ್ರಿ ಹೊತ್ತು ಬಯಲಿಗೆ ತೆರಳಲು ಹೆದರಿದರೆ, ಪುರುಷರು ಶೌಚಾಲಯ ನಿರ್ಮಾಣ ಮಾಡಿಕೊಳ್ಳಲು ಆಸಕ್ತಿ ವಹಿಸುವುದಿಲ್ಲ. ಸರ್ಕಾರ ಇಲ್ಲಿಯವರೆಗೆ ಹಲವಾರು ಯೋಜನೆಗಳ ಮೂಲಕ ವೈಯಕ್ತಿಕ ಹಾಗೂ ಸಾಮೂಹಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಟ್ಟಿದೆ. ಆದರೂ ಸಹ ಜನರು ಬಯಲು ಶೌಚಕ್ಕೆ ಬ್ರೇಕ್ ಹಾಕಲು ಮನಸು ಮಾಡುತ್ತಿಲ್ಲ. ಪರಿಣಾಮ ಸೂರ್ಯ ಹುಟ್ಟುವ ಮುನ್ನ ಹಾಗೂ ಸೂರ್ಯಾಸ್ತದ ನಂತರ ಗ್ರಾಮೀಣ ಪ್ರದೇಶದ ಹೆಣ್ಣು ಮಕ್ಕಳು

ಗ್ರಾಮದಲ್ಲಿ ಶೌಚಾಲಯ ನಿರ್ಮಾಣ ಮಾಡಿಕೊಳ್ಳುವ ಪ್ರತಿಯೊಂದು ಕುಟುಂಬಕ್ಕೂ ನಂದಿನಿ ಸಕ್ಕರೆ ಕಾರ್ಖಾನೆ ತಲಾ ೨ ಸಾವಿರ ರೂ. ಪ್ರೋತ್ಸಾಹ ಧನವನ್ನಾಗಿ ನೀಡುವ ಮೂಲಕ ನೈರ್ಮಲ್ಯಕ್ಕೆ ಇಂಬು ನೀಡಿದೆ.



* ಐ.ಇ.ಸಿ ಸಮಾಲೋಚಕರು, ಆರ್.ಸಿಸಿಡಿಯು, ಗುಲ್ಬರ್ಗ



ತಂಬಿಗೆ ಹಿಡಿದು ಬಯಲಿನೆಡೆಗೆ ನಡೆಯುತ್ತಾರೆ. ಈ ಪ್ರವೃತ್ತಿಯಿಂದ ಗ್ರಾಮಗಳಲ್ಲಿ ಸ್ವಚ್ಛತೆಯ ಕೊರತೆ, ಅನಾರೋಗ್ಯಕ್ಕೆ ದಾರಿ ಮಾಡಿಕೊಟ್ಟಂತಾಗಿದೆ. ಮಲೀನತೆಯಿಂದ ಮಾರಕ ರೋಗಗಳು ಮಕ್ಕಳ ಮೇಲೆ ದಾಳಿ ಇಡುತ್ತಿವೆ.

ಇಂತಹ ಪ್ರವೃತ್ತಿಯನ್ನು ಹೋಗಲಾಡಿಸಿ, ಜನರಿಗೆ ಉತ್ತಮ ಆರೋಗ್ಯ ಮತ್ತು ಅವರ ಜೀವನ ಮಟ್ಟ ಸುಧಾರಿಸಬೇಕು, ಎಲ್ಲ ಸವಲತ್ತುಗಳು ಜನರಿಗೆ ತಲುಪಬೇಕು ಎಂಬ ಧ್ಯೇಯದೊಂದಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಜಂಟಿಯಾಗಿ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಜಾರಿಗೆ ತಂದು ಅನುಷ್ಠಾನ ಮಾಡುತ್ತಿವೆ. ಅದರ ಮಹತ್ವ, ಅದರ ಉಪಯೋಗ, ಗುರಿ, ಉದ್ದೇಶ, ಗ್ರಾಮೀಣ ಭಾಗದ ಜನರಿಗೆ ಸಂದೇಶ ತಲುಪಿ, ರಾಜ್ಯದ ಎಲ್ಲಾ ಗ್ರಾಮಗಳಲ್ಲಿನ ಪ್ರತಿಯೊಂದು ಕುಟುಂಬವು ವೈಯಕ್ತಿಕ ಶೌಚಾಲಯವನ್ನು ಹೊಂದಿ ಬಳಸುವಂತಹ ವಾತಾವರಣ ನಿರ್ಮಾಣ ಮಾಡಬೇಕಿದೆ. ಇದೇ ಮಾದರಿಯಲ್ಲಿ ತನ್ನದೇ ಆದ ಕಾರ್ಯತಂತ್ರವನ್ನು ರೂಪಿಸಿಕೊಂಡು ಇಡೀ ಗ್ರಾಮವನ್ನು ನೈರ್ಮಲ್ಯದತ್ತ ಕೊಂಡ್ಯೊಯ್ದ ಯೋಶೋಗಾಥೆ. ಬಾಗಲಕೋಟೆ ಬೀಳಗಿ ತಾಲ್ಲೂಕು ಯಡಹಳ್ಳಿ ಗ್ರಾಮದ್ದಾಗಿದೆ.

ನಿರತಂತರ ಪರಿಶ್ರಮದಿಂದ ಯಶಸ್ಸು ದೊರೆಯುತ್ತದೆ ಎಂಬುದಕ್ಕೆ ಬಾಗಲಕೋಟೆ ಜಿಲ್ಲೆ ಬೀಳಗಿ ತಾಲ್ಲೂಕು ಯಡಹಳ್ಳಿ ಗ್ರಾಮ ಪಂಚಾಯಿತಿ ಒಂದು ಮುಖ್ಯ ನಿದರ್ಶನವಾಗಿದೆ. ಕಳೆದ 3–4 ವರ್ಷಗಳ ಹಿಂದೆ ಯಡಹಳ್ಳಿ ಸ್ವಚ್ಛತೆಯಿಲ್ಲದೇ, ಕುಡಿಯುವ ನೀರು ಕಲುಷಿತಗೊಂಡು ಗ್ರಾಮದ ಜನರು ಹಲವಾರು ರೋಗಗಳಿಂದ ನರಳುತ್ತಿದ್ದರು. ಮನೆಗಳಲ್ಲಿ ಸ್ವಚ್ಛತೆ ಕಾಪಾಡಿಕೊಳ್ಳದೆ ಜನ ಎಲ್ಲೆಂದರಲ್ಲಿ ಕಸ ಹಾಕುವುದು, ಮಲವಿಸರ್ಜನೆ ಮಾಡುವುದು, ಉಗುಳುವುದು, ಇತ್ಯಾದಿ ಅನೈರ್ಮಲ್ಯದ ಅಭ್ಯಾಸಗಳನ್ನು ರೂಢಿಸಿಕೊಂಡಿದ್ದರು. ತಮ್ಮ ಮನೆಗಳಲ್ಲಿ ಬಾಲ್ಯಾವಸ್ಥೆಯ ಮಕ್ಕಳು ಮಾಡುವ ಮಲವನ್ನು ದಾರಿಯಲ್ಲಿ ಇಲ್ಲವೇ ಪಕ್ಕದ ಚರಂಡಿಯಲ್ಲಿ ಬಿಸಾಕುವ ಪದ್ಧತಿ ಅಲ್ಲಿನ ಜನರಲ್ಲಿ ಸರ್ವೆ ಸಾಮಾನ್ಯವಾಗಿತ್ತು, ಇನ್ನೂ ಯುವಕ–ಯುವತಿಯರು, ಹಿರಿಯರು, ವಯೋವೃದ್ಧರು, ಅಂಗವಿಕಲರು, ಮಹಿಳೆಯರು ಗ್ರಾಮದ ಬಯಲು ಅಥವಾ ರಸ್ತೆಯ ಇಕ್ಕೆಡೆಗಳಲ್ಲಿನ ಬೇಲಿಯ ಮರೆಯಲ್ಲಿ ತಮ್ಮ ನಿತ್ಯ ಕರ್ಮಗಳನ್ನು ಪೂರೈಸಿಕೊಂಡು ಬರುತ್ತಿದ್ದರು. ದಿನೇ ದಿನೇ ಈ ಗ್ರಾಮ ಬೆಳೆಯುತ್ತಾ ಹೋದಂತೆಲ್ಲ ಜನಸಂಖ್ಯೆಯು ಅಧಿಕವಾಗತೊಡಗಿತ್ತು ಆಗ ಗ್ರಾಮದಲ್ಲಿದ್ದ ಬಯಲು ಪ್ರದೇಶದಲ್ಲಿ ವಾಸದ ಮನೆಗಳು ನಿರ್ಮಾಣವಾಗತೊಡಗಿದವು, ಇಂತಹ ಸ್ಥಿತಿಯಲ್ಲಿ ಅಲ್ಲಿನ ಜನರು ಬಯಲು ಪ್ರದೇಶದಲ್ಲಿ ಮಲವಿಸರ್ಜನೆ ಮಾಡಲು ಸ್ವಲ್ಪ ಕಿರಿ ಕಿರಿ ಅನುಭವಿಸತೊಡಗಿದರು.

ಗ್ರಾಮದಲ್ಲಿ ಬೆರಳೆಣಿಕೆಯಷ್ಟು ಮಂದಿ ಶ್ರೀಮಂತರು ತಮ್ಮ ತಮ್ಮ ಮನೆಗಳಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಂಡಿದ್ದರು, ಅವರಿಗೆ ಈ ಬಿಸಿ ಅಷ್ಟೇನೂ ತಾಕಲಿಲ್ಲ, ಆದರೆ ಬಡ ಮತ್ತು ಮಧ್ಯಮ ವರ್ಗದ ಜನರಿಗೆ ಬಯಲಲ್ಲಿ ಮಲವಿಸರ್ಜನೆ ಮಾಡಲು ತುಂಬಾ ಕಿರಿ ಕಿರಿಯಾಗುವುದರ ಜತೆಗೆ ಯಾರ ಹೊಲದಲ್ಲಿ ಸಂಡಾಸ್ ಮಾಡಲು ಹೋದರೆ ಎಲ್ಲಿ ಬಯ್ಯುತ್ತಾರೋ ಎಂಬ ಆತಂಕದಲ್ಲಿ ತಮ್ಮ ನಿತ್ಯಕರ್ಮಗಳನ್ನು ಪೂರೈಸಿಕೊಳ್ಳುತ್ತಿದ್ದರು. ಇನ್ನು ಹೆಂಗಳೆಯರ ಪಾಡಂತೂ ಹೇಳ ತೀರದು, ರಸ್ತೆ ಬದಿಯಲ್ಲಿ ಕುಂತರೆ ಪೋಕಿರಿಗಳ ಕಾಟ, ಇನ್ನು ಹೊತ್ತು ಮುಳುಗಿದ ಮೇಲೆ ಹೋಗೋಣವೆಂದರೆ ಹುಳ–ಹುಪ್ಪಟೆಗಳ ಭಯ, ಈ ಸಮಯದಲ್ಲಿ ಜೊತೆಗೊಬ್ಬರು ಬೇಕು, ಎಲ್ಲಿಯೂ ಒಬ್ಬರೇ ಹೊರಗಡೆ ಹೋಗಲು ಭಯ–ಭೀತಿ. ಹೀಗೆ ನಾನಾ ತರಹದ ಮನೋಸಂಕಟಗಳನ್ನು ಅನುಭವಿಸುತ್ತಿದ್ದರು.

ಇಂತಹ ಸಂದರ್ಭದಲ್ಲಿ ಯಡಹಳ್ಳಿ ಗ್ರಾಮದ ಜನರ ನೆರವಿಗೆ ಬಂದಿದ್ದು ಸಂಪೂರ್ಣ ಸ್ವಚ್ಛತಾ ಆಂದೋಲನ. ಯಡಹಳ್ಳಿ ಗ್ರಾಮದಲ್ಲಿ ಬಯಲಿನಲ್ಲಿ ಮಲ ವಿಸರ್ಜನೆ ಮಾಡಲು ಬಹಳ ತೊಂದರೆ ಯಾಗುತ್ತಿದೆ ಎಂಬ ಅಂಶವನ್ನು ಅರಿತ ಪಂಚಾಯಿತಿ ಪ್ರತಿನಿಧಿಗಳು ತಾವೇ ಸ್ವತಃ ಜಿಲ್ಲಾ ನೆರವು ಘಟಕ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳನ್ನು ಖುದ್ದು ಭೇಟಿ ಮಾಡಿ, ಸಂಪೂರ್ಣ ಸ್ವಚ್ಛತಾ ಆಂದೋಲನದ ಬಗ್ಗೆ ಸಮಗ್ರವಾದ ಮಾಹಿತಿ ಪಡೆದು 'ನಮ್ಮ ಪಂಚಾಯಿಯಲ್ಲಿ ಈ ಆಂದೋಲನ

ಕಾರ್ಯಕ್ರಮವನ್ನು ಜಾರಿಗೊಳಿಸಿ ಮುಂದಿನ ಒಂದು ವರ್ಷದೊಳಗಾಗಿ ಯಡಹಳ್ಳಿ ಗ್ರಾಮ ಪಂಚಾಯಿತಿಯನ್ನು ನಿರ್ಮಲ ಗ್ರಾಮವನ್ನಾಗಿ ಮಾಡುತ್ತೇವೆ ಎಂದು ಸಿ.ಇ.ಓ ಅವರಲ್ಲಿ ವಾಗ್ದಾನ ಮಾಡಿದರು.

ಹೀಗೆ ಪಂಚಾಯಿತಿ ಪ್ರತಿನಿಧಿಗಳ ನಿರಂತರ ಪರಿಶ್ರಮ ಹಾಗೂ ಕಾಲ ಕಾಲಕ್ಕೆ ಬೇಕಾದ ನೆರವು ಅಗತ್ಯ ಮಾಹಿತಿಯನ್ನು ಜಿಲ್ಲಾ ನೆರವು ಘಟಕದ ವತಿಯಿಂದ ಪಡೆದು ಇಂದು ಯಡಹಳ್ಳಿ ಗ್ರಾಮ ಪಂಚಾಯಿತಿಯನ್ನು ನಿರ್ಮಲ ಗ್ರಾಮವನ್ನಾಗಿ ಮಾರ್ಪಾಡು ಮಾಡಿದ್ದಾರೆ ಇಲ್ಲಿನ ಜನರು.

ಆರಂಭದಲ್ಲಿ ಕೆಲವರು ತಮ್ಮ ಮನೆಗಳಲ್ಲಿ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಳ್ಳಲು ಹಿಂಜರಿಯುತ್ತಿದ್ದರು, ಸರ್ಕಾರವೇ ಎಲ್ಲಾ ಸಲಕರಣೆಗಳನ್ನು ನೀಡಲಿ, ನಮಗೆ ಶೌಚಾಲಯದಲ್ಲಿ ಸಂಡಾಸ್ ಮಾಡಿ ರೂಢಿಯಿಲ್ಲ ಬಯಲಿನಲ್ಲೇ ನಾವುಗಳು ಈ ಕಾರ್ಯವನ್ನು ಮುಗಿಸಿಕೊಳ್ಳುತ್ತೇವೆ, ಇತ್ಯಾದಿ ಕಾರಣಗಳನ್ನು ಹೇಳಿ ಜನರು ನುಣುಚಿಕೊಳ್ಳುವ ಪ್ರಯತ್ನ ಮಾಡುತ್ತಿದ್ದರು.

ಈ ವೇಳೆ ಜಿಲ್ಲಾ ನೆರವು ಘಟಕ ಬೀದಿ ನಾಟಕ, ಸಾಕ್ಷ್ಯಚಿತ್ರಗಳ ಪ್ರದರ್ಶನ, ಸಿ.ಎಲ್.ಟಿ.ಎಸ್ ಟ್ರಿಗರಿಂಗ್ ಮೂಲಕ ಬಯಲು ಮಲ ವಿಸರ್ಜನೆಯಿಂದ ಮನುಷ್ಯನಿಗೆ ಬರುವ ರೋಗಗಳು ಹಾಗೂ ಅದರಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಿದರು. ಇದರ ಜತೆಗೆ ಪ್ರತಿ ಶನಿವಾರ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು, ಶಿಕ್ಷಕರು, ಅಂಗನವಾಡಿ, ಆಶಾ ಕಾರ್ಯಕರ್ತೆಯರು, ಪಂಚಾಯಿತಿ ಪ್ರತಿನಿಧಿಗಳು, ಗ್ರಾಮಸ್ಥರು, ಸ್ತ್ರೀ ಶಕ್ತಿ, ಸ್ವಸಹಾಯ ಸಂಘದ ಪ್ರತಿನಿಧಿಗಳು ಮತ್ತು ಸಂಘ ಸಂಸ್ಥೆಗಳ ಜತೆಗೂಡಿ ಗ್ರಾಮದ ಬೀದಿ ಬೀದಿಗಳಲ್ಲಿ ಜಾಥಾ ನಡೆಸುವ ಮೂಲಕ ಜನರಲ್ಲಿ ಅರಿವು ಮೂಡಿಸಿ ಪ್ರೇರೇಪಣೆ ಮಾಡಲಾಯಿತು.

ವೈಯಕ್ತಿಕ ಬಯಲಲ್ಲಿ ಸಂಡಾಸ್ ಮಾಡಲು ಹೋಗುವ ಕುಟುಂಬಗಳನ್ನು ಗುರ್ತಿಸಿ ಅಂತವರ ಮನೆಗಳಿಗೆ ಮುತ್ತಿಗೆ ಹಾಕಿ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಳ್ಳುವಂತೆ ಪಂಚಾಯಿತಿ ಪ್ರತಿನಿಧಿಗಳು ಮತ್ತು ಜಿಲ್ಲಾ ನೆರವು ಘಟಕದ ಸಮಾಲೋಚಕರು ಮನವೊಲಿಸಿದರು.

ಮನೆಯಲ್ಲಿನ ಕಸ-ಕಡ್ಡಿಗಳನ್ನು ಗ್ರಾಮದ ರಸ್ತೆ ಬದಿಯಲ್ಲಿ ಹಾಕದೇ ಪ್ರತಿಯೊಂದು ಕುಟುಂಬವು ಪಂಚಾಯಿತಿ ನಿರ್ಮಿಸಿರುವ ಕಸದ ತೊಟ್ಟಿಗಳಲ್ಲೇ ವಿಲೇವಾರಿ ಮಾಡುತ್ತಾರೆ. ಊರಿನ ಮಧ್ಯೆಯಿದ್ದ ತಿಪ್ಪೆಗುಂಡಿಗಳನ್ನು ಬೇರೆಡೆಗೆ ಸ್ಥಳಾಂತರ ಮಾಡಲಾಗಿದೆ, ಪ್ರತಿವಾರ ಪಂಚಾಯಿತಿ ಸಿಬ್ಬಂದಿಯೇ ಗ್ರಾಮದಲ್ಲಿನ ಚರಂಡಿ, ರಸ್ತೆ ಸ್ವಚ್ಛಗೊಳಿಸುತ್ತಾರೆ. ಒಟ್ಟಾರೆ ಕಳೆದ 4 ವರ್ಷಗಳಿಂದ ಯಡಹಳ್ಳಿ ಗ್ರಾಮ ಪಂಚಾಯಿತಿಯಲ್ಲಿ ಮುದುಡಿದ ತಾವರೆ ಇಂದು ಅರಳಿ ಗ್ರಾಮದಲ್ಲಿ ಸುವಾಸನೆ ಬೀರುತ್ತಿದೆ.

**ಪಂಚಾಯಿತಿ ಮಟ್ಟದಲ್ಲಿ ನಡೆದ ಕಾರ್ಯಕ್ರಮಗಳು:** ಪಂಚಾಯಿತಿಯಲ್ಲಿ ಆಂದೋಲನ ಅನುಷ್ಠಾನ ಮಾಡುವ ಆರಂಭದ ಮೊದಲ ಭಾಗವಾಗಿ ಗ್ರಾಮ ಪಂಚಾಯತ್ ಮಟ್ಟದ ವಿವಿಧ ಇಲಾಖೆಗಳ ನೌಕರರು, ಸಂಘ ಸಂಸ್ಥೆಗಳ ಜನಪ್ರತಿನಿಧಿಗಳು, ಸ್ತ್ರೀಶಕ್ತಿ ಕೇಂದ್ರ, ಸ್ವಸಹಾಯ ಗುಂಪುಗಳ ಸದಸ್ಯರು, ಯುವಕ, ಯುವತಿಯರು, ಸಾರ್ವಜನಿಕರಿಗಾಗಿ ಒಂದು ದಿನದ ಅರಿವು ಕಾರ್ಯಾಗಾರವನ್ನು ಹಮ್ಮಿಕೊಂಡು ಸಂಪೂರ್ಣ ಸ್ವಚ್ಛತಾ ಆಂದೋಲನದ ಬಗ್ಗೆ ಅರಿವು ಮೂಡಿಸಲಾಯಿತು. ಶಾಲೆ, ಪ್ರೌಢಶಾಲೆ, ಪದವಿ ಪೂರ್ವ ಕಾಲೇಜು, ಅಂಗನವಾಡಿ ಕಾರ್ಯಕರ್ತೆಯರು, ಆರೋಗ್ಯ ಕಾರ್ಯಕರ್ತೆಯರು ವಸತಿ ನಿಲಯಗಳ ಮೇಲ್ವಿಚಾರಕರು, ಮುಖ್ಯೋಪಾಧ್ಯಾಯರು ಭಾಗವಹಿಸಿ ಕಾರ್ಯಾಗಾರವನ್ನು ಯಶಸ್ವಿಗೊಳಿಸಿದರು.

ತಾಲ್ಲೂಕಿನ ಸ್ತ್ರೀಶಕ್ತಿ ಕೇಂದ್ರಗಳ, ಸ್ವಸಹಾಯ ಗುಂಪುಗಳ ಹಾಗೂ ಮಹಿಳೆಯರಿಗಾಗಿ ತಾಲ್ಲೂಕು ಮಟ್ಟದ ಮಹಿಳಾ ಸಮಾವೇಶವನ್ನು ಹಮ್ಮಿಕೊಂಡು ಮಹಿಳೆಯರಿಗೆ ಶೌಚಾಲಯದ ಮಹತ್ವ ಕುರಿತು ಅರಿವು ಮೂಡಿಸಲಾಯಿತು. ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಬರುವ ಶಾಲೆ, ಪ್ರೌಢಶಾಲೆ, ಅಂಗನವಾಡಿ ಮಕ್ಕಳಿಂದ ವಿವಿಧ ಬಡಾವಣೆಗಳಲ್ಲಿ ಪ್ರಭಾತ ಪೇರಿ ನಡೆಸಿ ಜನಜಾಗೃತಿಗಾಗಿ ಆಂದೋಲನಕ್ಕೆ ಸಂಬಂಧಿಸಿದ ಘೋಷಣೆಗಳನ್ನು ಕೂಗಿಸಿ ಜನಜಾಗೃತಿ ಮೂಡಿಸಲಾಯಿತು.

**ಡಂಗುರ ಸಾರುವುದು :** ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿನ ವಿವಿಧ ಬಡಾವಣೆಗಳ ಜನರಿಗೆ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಿಸಿಕೊಳ್ಳಲು ಡಂಗುರ ಸಾರಿ ಜಾಗೃತರನ್ನಾಗಿ ಮಾಡಲಾಯಿತು. ಪ್ರತಿ ದಿನ ಬೆಳಿಗ್ಗೆ ಮತ್ತು ಸಾಯಂಕಾಲ ಗ್ರಾಮದ ಪ್ರತಿಯೊಂದು ಬೀದಿಯಲ್ಲಿ ಬಯಲು ಮಲ ವಿಸರ್ಜನೆ ಮಾಡುವವರಿಗೆ ದಂಡ ವಿಧಿಸಲಾಗುವುದು ಎಂದು ಪಂಚಾಯಿತಿವತಿಯಿಂದ ಡಂಗುರ ಸಾರಿ ಜನರಿಗೆ ತಿಳಿಹೇಳುವ ಕಾರ್ಯಕ್ರಮವನ್ನು ನಿರಂತರವಾಗಿ ಹಮ್ಮಿಕೊಂಡು ಆಂದೋಲನವನ್ನು ಯಶಸ್ವಿಗೊಳಿಸಲು ಕ್ರಿಯಾಯೋಜನೆ ರೂಪಿಸಲಾಯಿತು.

**ಭಿತ್ತಿ ಪತ್ರಗಳ ಹಂಚಿಕೆ :** ಯೋಜನೆಯ ಸದುಪಯೋಗಕ್ಕಾಗಿ ಹಾಗೂ ಯಶಸ್ವಿಗಾಗಿ ಬಯಲು ಮಲಮೂತ್ರ ವಿಸರ್ಜನೆಯ ದುಷ್ಪರಿಣಾಮಗಳು, ಹರಡುವ ರೋಗಗಳು, ತಡೆಗಟ್ಟುವ ವಿಧಾನಗಳನ್ನು ತಿಳಿಸುವ ಭಿತ್ತಿ ಪತ್ರಗಳನ್ನು ಹಂಚಿ ಸಾರ್ವಜನಿಕ ಸ್ಥಳಗಳಲ್ಲಿ ಅಂಟಿಸಿ ಜನಜಾಗೃತಿ ಮೂಡಿಸಲಾಯಿತು.

**ಬೀದಿನಾಟಕ, ಜಾನಪದ ಗೀತೆಗಳ, ರೂಪಕಗಳ ಪ್ರದರ್ಶನ :** ಬೀದಿ ನಾಟಕ ಪ್ರದರ್ಶನ, ಜಾನಪದ ಗೀತೆ, ನೃತ್ಯ ರೂಪಕಗಳ ಮೂಲಕ ಜನರಿಗೆ ಬಯಲು ಮಲ ವಿಸರ್ಜನೆಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಿ ಪ್ರತಿಯೊಬ್ಬರೂ ತಮ್ಮ ಮನೆಗಳಲ್ಲಿ ವೈಯಕ್ತಿಕ ಶೌಚಾಲಯಗಳನ್ನು ನಿರ್ಮಾಣಮಾಡಿಕೊಳ್ಳುವಂತೆ ಸಾರ್ವಜನಿಕರಿಗೆ ಮನವರಿಕೆ ಮಾಡಲಾಯಿತು.

**ಸಾಕ್ಷ್ಯ ಚಿತ್ರಗಳ ಪ್ರದರ್ಶನ :** ಸಂಪೂರ್ಣ ಸ್ವಚ್ಛತಾ ಆಂದೋಲನದ ಯಶಸ್ವಿಗಾಗಿ 40 ನಿಮಿಷಗಳ ಸಾಕ್ಷ್ಯಚಿತ್ರ ಪ್ರದರ್ಶನವನ್ನು ವಿವಿಧ ಬಡಾವಣೆಗಳಲ್ಲಿ ಪ್ರದರ್ಶನ ಮಾಡಿ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಮಾಡಲಾಯಿತು.

**ಗ್ರಾಮ ಪಂಚಾಯತ್ ಹಂತದ ಸಿ.ಎಲ್.ಟಿ.ಎಸ್. ತರಬೇತಿ :** ಬಯಲು ಮಲವಿಸರ್ಜನೆಯಿಂದಾಗುವ ದುಷ್ಪರಿಣಾಮಗಳು ಹಾಗೂ ಬಯಲಲ್ಲಿನ ಸಂಡಾಸ್ ಯಾವ ಯಾವ ಮಾಧ್ಯಮಗಳ ಮೂಲಕ ನಾವು ಸೇವಿಸುವ ಆಹಾರದಲ್ಲಿ ಸೇರುತ್ತದೆ ಎಂಬುದನ್ನು ಪ್ರಾತ್ಯಕ್ಷಿತೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವ ಸಿ.ಎಲ್.ಟಿ.ಎಸ್ ಟ್ರಿಗರಿಂಗ್ ವಿಧಾನಗಳನ್ನು ಪಂಚಾಯಿತಿ ಮಟ್ಟದಲ್ಲಿ ನಡೆಸಲಾಯಿತು.

ಯಡಹಳ್ಳಿ ಗ್ರಾಮ ಪಂಚಾಯತ್ ಮಟ್ಟದ ಜನಪ್ರತಿನಿಧಿಗಳು, ಸ್ತ್ರೀಶಕ್ತಿ ಕೇಂದ್ರ, ಸ್ವ-ಸಹಾಯ ಗುಂಪುಗಳ ಪ್ರತಿನಿಧಿಗಳು, ಯುವಕ/ಯುವತಿಯರು, ಗ್ರಾ.ಪಂ. ಸಿಬ್ಬಂದಿವರ್ಗ, ಅಂಗನವಾಡಿ, ಆಶಾ ಕಾರ್ಯಕರ್ತೆಯರಿಗಾಗಿ ಮೂರು ದಿನಗಳ ಕಾಲ ಈ ಸಿ.ಎಲ್.ಟಿ.ಎಸ್ ತರಬೇತಿ ಕಾರ್ಯಾಗಾರವನ್ನು ಹಮ್ಮಿಕೊಂಡು ಯೋಜನೆಯ ಯಶಸ್ವಿಗಾಗಿ ಸಮಗ್ರ ಮಾಹಿತಿ ನೀಡಿ ಸನ್ನದ್ಧರನ್ನಾಗಿ ಮಾಡಿ, ಇವರ ಮೂಲಕ ಪ್ರತಿ ವಾರ್ಡಿನಲ್ಲಿ ನಾಚಿಕೆ ನಡೆಗೆ ಇತ್ಯಾದಿ ಪ್ರೇರಣಾ ಸಾಧನಗಳನ್ನು ಬಳಸಿ ಗ್ರಾಮದಲ್ಲಿ ಪ್ರತಿಯೊಬ್ಬರು ತಮ್ಮ ಮನೆಗಳಲ್ಲಿ ವೈಯಕ್ತಿಕ ಶೌಚಾಲಯವನ್ನು ನಿರ್ಮಾಣ ಮಾಡಿಕೊಳ್ಳುವಂತೆ ಪ್ರೇರೇಪಣೆ ಮಾಡಲಾಯಿತು.

**ಬ್ಯಾನರ್‌ಗಳ ಬಳಕೆ :** ಗ್ರಾ.ಪಂ. ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಾದ ಸರ್ಕಾರಿ ದವಾಖಾನೆ, ಗ್ರಾ.ಪಂ. ಕಾರ್ಯಾಲಯ, ಶಾಲೆ, ಪ್ರೌಢಶಾಲೆ, ಬಸ್‌ನಿಲ್ದಾಣ, ಮುಂತಾದ ಸ್ಥಳಗಳಲ್ಲಿ ಬ್ಯಾನರ್‌ಗಳನ್ನು ಬಳಸಿ ಜನಜಾಗೃತಿ ಮೂಡಿಸಿ ಯೋಜನೆಯ ಯಶಸ್ವಿಗಾಗಿ ಪ್ರಯತ್ನಿಸಲಾಯಿತು.

**ನಿರ್ಮಲ ಗ್ರಾಮದ ಸಿದ್ದತೆಗಳು :** ಸ್ಥಳೀಯ ಸಂಘ ಸಂಸ್ಥೆಗಳ ಪದಾಧಿಕಾರಿಗಳೊಂದಿಗೆ ಮನೆ, ಮನೆಗೆ ಭೇಟಿ ನೀಡಿ ಸಾರ್ವಜನಿಕರ ಮನವೊಲಿಸಿ ವೈಯಕ್ತಿಕ ಶೌಚಾಲಯಗಳ ನಿರ್ಮಾಣ ಮತ್ತು ಸ್ವಚ್ಛತೆಯನ್ನು ಕಾಪಾಡುವ ಕ್ರಮಗಳ ಬಗ್ಗೆ ಪ್ರತಿಯೊಂದು ಮನೆಗೆ ತೆರಳಿ ಮನವರಿಕೆ ಮಾಡಿಕೊಡಲಾಯಿತು.

ಬಯಲು ಮಲ, ಮೂತ್ರ ವಿಸರ್ಜನೆಯಿಂದಾಗುವ ರೋಗಗಳ ಉತ್ಪಾದನೆ ಮತ್ತು ಅವುಗಳನ್ನು ತಡೆಗಟ್ಟುವ ಕ್ರಮಗಳನ್ನು ತಿಳಿಸಲಾಗಿದೆ.

ಶಾಲೆ, ಅಂಗನವಾಡಿ, ಪ್ರೌಢಶಾಲೆಗಳ ಮಕ್ಕಳಲ್ಲಿ ಜಾಗೃತಿ ಮೂಡಿಸಿ ಪ್ರತಿ ಮಗು ಕಡ್ಡಾಯವಾಗಿ ಶೌಚಾಲಯ ಬಳಕೆ ಮತ್ತು ಸ್ವಚ್ಛತೆ ಹೊಂದುವಂತೆ ಜಾಗೃತರನ್ನಾಗಿಸಿ/ಮಕ್ಕಳಿಂದ ಪಾಲಕ/ಪೋಷಕರ ಮನವೊಲಿಸುವ ಕೆಲಸ ನಿರ್ವಹಿಸಲಾಯಿತು.

ಗ್ರಾ.ಪಂ. ವ್ಯಾಪ್ತಿಯ ಶಾಲೆ, ಅಂಗನವಾಡಿ, ಪ್ರೌಢಶಾಲೆ, ಸಾರ್ವಜನಿಕ ಸ್ಥಳಗಳಲ್ಲಿ ಗಿಡ, ಮರಗಳನ್ನು ನೆಡಿಸಿ ನಿರ್ಮಲ ವಾತಾವರಣವನ್ನು ಸೃಷ್ಟಿಸಲಾಯಿತು.

**ಕೊಳಚೆ ನಿರ್ಮೂಲನಾ ಕ್ರಮಗಳು :** ರಸ್ತೆ, ಚರಂಡಿಗಳ ನಿರ್ಮಾಣ ಮತ್ತು ಸ್ವಚ್ಛತೆ :- ಗ್ರಾಮ ಪಂಚಾಯತಿ ವ್ಯಾಪ್ತಿಯ ಎಲ್ಲಾ ವಾರ್ಡ್‌ಗಳಲ್ಲಿ ಸುಗಮ ಸಂಚಾರ ಮತ್ತು ಸ್ವಚ್ಛತೆ ಹೊಂದಲು ರಸ್ತೆಗಳ ನಿರ್ಮಾಣ ಮತ್ತು ಚರಂಡಿಗಳ ನಿರ್ಮಾಣ ಹಾಗೂ ಅವುಗಳ ದುರಸ್ತಿ ಹಾಗೂ ಸ್ವಚ್ಛತೆಯನ್ನು ಮಾಡಿಸಲಾಯಿತು. ಕೊಳೆಯನ್ನು ಹೊಳೆತ್ತಲು ಕ್ರಮ ವಹಿಸಲಾಯಿತು.

**ಕಸದ ತೊಟ್ಟಿ ನಿರ್ಮಾಣ:** ಬಡಾವಣೆಗಳಲ್ಲಿ ಕಸದ ಸಂಗ್ರಹಣೆಗಾಗಿ ಕಸದ ತೊಟ್ಟಿ ನಿರ್ಮಿಸಿ, ಕಸದ ಸಂಗ್ರಹಣೆ ಮಾಡಿ ಸ್ವಚ್ಛತೆ ಕಾಪಾಡಲಾಯಿತು. ಸಂಗ್ರಹವಾದ ಕಸದ ವಿಲೇವಾರಿಯನ್ನು ಗ್ರಾಮದ ಹೊರಗಡೆ ಹಾಕಲು ಪಂಚಾಯಿತಿ ಜಾಗದಲ್ಲಿ ಬೃಹತ್ ಇಂಗು ಗುಂಡಿಯನ್ನು ನಿರ್ಮಾಣ ಮಾಡಲಾಗಿದೆ.

ಗ್ರಾಮಗಳ ಮಧ್ಯ ನೀರು ನಿಲ್ಲದಂತೆ ಕ್ರಮವಹಿಸುವುದು : ಗ್ರಾ.ಪಂ. ವ್ಯಾಪ್ತಿಯ ಎಲ್ಲಾ ಬಡಾವಣೆಗಳ ಮಧ್ಯದಲ್ಲಿ ನೀರು

ನಿಲ್ಲದಂತೆ ಜಾಗೃತಿ ವಹಿಸಿ ಮರಮ್ ಹಾಕಿಸಿ ರೋಗಗಳ ಉತ್ಪಾದನೆ ಹಾಗೂ ಮಲೀನತೆ ಮೂಡದಂತೆ ಕ್ರಮ ವಹಿಸಲಾಯಿತು.

**ಮನೆಗೊಂದು ಶೌಚಾಲಯ ನಿರ್ಮಾಣ :** ಯೋಜನೆಯ ಘೋಷಣೆಯಂತೆ ಮನೆಗೊಂದು ಶೌಚಾಲಯವನ್ನು ಎಪಿಎಲ್ ಮತ್ತು ಬಿಪಿಎಲ್ ಫಲಾನುಭವಿಗಳಿಂದ ನಿರ್ಮಿಸಿ ಅವುಗಳ ಬಳಕೆಯ ಹಂತಗಳು ಮತ್ತು ಸ್ವಚ್ಛತಾ ಕ್ರಮಗಳನ್ನು ತಿಳಿಸಿ ಅವುಗಳನ್ನಳವಡಿಸಿಕೊಂಡು ನೈರ್ಮಲ್ಯ ಹೊಂದಲು ಸಮಗ್ರವಾದ ಶ್ರಮದೊಂದಿಗೆ ಸಹಕಾರ ಕೋರಲಾಯಿತು.

**ನಂದಿ ಸಕ್ಕರೆ ಕಾರ್ಖಾನೆ ಸಹಾಯಹಸ್ತ :** ಯಡಹಳ್ಳಿ ಗ್ರಾಮದಲ್ಲಿ ಶೌಚಾಲಯ ನಿರ್ಮಾಣ ಮಾಡಿಕೊಳ್ಳುವ ಪ್ರತಿಯೊಂದು ಕುಟುಂಬಕ್ಕೂ ನಂದಿನಿ ಸಕ್ಕರೆ ಕಾರ್ಖಾನೆ ತಲಾ 2 ಸಾವಿರ ರೂ. ಪ್ರೋತ್ಸಾಹ ಧನವನ್ನಾಗಿ ನೀಡುವ ಮೂಲಕ ನೈರ್ಮಲ್ಯಕ್ಕೆ ಇಂಬು ನೀಡಿದೆ. ಇಂದು ಸಹ ಈ ಕಾರ್ಖಾನೆ ವತಿಯಿಂದ ಹೊಸದಾಗಿ ಶೌಚಾಲಯ ನಿರ್ಮಾಣ ಮಾಡಿಕೊಳ್ಳುವ ಕುಟುಂಬಗಳಿಗೆ ಪ್ರೋತ್ಸಾಹ ಧನವನ್ನು ನೀಡುತ್ತಿದೆ.

ಒಟ್ಟಾರೆ ಈ ಹಿಂದಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಶ್ರೀ ಎಸ್. ಪ್ರಕಾಶ್, ಇಂದಿನ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿಗಳಾದ ಎಸ್.ಜಿ ಪಾಟೀಲ್, ಉಪ ಕಾರ್ಯದರ್ಶಿ ವಿ.ಎಸ್. ಹೀರೆಮಠ್, ಯೋಜನಾ ನಿರ್ದೇಶಕರಾದ ಎನ್.ಕೆ ತೊರವಿ, ಬೀಳಗಿ ತಾಲ್ಲೂಕಿನ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಜಿಲ್ಲಾ ನೆರವು ಘಟಕದ ನಿರಂತರ ಪರಿಶ್ರಮ ದಿಂದ ಇಂದು ಈ ಪಂಚಾಯಿತಿ ಬಯಲು ಶೌಚಕ್ಕೆ ಬ್ರೇಕ್ ಹಾಕಿಸುವ ಮೂಲಕ ಅಲ್ಲಿನ ಜನರಲ್ಲಿ 'ಬೇಡ ಬಯಲು ಶೌಚ, ಇರಲಿ ಗ್ರಾಮ ಸ್ವಚ್ಛ' ಎಂಬ ಭಾವನೆ ಬೆಳೆದು ಪ್ರತಿಯೊಂದು ಕುಟುಂಬ ಶೌಚಾಲಯವನ್ನು ಬಳಸುವ ಮೂಲಕ ಗ್ರಾಮವನ್ನು ನೈರ್ಮಲ್ಯದೆಡೆಗೆ ಕೊಂಡೊಯ್ದಿದ್ದಾರೆ. ❑




**ಮಹಾತ್ಮಗಾಂಧಿ ಉದ್ಯೋಗ ಖಾತರಿ ಯೋಜನೆಯಡಿ ಫಲಾನುಭವಿಗಳ ಕೂಲಿ ಹಣ ನೇರವಾಗಿ ಆನ್‌ಲೈನ್ ಮುಖಾಂತರ ಅವರ ಬ್ಯಾಂಕ್ ಖಾತೆಗಳಿಗೆ ಪಾವತಿ ಮಾಡಲು ಇ–ಮೇಲ್‌ನ ತಂತ್ರಾಂಶದ ಅನುಷ್ಠಾನ ಪ್ರಕ್ರಿಯೆ ಬಾಕಿ ಇದ್ದು, ಗ್ರಾ.ಪಂ. ತಾ.ಪಂ. ಮತ್ತು ಜಿ.ಪಂ. ಅಧಿಕಾರಿಗಳಿಗೆ ಇಎಫ್‌ಎಂಎಸ್ ತಂತ್ರಾಂಶದ ತರಬೇತಿ ಕಾರ್ಯಾಗಾರವನ್ನು ದಿನಾಂಕ 16.4.2002 ರಿಂದ 23.4.2012ರವರೆಗೆ ಜಿಲ್ಲಾ ತರಬೇತಿ ಸಂಸ್ಥೆ, ಬೆಂಗಳೂರು ಗ್ರಾಮಾಂತರ ಇಲ್ಲಿ ಹಮ್ಮಿಕೊಂಡಿದ್ದು, ಮೊದಲನೆ ದಿನದ ತರಬೇತಿ ಕಾರ್ಯಾಗಾರದ ಉದ್ಘಾಟನೆ ಸಮಯದಲ್ಲಿ ತೆಗೆದ ಚಿತ್ರ.**

# ಗ್ರಾಮೀಣ ಸ್ವಚ್ಛತೆಯ ಸಾಧನೆಗೆ ರಾಷ್ಟ್ರ ಪ್ರಶಸ್ತಿ : ನಿರ್ಮಲ ಗ್ರಾಮ ಪುರಸ್ಕಾರ

– ಪ್ರವೀಣ್ ಹುಲಿಕುಂಟೆ *

ಪುರಸ್ಕಾರಕ್ಕಾಗಿ ಸ್ವಚ್ಛತೆ ಅಲ್ಲ. ಪುರಸ್ಕಾರ ಎನ್ನುವುದು ಕೇವಲ ಸ್ವಚ್ಛತೆಗೆ ಸಲ್ಲುವ ಗೌರವವೂ ಅಲ್ಲ. ಸ್ವಚ್ಛತೆಯನ್ನು ಮೀರಿದ ಮಹತ್ತರವಾದ ಉದ್ದೇಶ ಈ ಪುರಸ್ಕಾರದ ಹಿಂದಿದೆ. "ಸ್ವಚ್ಛತೆಯ ಮೂಲಕ ಗ್ರಾಮೀಣ ಜನರ ಆರೋಗ್ಯವನ್ನು ಸುಧಾರಿಸುವುದು ಹಾಗೂ ಆರೋಗ್ಯ ಸುಧಾರಣೆಯ ಮೂಲಕ ಗ್ರಾಮೀಣ ಜನರ ಜೀವನಮಟ್ಟವನ್ನು ಹೆಚ್ಚಿಸುವುದು" – ಇದು ಸ್ವಚ್ಛತಾ ಆಂದೋಲನದ ಮಹತ್ತರವಾದ ಉದ್ದೇಶ.

ಗ್ರಾಮೀಣ ಪ್ರದೇಶಗಳಲ್ಲಿ ಸ್ವಚ್ಛತೆಯನ್ನು ಸಾಧಿಸಲು ಪಂಚಾಯತ್ ರಾಜ್ ಸಂಸ್ಥೆಗಳನ್ನು ಉತ್ತೇಜಿಸುವ ಸಲುವಾಗಿ ಕೇಂದ್ರ ಸರ್ಕಾರದಿಂದ ನೀಡಲಾಗುತ್ತಿರುವ ರಾಷ್ಟ್ರೀಯ ಪುರಸ್ಕಾರವೇ ನಿರ್ಮಲ ಗ್ರಾಮ ಪುರಸ್ಕಾರ. ಇದು ಸಂಪೂರ್ಣ ಸ್ವಚ್ಛತಾ ಆಂದೋಲನದಲ್ಲಿ ಪರಿಪೂರ್ಣ ಸಾಧನೆಗೆ ಸಲ್ಲುವ ಗೌರವ. ಸ್ವಚ್ಛತಾ ಆಂದೋಲನದಲ್ಲಿ ಸೂಚಿಸಿರುವ ಈ ಕೆಳಗಿನ ಎಲ್ಲ ಅಂಶಗಳನ್ನು ಜಾರಿಗೆ ತಂದಿರುವ ಪಂಚಾಯತ್‌ಗಳು ಈ ಪ್ರಶಸ್ತಿಗೆ ಅರ್ಹತೆ ಪಡೆದಿರುತ್ತವೆ.

## ನಿರ್ಮಲ ಗ್ರಾಮ ಪುರಸ್ಕಾರ ಪಡೆಯಲು ಬೇಕಾದ ಅರ್ಹತೆಗಳು

- ಪಂಚಾಯತ್ ರಾಜ್ ಸಂಸ್ಥೆಯ ಎಲ್ಲ ಕುಟುಂಬಗಳೂ ಶೌಚಾಲಯ ನಿರ್ಮಿಸಿ ಕೊಂಡು ಬಳಸುತ್ತಿರಬೇಕು.
- ಪಂಚಾಯತ್ ಸಂಸ್ಥೆಯ ವ್ಯಾಪ್ತಿಯಲ್ಲಿನ ಎಲ್ಲ ಶಾಲೆ ಹಾಗೂ ಅಂಗನವಾಡಿಗಳಲ್ಲಿ ಶೌಚಾಲಯಗಳಿದ್ದು ಮಕ್ಕಳು ತಪ್ಪದೆ ಬಳಸುತ್ತಿರಬೇಕು. ಹಾಗೂ ಸ್ವಚ್ಛತೆಯ ನಿರ್ವಹಣೆ ಉತ್ತಮ ರೀತಿಯಲ್ಲಿರಬೇಕು ಹಾಗೂ ಶಾಲೆ ಮತ್ತು ಅಂಗನವಾಡಿಗಳು ಶುದ್ಧ ವಾತಾವರಣ ಹೊಂದಿರಬೇಕು.



- ಪಂಚಾಯತ್ ರಾಜ್ ಸಂಸ್ಥೆಯ ವ್ಯಾಪ್ತಿಯಲ್ಲಿ ಬರುವ ಎಲ್ಲ ಸಮುದಾಯ ಶೌಚಾಲಯಗಳ ಬಳಕೆ ಹಾಗೂ ನಿರ್ವಹಣೆ ಉತ್ತಮವಾಗಿರಬೇಕು.
- ಪಂಚಾಯತ್ ರಾಜ್ ಸಂಸ್ಥೆಯ ವ್ಯಾಪ್ತಿಯಲ್ಲಿನ ಗ್ರಾಮಗಳಲ್ಲಿ ಚರಂಡಿಗಳು, ರಸ್ತೆಗಳು ಸ್ವಚ್ಛವಾಗಿರಬೇಕು.
- ಕುಡಿಯುವ ನೀರಿನ ಮೂಲಗಳು ಸ್ವಚ್ಛವಾಗಿರಬೇಕು.
- ಒಟ್ಟಾರೆ ಪಂಚಾಯತ್ ರಾಜ್ ಸಂಸ್ಥೆಯ ವ್ಯಾಪ್ತಿಯಲ್ಲಿನ ಎಲ್ಲ ಗ್ರಾಮಗಳಲ್ಲಿ ಕಡ್ಡಾಯವಾಗಿ ಬಯಲು ಮಲ ವಿಸರ್ಜನೆ ಮುಕ್ತಗೊಂಡಿರಬೇಕು. ಇಂತಹ ಸಾಧನೆಯನ್ನು ಮಾಡಿದ ಗ್ರಾಮ, ತಾಲ್ಲೂಕು ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ನೀಡಲಾಗುವ ಸನ್ಮಾನವೇ ನಿರ್ಮಲ ಗ್ರಾಮ ಪುರಸ್ಕಾರ.

ಅಂದರೆ, ಪುರಸ್ಕಾರಕ್ಕಾಗಿ ಸ್ವಚ್ಛತೆ ಅಲ್ಲ. ಪುರಸ್ಕಾರ ಎನ್ನುವುದು ಕೇವಲ ಸ್ವಚ್ಛತೆಗೆ ಸಲ್ಲುವ ಗೌರವವೂ ಅಲ್ಲ. ಸ್ವಚ್ಛತೆಯನ್ನು ಮೀರಿದ ಮಹತ್ತರವಾದ ಉದ್ದೇಶ ಈ ಪುರಸ್ಕಾರದ ಹಿಂದಿದೆ. "ಸ್ವಚ್ಛತೆಯ ಮೂಲಕ ಗ್ರಾಮೀಣ ಜನರ ಆರೋಗ್ಯವನ್ನು ಸುಧಾರಿಸುವುದು ಹಾಗೂ ಆರೋಗ್ಯ ಸುಧಾರಣೆಯ ಮೂಲಕ ಗ್ರಾಮೀಣ ಜನರ ಜೀವನಮಟ್ಟವನ್ನು ಹೆಚ್ಚಿಸುವುದು" – ಇದು ಸ್ವಚ್ಛತಾ ಆಂದೋಲನದ ಮಹತ್ತರವಾದ ಉದ್ದೇಶ. ಈ ಸ್ವಚ್ಛತೆಯ ಕೆಲಸ ಪುರಸ್ಕಾರಕ್ಕಿಂತಲೂ ಮಿಗಿಲಾದ ಧನ್ಯತೆಯನ್ನು, ತೃಪ್ತಿಯನ್ನು ತಂದಿದೆ. ಅನೇಕ ಪಂಚಾಯತ್‌ಗಳ ಅಧ್ಯಕ್ಷರು, ಸದಸ್ಯರು ಹಾಗೂ ಕಾರ್ಯದರ್ಶಿಗಳು ದಶಕಗಳಿಂದ ಮಾಡಲು ಸಾಧ್ಯವಾಗದೇ ಇದ್ದ ಬದಲಾವಣೆಯನ್ನು ತಮ್ಮ ಅಧಿಕಾರದ ಅವಧಿಯಲ್ಲಿ ಮಾಡಿರುವ ಬಗ್ಗೆ ಸಂತಸ ವ್ಯಕ್ತಪಡಿಸುತ್ತಾರೆ. ಸ್ವಚ್ಛತೆಯ ಈ ಕೆಲಸ ಆಗಬೇಕೆಂದು ಪಣ ತೊಟ್ಟ ಅವರುಗಳು ಕೆಲಸ ಮುಗಿದ ಬಳಿಕ, "ಇನ್ನು ಪ್ರಶಸ್ತಿ ಬರದಿದ್ದರೂ ಬೇಡ, ಕೆಲಸ ಮಾಡಿದೆವಲ್ಲ" ಎಂಬ ಧನ್ಯತಾ ಭಾವ ವ್ಯಕ್ತಪಡಿಸಿದ್ದಾರೆ.

ಇದೇ ಗಾಂಧೀಜಿ ಕಂಡ ಕನಸಾಗಿತ್ತು. ಸ್ವಚ್ಛತೆಯನ್ನು, ನೈರ್ಮಲ್ಯವನ್ನು ಸ್ವಾಭಿಮಾನದ ಸಂಕೇತವಾಗಿ ಕಂಡ ಗಾಂಧೀಜಿ 'ಪ್ರತಿಯೊಬ್ಬರೂ ಸ್ವತಃ ಜಾಡಮಾಲಿಗಳಾಗಬೇಕು' ಎಂದು ಕರೆ ನೀಡಿದ್ದರು. ಈ ಕನಸನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ರಾಜ್ಯದ ಗ್ರಾಮ ಪಂಚಾಯಿತಿಗಳು ಮಹತ್ತರ ಹೆಜ್ಜೆ ಇಟ್ಟಿವೆ. ಈವರೆಗೆ ರಾಜ್ಯದ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತಿ, 6 ತಾಲ್ಲೂಕು ಪಂಚಾಯಿತಿಗಳೂ ಸೇರಿದಂತೆ 1069 ಗ್ರಾಮ ಪಂಚಾಯಿತಿಗಳು ಬಯಲು ಮಲ ವಿಸರ್ಜನೆಯಿಂದ ಮುಕ್ತಗೊಂಡು, ಸಂಪೂರ್ಣ ಸ್ವಚ್ಛತೆಯನ್ನು ಸಾಧಿಸಿವ ಮೂಲಕ ನಿರ್ಮಲ ಗ್ರಾಮ ಪುರಸ್ಕಾರದ ಗೌರವಕ್ಕೆ ಪಾತ್ರವಾಗಿವೆ.

ಈ ಪುರಸ್ಕಾರ ಪಡೆಯಲು ಗ್ರಾಮ ಪಂಚಾಯಿತಿಗಳು ಸವೆಸಿದ ಹಾದಿ ಸುಲಭದ್ದೇನಲ್ಲ. ಸಹಸ್ರಾರು ವರ್ಷಗಳಿಂದ ಗ್ರಾಮೀಣ ಪರಿಸರದಲ್ಲಿ ರೂಢಿಯಲ್ಲಿರುವ ಬಯಲು ಮಲ ವಿಸರ್ಜನೆಯಂತ ಕೆಟ್ಟ ಪದ್ಧತಿಯನ್ನು ನಿರ್ಮೂಲನೆ ಮಾಡಲಾಗಿದೆ. ಬಯಲು ಮಲ ವಿಸರ್ಜನೆ, ನೀರಿಲ್ಲದ ಶೌಚಾಲಯ ಮತ್ತು ಕೈಗಳಿಂದ ಮಲ ವಿಲೇವಾರಿ ಪದ್ಧತಿಗಳಿಗೆ ಸಂಪೂರ್ಣವಾಗಿ ಇತಿಶ್ರೀ ಹಾಡಲಾಗಿದೆ. ಹಾಗಾಗಿ ಇಂದು ಈ ಎಲ್ಲ ಪಂಚಾಯಿತಿಗಳ ಪ್ರತೀ ಮನೆಗಳಲ್ಲಿಯೂ ಶೌಚಾಲಯಗಳಿವೆ. ಹಿಂದೆಲ್ಲಾ ಬಯಲಿಗೆ ಹೋಗುತ್ತಿದ್ದ ಇಲ್ಲಿನ ಜನರೀಗ ಮಲ–ಮೂತ್ರ ವಿಸರ್ಜನೆಗೆ ಶೌಚಾಲಯಗಳನ್ನು ಬಳಸುತ್ತಿದ್ದಾರೆ. ಅಷ್ಟೇ ಅಲ್ಲ; ಸದರಿ ಗ್ರಾಮ ಪಂಚಾಯಿತಿಗಳ ಎಲ್ಲ ಶಾಲೆಗಳಿಗೆ ಹಾಗೂ ಅಂಗನವಾಡಿಗಳಿಗೆ ಶೌಚಾಲಯ ಸೌಲಭ್ಯ ಒದಗಿಸಲಾಗಿದೆ. ಮಕ್ಕಳು ಶಾಲಾ ಸಮಯದಲ್ಲಿ ಮಲ–ಮೂತ್ರಗಳ ವಿಸರ್ಜನೆಗೆ ಖಡ್ಡಾಯವಾಗಿ ಶೌಚಾಲಯವನ್ನು ಬಳಸುತ್ತಿದ್ದಾರೆ. ಶುಚಿತ್ವದ ಅಭ್ಯಾಸಗಳೊಂದಿಗೆ ಎಳೆಯ ವಯಸ್ಸಿನಿಂದಲೇ ಬದುಕಿನ ಸುಧಾರಣೆಯ ಹಾದಿಯಲ್ಲಿ ಹೆಜ್ಜೆ ಹಾಕುತ್ತಿದ್ದಾರೆ.

ಈ ಗ್ರಾಮಗಳಲ್ಲೀಗ ಬಳಸಿದ ನೀರು, ಕೊಳಚೆ, ಕಸ, ಗಲೀಜುಗಳ ಹಾವಳಿಯಿಲ್ಲ; ಬದಲಾಗಿ ಇಡೀ ಗ್ರಾಮದ ಕಸ–ಕೊಳಚೆಗಳ ಸೂಕ್ತ ವಿಲೇವಾರಿ ಮಾಡಲಾಗುತ್ತಿದೆ. ಇಡೀ ಹಳ್ಳಿಗಳಲ್ಲಿ ಸ್ಥಾಪಿತವಾಗಿರುವ ಸ್ವಚ್ಛ ಪರಿಸರ ಆ ಹಳ್ಳಿಗಳಿಗೊಂದು ಮೆರುಗು ನೀಡಿವೆ. ಇದಕ್ಕೊಂದು ಇಂಬು ಎಂಬಂತೆ ನಿರ್ಮಲ ಗ್ರಾಮ ಪುರಸ್ಕಾರದ ಕಳಶ ಈ ಗ್ರಾಮ ಪಂಚಾಯಿತಿಗಳನ್ನು ಅಲಂಕರಿಸಿದೆ.

## 2007 ರಿಂದ 2011 ರವರೆಗಿನ ನಿರ್ಮಲ ಗ್ರಾಮ ಪುರಸ್ಕಾರ ಸಾಧನೆ ವಿವರ

| ಕ್ರ.ಸಂ | ಜಿಲ್ಲೆಗಳು | ಒಟ್ಟು ಗ್ರಾಮ ಪಂಚಾಯತಿಗಳು | ನಿರ್ಮಲ ಗ್ರಾಮ ಪುರಸ್ಕಾರ ಪಡೆದ ಗ್ರಾಮಪಂಚಾಯಿತಿಗಳ ವರ್ಷವಾರು ವಿವರ | | | | |
|---|---|---|---|---|---|---|---|
| | | | **2007** | **2008** | **2009** | **2010** | **2011** |
| 1 | ಶಿವಮೊಗ್ಗ | 260 | 23 | 168 | 39 | 4 | 1 |
| 2 | ಮಂಗಳೂರು | 203 | 49 | 131 | 23 | – | – |
| 3 | ಉಡುಪಿ | 146 | 11 | 59 | 36 | 1 | – |
| 4 | ಉತ್ತರ ಕನ್ನಡ | 207 | 11 | 50 | 22 | 5 | 1 |
| 5 | ಚಿಕ್ಕಮಗಳೂರು | 226 | 5 | 40 | 10 | 4 | 6 |
| 6 | ಕೊಡಗು | 98 | 12 | 5 | 17 | 22 | 4 |
| 7 | ಮೈಸೂರು | 235 | 3 | 2 | 0 | 4 | 8 |
| 8 | ಹಾಸನ | 258 | 2 | 6 | 10 | – | 5 |
| 9 | ಬೆಂಗಳೂರು (ನ) | 86 | 2 | 2 | 5 | 1 | 4 |
| 10 | ಬೆಳಗಾಂ | 485 | 1 | 6 | 19 | 5 | 12 |
| 11 | ದಾವಣಗೆರೆ | 230 | _ | 3 | 2 | 10 | 11 |
| 12 | ಬೆಂಗಳೂರು (ಗ್ರಾ) | 98 | _ | _ | 40 | 3 | 10 |
| 13 | ರಾಮನಗರ | 130 | 1 | _ | _ | – | 4 |
| 14 | ಕೊಪ್ಪಳ | 134 | _ | _ | 1 | 21 | 3 |
| 15 | ಧಾರವಾಡ | 127 | _ | 2 | 4 | 3 | 11 |
| 16 | ಬೀದರ್ | 175 | _ | _ | 1 | – | – |
| 17 | ಚಿತ್ರದುರ್ಗ | 185 | 1 | _ | _ | 6 | 1 |
| 18 | ಗದಗ | 106 | _ | _ | _ | 2 | 1 |
| 19 | ಹಾವೇರಿ | 206 | _ | _ | _ | – | 3 |
| 20 | ಬಾಗಲಕೋಟೆ | 163 | _ | 1 | 4 | – | 4 |
| 21 | ಮಂಡ್ಯ | 232 | _ | _ | 7 | 20 | 3 |
| 22 | ಬಳ್ಳಾರಿ | 189 | _ | _ | _ | – | 1 |
| 23 | ಕೋಲಾರ | 156 | _ | _ | 2 | 3 | 4 |
| 24 | ಚಿಕ್ಕಬಳ್ಳಾಪುರ | 151 | _ | _ | 1 | 1 | – |
| 25 | ಚಾಮರಾಜನಗರ | 120 | _ | _ | _ | 1 | 2 |
| 26 | ತುಮಕೂರು | 321 | _ | 4 | 1 | – | – |
| 27 | ರಾಯಚೂರು | 164 | _ | _ | _ | 1 | – |
| 28 | ಬಿಜಾಪುರ | 199 | _ | _ | 1 | 1 | 2 |
| 29 | ಗುಲ್ಬರ್ಗ | 220 | _ | _ | _ | 1 | 1 |
| 30 | ಯಾದಗೀರ್ | 117 | _ | _ | _ | 1 | 1 |
| | **ಒಟ್ಟು** | **5627** | **121** | **479** | **245** | **121** | **103** |

# 2011ನೇ ಸಾಲಿಗೆ ನಿರ್ಮಲ ಗ್ರಾಮ ಪುರಸ್ಕಾರ ಪಡೆದ ಗ್ರಾಮ ಪಂಚಾಯತಿಗಳ ವಿವರ

| ಕ್ರ.ಸಂ | ರಾಜ್ಯ | ಜಿಲ್ಲೆ | ತಾಲ್ಲೂಕು | ಗ್ರಾಮ ಪಂಚಾಯತಿ |
|---|---|---|---|---|
| 1 | ಕರ್ನಾಟಕ | ಬಾಗಲಕೋಟೆ | ಬಾದಾಮಿ | ಕೋಟಿಕಲ್ |
| 2 | | | ಬಾಗಲಕೋಟೆ | ಗದ್ದನಕೇರಿ |
| 3 | | | ಹುನಗುಂದ | ಸೂಲೀಬಾವಿ |
| 4 | | | ಮುದೋಳ್ | ಸೈದಾಪುರ |
| 5 | | ಬೆಂಗಳೂರು (ಗ್ರಾ) | ದೇವನಹಳ್ಳಿ | ನಲ್ಲೂರು |
| 6 | | | | ವೆಂಕಟಗಿರಿಕೋಟೆ |
| 7 | | | | ಯಲ್ಲಿಯೂರು |
| 8 | | | ದೊಡ್ಡಬಳ್ಳಾಪುರ | ಚೆನ್ನದೇವಿ ಅಗ್ರಹಾರ |
| 9 | | | | ಕಂಟನಕುಂಟೆ |
| 10 | | | ಹೊಸಕೋಟೆ | ದೇವನಗುಂದ |
| 11 | | | | ಜಡಿಗೇನಹಳ್ಳಿ |
| 12 | | | | ಲಕ್ಕೊಂಡನಹಳ್ಳಿ |
| 13 | | | ನೆಲಮಂಗಲ | ಅಗಲಗುಪ್ಪೆ |
| 14 | | | | ಸೊಲದೇವನಹಳ್ಳಿ |
| 15 | | ಬೆಂಗಳೂರು (ನ) | ಆನೇಕಲ್ | ಬಲ್ಲೂರು |
| 16 | | | ಬೆಂಗಳೂರು ಉತ್ತರ | ಗಂಟಿಗಾನಹಳ್ಳಿ |
| 17 | | | ಬೆಂಗಳೂರು ದಕ್ಷಿಣ | ಕುಂಬಳಗೋಡು |
| 18 | | | | ರಾಮೋಹಳ್ಳಿ |
| 19 | | ಬೆಳಗಾಂ | ಬೆಳಗಾಂ | ಬಾಳೆಕುಂದಿರಿಗೆ ಕೆ.ಹೆಚ್. |
| 20 | | | | ಬಾಳೆಕುಂದಿರೆಗೆ ಬಿ.ಕೆ. |
| 21 | | | | ಬಿಜಗರನಿ |
| 22 | | | | ಹಾಲಗ |

| | | | | |
|---|---|---|---|---|
| 23 | | ಬೆಳಗಾಂ | | ಕಲಬಾವಿ |
| 24 | | | ಬೈಲಹೊಂಗಲ | ಪತ್ತಿಹಾಲ್ ಕೆ.ಬಿ |
| 25 | | | | ತುರಮರಿ |
| 26 | | | ಗೋಕಾಕ್ | ಸುನದ್‌ಹೋಲಿ |
| 27 | | | ಹುಕ್ಕೇರಿ | ಭಸ್ತ್‌ವಾಡ್ |
| 28 | | | | ಬೆನವಾಡ್ |
| 29 | | | ಸವದತ್ತಿ | ಕೋಟೂರು – ಶಿವಪುರ |
| 30 | | | ರಾಮದುರ್ಗ | ಮನಿಹಾಲ್ |
| 31 | | ಬಳ್ಳಾರಿ | ಸಂಡೂರು | ಭುಜಂಗನಗರ |
| 32 | | ಬಿಜಾಪುರ | ಬಸವನ ಬಾಗೇವಾಡಿ | ಬೈಕಾಡ್ |
| 33 | | | | ವಡವಡಗಿ |
| 34 | | ಚಾಮರಾಜನಗರ | ಗುಂಡ್ಲುಪೇಟೆ | ತೆರಕನಂಬಿ |
| 35 | | | ಕೊಳ್ಳೆಗಾಲ | ರಾಮಾಪುರ |
| 36 | | ಚಿಕ್ಕಮಗಳೂರು | ಚಿಕ್ಕಮಗಳೂರು | ಅನೂರು |
| 37 | | | | ಶಿರ್ವಾಸೇ |
| 38 | | | ಕೊಪ್ಪ | ಗುಡ್ಡೇತೊಪ್ಪ |
| 39 | | | | ಹೀರೇಗುಡ್ಡೆ |
| 40 | | | ಮೂಡಿಗೆರೆ | ಕುಂದೂರು |
| 41 | | | ನರಸಿಂಹರಾಜಪುರ | ಆಡುವಳ್ಳಿ (ಗದಿಗೇಶ್ವರ) |
| 42 | | ಚಿತ್ರದುರ್ಗ | ಹೊಸದುರ್ಗ | ಕಂಚೀಪುರ |
| 43 | | ದಾವಣಗೆರೆ | ಚನ್ನಗಿರಿ | ಅಜ್ಜಿಹಳ್ಳಿ |
| 44 | | | | ಜೋಳ್ದಾಲ್ |
| 45 | | | | ಕಾಮ್‌ಸಾಗರ |
| 46 | | | ದಾವಣಗೆರೆ | ಬಸವನಲು |
| 47 | | | | ಬೆಟ್ಟೂರು |
| 48 | | | | ಗೊಪ್ಪನಲು |

| | | | | |
|---|---|---|---|---|
| 49 | | ದಾವಣಗೆರೆ | ಹರಿಹರ | ದೇವರಬೆಲಕೆರೆ |
| 50 | | | | ಹರಲಹಳ್ಳಿ |
| 51 | | | | ಜಿಗಲಿ |
| 52 | | | ಹೊನ್ನಾಲಿ | ಹೆಚ್. ಕಡದಕಟ್ಟೆ |
| 53 | | | ಜಗಳೂರು | ಬಿದರೇಕೆರೆ |
| 54 | | ಧಾರವಾಡ | ಧಾರವಾಡ | ಬೆಳ್ಳೂರು |
| 55 | | | | ಮಂದಿಹಾಳ್ |
| 56 | | | | ಮುಮ್ಮಿಗಟ್ಟಿ |
| 57 | | | | ಶಿವಳ್ಳಿ |
| 58 | | | ಹುಬ್ಬಳ್ಳಿ | ಚಬ್ಬಿ |
| 59 | | | | ಕಾಟನೂರು |
| 60 | | | | ವರೂರು |
| 61 | | | ಕಲ್ಘಟಗಿ | ಜಿನ್ನೂರು |
| 62 | | | | ತಂಬೂರು |
| 63 | | | ಕುಂದಗೋಳ್ | ಯಲಿವಾಲ |
| 64 | | | ನವಲಗುಂದ | ಹೆಬ್ಬಾಳ |
| 65 | | ಗದಗ | ಗದಗ | ಬೆಲ್ದಾಡಿ |
| 66 | | ಗುಲ್ಬರ್ಗ | ಸೇಡಂ | ದುಗ್ಗನೂರು |
| 67 | | | ಶೋರಾಪುರ | ಕೋಡೆಕಲ್ |
| 68 | | ಹಾಸನ | ಹೋಳೇನರಸೀಪುರ | ಕಟ್ಟೆಬೆಲಗುಲಿ |
| 69 | | | ಸಕಲೇಶಪುರ | ಬ್ಯಾಕಾರವಳ್ಳಿ |
| 70 | | | | ದೇವಲದಕೆರೆ |
| 71 | | | | ಕುರುಬತ್ತೂರು |
| 72 | | | | ಕ್ಯಾಮನಹಳ್ಳಿ |
| 73 | | ಹಾವೇರಿ | ಬ್ಯಾಡಗಿ | ಹೀರೇಹಳ್ಳಿ |
| 74 | | | ಹಾನಗಲ್ | ಗೊಂದಿ |
| 75 | | | ಹೀರೇಕೆರೂರು | ಅಬಲೂರು |

| | | | | |
|---|---|---|---|---|
| 76 | | ಕೊಡಗು | ಮಡಿಕೇರಿ | ಭಾಗಮಂಡಲ |
| 77 | | | ಸೋಮವಾರಪೇಟೆ | ದುಂದಳ್ಳಿ |
| 78 | | | | ನೇರುಗಳಲೇ |
| 79 | | | ವೀರಾಜಪೇಟೆ | ಶ್ರೀಮಂಗಲ |
| 80 | | ಕೋಲಾರ | ಬಂಗಾರಪೇಟೆ | ಹುನಕುಂದ |
| 81 | | | | ಕಾಮಸಮುದ್ರ |
| 82 | | | ಕೋಲಾರ | ವೇಮಗಲ್ |
| 83 | | | ಮುಳಬಾಗಿಲು | ದೇವರಾಯಸಮುದ್ರ |
| 84 | | ಕೊಪ್ಪಳ | ಕೊಪ್ಪಳ | ಕಾವಲೂರು |
| 85 | | | ಕುಷ್ಟಗಿ | ತಲುವಗೇರ |
| 86 | | | ಯಲಬುರ್ಗ | ಭಾನಾಪುರ |
| 87 | | ಮಂಡ್ಯ | ಮದ್ದೂರು | ಸೋಮನಹಳ್ಳಿ |
| 88 | | | ಮಂಡ್ಯ | ಕೀಲಾರ |
| 89 | | | | ಮಂಗಲ |
| 90 | | ಮೈಸೂರು | ಹುಣಸೂರು | ಬಿಳಿಕೆರೆ |
| 91 | | | ಕೃಷ್ಣರಾಜನಗರ | ಅಂಕನಹಳ್ಳಿ |
| 92 | | | | ಸಾಲಿಗ್ರಾಮ |
| 93 | | | ಮೈಸೂರು | ಧಾನಗಲ್ಲಿ |
| 94 | | | | ಯಲವಾಲ |
| 95 | | | ನಂಜನಗೂಡು | ದೇವೀರಾಮನಹಳ್ಳಿ |
| 96 | | | | ತಾಂಡವಪುರ |
| 97 | | | ತಿರುಮಕೊಂಡಲ್–ನರಸೀಪುರ | ಸೋಮನಾಥಪುರ |
| 98 | | ರಾಮನಗರ | ಚನ್ನಪಟ್ಟಣ | ದಾಸವಾರ |
| 99 | | | ಕನಕಪುರ | ಬೂದೀಗುಪ್ಪೆ |
| 100 | | | | ತುಂಗಣಿ |
| 101 | | | ರಾಮನಗರಂ | ಹರಿಸಂದ್ರ |
| 102 | | ಶಿವಮೊಗ್ಗ | ಸೊರಬ | ಸಾಮನವಳ್ಳಿ |
| 103 | | ಉತ್ತರ ಕನ್ನಡ | ಹಾಲಿಯಾಲ್ | ನಾಗಶೆಟ್ಟಿಕೊಪ್ಪ |

# ವೈದ್ಯರ ಔಷದಿ ಚೀಟಿಯಲ್ಲಿ ಶೌಚಾಲಯದ ಸಂದೇಶ..!




ರೋಗಿಗಳಿಗೆ ವೈದ್ಯರು ಔಷದಿ ಬರೆದುಕೊಡುವ ಔಷದಿ ಚೀಟಿಗೂ ಶೌಚಾಲಯಕ್ಕೂ ಏನು ಸಂಬಂಧ ಎಂದು ಆಶ್ಚರ್ಯ ಆಗುತ್ತಿದೆಯಾ..? ಕಂಡಿತಾ ಸಂಬಂಧ ಇದೆ. ಅದು ಹೇಗೆ ಅಂದ್ರೆ... ಜನರಿಗೆ ಬರುವ ಬಹುಪಾಲು ಕಾಯಿಲೆಗಳು ಅನೈರ್ಮಲ್ಯ ಹಾಗೂ ಅಶುದ್ಧ ನೀರಿನಿಂದಲೇ ಬರುತ್ತವೆ. ನೀರಿನ ಮೂಲಗಳು ಹಾಗೂ ಜನವಸತಿಗಳ ಸುತ್ತಮುತ್ತಲಿನ ಪರಿಸರ ಕಲುಷಿತಗೊಳ್ಳಲು ಮೂಲ ಕಾರಣ ಗ್ರಾಮೀಣ ಜನರು ರೂಢಿಸಿಕೊಂಡಿರುವ ಬಯಲು ಮಲ ವಿಸರ್ಜನೆಯ ಅಭ್ಯಾಸ. ಮನುಷ್ಯನ ಮಲ ಅತ್ಯಂತ ಅಪಾಯಕಾರಿ. ಅದರಲ್ಲಿ ಕೋಟ್ಯಾಂತರ ವೈರಾಣುಗಳು, ಲಕ್ಷಾಂತರ ರೋಗಾಣುಗಳು, ಬ್ಯಾಕ್ಟೀರಿಯಾ, ರೋಗಾಣು ಮೊಟ್ಟೆಗಳು ಇರುತ್ತವೆ. ಇಂತಹ ಅಪಾಯಕಾರಿ ಮಲವನ್ನು ಬಯಲಲ್ಲಿ ವಿಸರ್ಜನೆ ಮಾಡಿದರೆ ಅದರಲ್ಲಿನ ಅಪಾಯಕಾರಿ ರೋಗಾಣುಗಳು ನೊಣಗಳ ಮೂಲಕ, ಪ್ರಾಣಿಗಳ ಮೂಲಕ, ಕಾಲಿನ ಮೂಲಕ, ನೀರಿನ ಮೂಲಗಳ ಮೂಲಕ ಮನುಷ್ಯನ ದೇಹವನ್ನು ಸೇರುತ್ತವೆ. ಕಾಲರ, ಕಾಮಲೆ, ವಿಷಮಶೀತ ಜ್ವರ, ವಾಂತಿ, ಬೇಧಿ ಮುಂತಾದ ಸಂಕ್ರಾಮಿಕ ರೋಗಗಳಿಗೆ ಕಾರಣವಾಗುತ್ತವೆ

ನೈರ್ಮಲ್ಯ ಮತ್ತು ಆರೋಗ್ಯಗಳಿಗೆ ನೇರ ಸಂಬಂಧವಿದ್ದು, ಗ್ರಾಮೀಣ ಜನರಲ್ಲಿ ರೂಢಿಯಲ್ಲಿರುವ ಬಯಲು ಮಲವಿಸರ್ಜನೆಯಂತ ಅನೈರ್ಮಲ್ಯದ ಅಭ್ಯಾಸಗಳಲ್ಲಿ ಸುಧಾರಣೆಯಾಗದ ಹೊರತು ಜನರ ಆರೋಗ್ಯ ಸುಧಾರಣೆ ಸಾಧ್ಯವಾಗುವುದಿಲ್ಲ. ಈ ನಿಟ್ಟಿನಲ್ಲಿ ಗ್ರಾಮೀಣ ಪ್ರದೇಶಗಳಲ್ಲಿರುವ ಎಲ್ಲ ಆರೋಗ್ಯ ಕೇಂದ್ರಗಳ ವೈದ್ಯರು ಹಾಗೂ ಕ್ಲಿನಿಕ್‌ಗಳ ವೈದ್ಯರುಗಳು ನೀಡುವ ಔಷದಿ prescription ಗಳ ಮೂಲಕ ನೈರ್ಮಲ್ಯಕ್ಕೂ ಹಾಗೂ ಆರೋಗ್ಯಕ್ಕೂ ಇರುವ ಸಂಬಂಧದ ಕುರಿತು ಸಂದೇಶವನ್ನು ಬಿತ್ತರಿಸುವ ಉದ್ದೇಶದೊಂದಿಗೆ ನೈರ್ಮಲ್ಯದ ಸಂದೇಶಗಳನ್ನೊಳಗೊಂಡ prescription ಪುಸ್ತಿಕೆಗಳನ್ನು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಮುದ್ರಿಸಿ ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿರುವ ಎಲ್ಲ ಪ್ರಾಥಮಿಕ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಿಗೆ ಸರಬರಾಜು ಮಾಡಲಾಗಿದೆ. ಈ ಮೂಲಕ ಶೌಚಾಲಯದ ಮಹತ್ವ ಹಾಗೂ ಶೌಚಾಲಯ ನಿರ್ಮಿಸಿಕೊಂಡು ಬಳಸತೊಡಗಿದಲ್ಲಿ ಹಲವಾರು ಖಾಯಿಲೆಗಳಿಗೆ ಕಡಿವಾಣ ಹಾಕಬಹುದು ಎಂಬ ಮಹತ್ವದ ಸಂದೇಶವನ್ನು ಜನಸಮುದಾಯಕ್ಕೆ ಬಿತ್ತರಿಸಲಾಗುತ್ತಿದೆ.




ಗ್ರಾಮೀಣ ಪ್ರದೇಶಗಳಲ್ಲಿರುವ ಎಲ್ಲ ಆರೋಗ್ಯ ಕೇಂದ್ರಗಳ ವೈದ್ಯರು ಹಾಗೂ ಕ್ಲಿನಿಕ್‌ಗಳ ವೈದ್ಯರುಗಳು ನೀಡುವ ಔಷಧಿಗಳ ಮೂಲಕ ನೈರ್ಮಲ್ಯಕ್ಕೂ ಹಾಗೂ ಆರೋಗ್ಯಕ್ಕೂ ಇರುವ ಸಂಬಂಧದ ಕುರಿತ ಸಂದೇಶ.

ಯಶೋಗಾಥೆ

# ಸ್ವಚ್ಛತೆಯಲ್ಲಿ ಸುಸ್ಥಿರತೆ ಕಂಡ ಹುಲಿಕೋಟಿ ಗ್ರಾಮ ಪಂಚಾಯಿತಿ

ಪಂಚಾಯಿತಿ ಪ್ರತಿನಿಧಿಗಳ ನಿರಂತರ ಪರಿಶ್ರಮ ಹಾಗೂ ಕಾಲ ಕಾಲಕ್ಕೆ ಬೇಕಾದ ನೆರವು ಅಗತ್ಯ ಮಾಹಿತಿಯನ್ನು ಜಿಲ್ಲಾ ನೆರವು ಘಟಕದವತಿಯಿಂದ ಪಡೆದು ಹುಲಿಕೋಟಿ ಗ್ರಾಮದ ಎಲ್ಲಾ ಕುಟುಂಬಗಳು ಶೌಚಾಲಯವನ್ನು ನಿರ್ಮಾಣ ಮಾಡಿಕೊಂಡು ಬಳಸುತ್ತಿವೆ.

ಗದಗ ಜಿಲ್ಲೆಯು ಐತಿಹಾಸಿಕ ಹಾಗೂ ಸಾಂಸ್ಕೃತಿಕ ಶ್ರೀಮಂತಿಕೆ ಹೊಂದಿದೆ, ಸ್ವಾತಂತ್ರ್ಯ ಹಾಗೂ ಸಹಕಾರಿ ಚಳುವಳಿಗಳಲ್ಲಿ ರಾಷ್ಟ್ರೀಯ ಮಹತ್ವ ಪಡೆದ ಜಿಲ್ಲೆ ಎಂಬ ಹೆಗ್ಗಳಿಕೆಗೆ ಪಾತ್ರವಾಗಿರುವ ಇಲ್ಲಿ ಪ್ರತಿಯೊಂದು ಕಾರ್ಯಕ್ರಮವು ಆಂದೋಲನದ ರೂಪ ಪಡೆದು ಕೊಂಡು ಸಾಧನೆ ಮಾಡಿದೆ. ಇದೇ ರೀತಿ 2005 ಆಕ್ಟೋಬರ್ 2ರಂದು ಗದಗ ಜಿಲ್ಲೆಯಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನ ಜಾರಿಗೊಂಡಿತ್ತು. ಅಂದಿನಿಂದ ಇಲ್ಲಿಯವರೆವಿಗೂ ಈ ಕಾರ್ಯಕ್ರಮ ಒಂದು ಪರಿಪೂರ್ಣ ಅಂದೋಲನವಾಗಿ ಶಾಲೆ ಮತ್ತು ಅಂಗನಾಡಿಗಳಲ್ಲಿ ವೈಯಕ್ತಿಕ ಶೌಚಾಲಯಳನ್ನು ನಿರ್ಮಾಣ ಮಾಡಿ ಮಕ್ಕಳು ಬಳಸುವಂತಹ ಪರಿಸರ ನಿರ್ಮಾಣವಾಗಿದೆ.

ನಿರಂತರ ಪರಿಶ್ರಮ ಹೋರಾಟದಿಂದ ಪ್ರತಿಫಲ ಸಿಗುತ್ತದೆ ಎಂಬುದಕ್ಕೆ ಗದಗ ತಾಲೂಕಿನ ಹುಲಿಕೋಟಿ ಗ್ರಾಮವೇ ಸಾಕ್ಷಿ. ಜಿಲ್ಲಾಡಳಿತಕ್ಕೆ ಕೂಗಳತೆಯು ದೂರದಲ್ಲಿದ್ದರೂ ಸಹ ಗ್ರಾಮವು ಎಲ್ಲಾ ಹಳ್ಳಿಗಳಂತೆ ಇಲ್ಲಿಯೂ ಸಹ ಜನರು ತಮ್ಮ ದೈನಂದಿನ ನಿತ್ಯ ಕರ್ಮಗಳನ್ನು ಪೂರೈಸಿಕೊಳ್ಳಲು ಬಯಲನ್ನೆ ಅವಲಂಬಿಸಿದ್ದರು. ಗ್ರಾಮದಲ್ಲಿ ಬೆರಳೆಣಿಕೆಯಷ್ಟು ಮಂದಿ ಶ್ರೀಮಂತರು ತಮ್ಮ ತಮ್ಮ ಮನೆಗಳಲ್ಲಿ ಶೌಚಾಲಯಗಳನ್ನು ನಿರ್ಮಾಣ ಮಾಡಿಕೊಂಡಿದ್ದರು ಅವರಿಗೆ ಈ ಬಿಸಿ ಅಷ್ಟೇನೂ





ತಾಕಲಿಲ್ಲ, ಆದರೆ ಬಡ ಮತ್ತು ಮದ್ಯಮ ವರ್ಗದ ಜನರಿಗೆ ಬಯಲಲ್ಲಿ ಮಲವಿಸರ್ಜನೆ ಮಾಡಲು ತುಂಬಾ ಕಿರಿ ಕಿರಿಯಾಗುವುದರ ಜತೆಗೆ ಯಾರ ಹೋಲದಲ್ಲಿ ಸಂಡಸ್ ಮಾಡಲು ಹೋದರೆ ಎಲ್ಲಿ ಬಯುತ್ತಾರೋ ಎಂಬ ಆತಂಕದಲ್ಲಿ ತಮ್ಮ ನಿತ್ಯಕರ್ಮಗಳನ್ನು ಪೂರೈಸಿಕೊಳ್ಳುತ್ತಿದ್ದರು. ಇನ್ನು ಹೆಂಗಳೆಯರ ಪಾಡಂತೂ ಹೇಳ ತೀರದು, ರಸ್ತೆ ಬದಿಯಲ್ಲಿ ಕುಂತರೆ ಪೊಕಿರಿಗಳ ಕಾಟ, ಇನ್ನು ಹೋತ್ತು ಮುಳುಗಿದ ಮೇಲೆ ಹೋಗೋಣವೆಂದರೆ ಹುಳ– ಹುಪ್ಪೆಗಳ ಭಯ, ಈ ಸಮಯದಲ್ಲಿ ಸಂಗಡಕ್ಕೆವೊಬ್ಬರು ಬೇಕು ಎಲ್ಲಿಯೂ ಒಬ್ಬರೇ ಹೊರಗಡೆ ಹೋಗಲು ಭಯ–ಭೀತಿ ಹೀಗೆ ನಾನಾ ತರಹದ ಮನೋ ಸಂಕಟಗಳನ್ನು ಅನುಭವಿಸುತ್ತಿದ್ದರು.

ಇಂತಹ ಸಂದರ್ಭದಲ್ಲಿ ಹುಲಿಕೋಟೆ ಗ್ರಾಮದ ಜನರ ನೆರವಿಗೆ ಬಂದಿದ್ದು ಸಂಪೂರ್ಣ ಸ್ವಚ್ಚತಾ ಆಂದೋಲನ. ಗ್ರಾಮದಲ್ಲಿ ವಿನೂತನ ಮಾರ್ಗೋಪಾಯಗಳನ್ನು ಅನುಸರಿಸುವ ಮೂಲಕ ಪಂಚಾಯಿತಿ ವ್ಯಾಪ್ತಿಯ ಪ್ರತಿಯೊಂದು ಮನೆ ವೈಯಕ್ತಿಕ ಶೌಚಾಲಯ ಹೊಂದುವಂತೆ ಜನರಿಗೆ ಮನೆ ಮನೆಗೆ ತೆರಳಿ ವಿಶಿಷ್ಠ ರೀತಿಯಲ್ಲಿ ಪ್ರೇರಣೆಯನ್ನು ನೀಡಿ ಶೌಚಾಲಯದ ಮಹತ್ವ ಮತ್ತು ಸ್ವಚ್ಛತೆ ಕುರಿತು ತಿಳುವಳಿಕೆ ಮೂಡಿಸಲಾಯಿತು.

ಈ ಆಂದೋಲನದಲ್ಲಿ ಶಾಲಾ ಮತ್ತು ಅಂಗನವಾಡಿಗಳಿಗೆ ಶೌಚಾಲಯವನ್ನು ನಿರ್ಮಿಸಿ, ಮಕ್ಕಳಿಗೆ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸುವುದರ ಜತೆಗೆ, ಮಕ್ಕಳ ಮೂಲಕ ಸಮುದಾಯಕ್ಕೆ ನೈರ್ಮಲ್ಯದ ಬಗ್ಗೆ ಅರಿವು ಮೂಡಿಸುವ ಸಲುವಾಗಿ ಗ್ರಾಮದ ಹಿರಿಯ ಮುಖಂಡರು ಸೇರಿದಂತೆ ಚುನಾಯಿತ ಜನ ಪ್ರತಿನಿದಿಗಳು ಸೇರಿ ಗ್ರಾಮದಲ್ಲಿ ಪ್ರಭಾತ ಪೇರಿ ನಡೆಸುವ ಮುಖಾಂತರ ಸ್ವಚ್ಛತೆಯ ಘೋಷಣೆಗಳೊಂದಿಗೆ ಜನರಲ್ಲಿ ಬಯಲು ಮಲವಿಸರ್ಜನೆ ದುಷ್ಪರಿಣಾಮಗಳ ಕುರಿತು ಜಾಗೃತಿ ಮೂಡಿಸಲಾಯಿತು.

ಬಯಲು ಮಲ ವಿಸರ್ಜನೆ ಸ್ಥಳಗಳನ್ನು ಗುರ್ತಿಸಿ ಬೆಳಗಿನ ಸಮಯದಲ್ಲಿ ಆ ಜಾಗಗಳಲ್ಲಿ ಕಾವಲು ನಿಂತುಕೊಂಡು ಸಮುದಾಯ ಜನರ ಭಾಗವಹಿಸುವಿಕೆಯ ಮೂಲಕ ಬಯಲು ಮಲ ವಿಸರ್ಜನೆಯ ದುಷ್ಪರಿಣಾಮಗಳನ್ನು ಜನರಿಗೆ ವಾಸ್ತವಿಕವಾಗಿ ತಿಳಿಸಿಕೊಡಲಾಯಿತು. ಇದನ್ನೆಲ್ಲ ಅರಿತ ಜನರು ತಮ್ಮ ಮನೆಗಳಲ್ಲಿ ವೈಯಕ್ತಿಕ ಶೌಚಾಲಯವನ್ನು ನಿರ್ಮಾಣ ಮಾಡಿಕೊಳ್ಳಲು ಮುಂದೆ ಬಂದರು.

ಗ್ರಾಮದಲ್ಲಿ ಬಯಲಿನಲ್ಲಿ ಮಲ ವಿಸರ್ಜನೆ ಮಾಡಲು ಬಹಳ ತೊಂದರೆಯಾಗುತ್ತಿದೆ ಎಂಬ ಅಂಶವನ್ನು ಅರಿತ ಪಂಚಾಯಿತಿ ಪ್ರತಿನಿಧಿಗಳು ತಾವೇ ಸ್ವತ: ಜಿಲ್ಲಾ ನೆರವು ಘಟಕ ಮತ್ತು ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳನ್ನು ಖುದ್ದು ಬೇಟಿ ಮಾಡಿ, ಸಂಪೂರ್ಣ ಸ್ವಚ್ಚತಾ ಆಂದೋಲನದ ಬಗ್ಗೆ ಸಮಗ್ರವಾದ ಮಾಹಿತಿ ಪಡೆದು 'ನಮ್ಮ ಪಂಚಾಯಿಯಲ್ಲಿ ಈ ಆಂದೋಲನ ಕಾರ್ಯಕ್ರಮ ವನ್ನು ಜಾರಿಗೊಳಿಸಿ ಮುಂದಿನ ಒಂದು ವರ್ಷದೊಳಗಾಗಿ ಹುಲಿಕೋಟೆ ನಿರ್ಮಲ ಗ್ರಾಮವನ್ನಾಗಿ ಮಾಡುತ್ತೇವೆ' ಎಂದು ಸಿಇಓ ಅವರಲ್ಲಿ ವಾಗ್ದಾನ ಮಾಡಿದರು.



ಬೀದಿ ನಾಟಕ, ಸಾಕ್ಷ್ಯ ಚಿತ್ರಗಳ ಪ್ರದರ್ಶನ, ಸಿ.ಎಲ್.ಟಿ.ಎಸ್ ಟ್ರಿಗರಿಂಗ್ ಮೂಲಕ ಬಯಲು ಮಲ ವಿಸರ್ಜನೆಯಿಂದ ಮನುಷ್ಯನಿಗೆ ಬರುವ ರೋಗಗಳು ಹಾಗೂ ಅದರಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಿದರು. ಇದರ ಜತೆಗೆ ಪ್ರತಿ ಶನಿವಾರ ಶಾಲಾ-ಕಾಲೇಜುಗಳ ವಿದ್ಯಾರ್ಥಿಗಳು,ಶಿಕ್ಷಕರು, ಅಂಗನವಾಡಿ,ಆಶಾ ಕಾರ್ಯಕರ್ತೆಯರು, ಪಂಚಾಯಿತಿ ಪ್ರತಿನಿದಿಗಳು, ಗ್ರಾಮಸ್ಥರು, ಸ್ತ್ರೀ ಶಕ್ತಿ, ಸ್ವಸಹಾಯ ಸಂಘದ ಪ್ರತಿನಿಧಿಗಳ ಮತ್ತು ಸಂಘ ಸಂಸ್ಥೆಗಳ ಜತೆಗೂಡಿ ಗ್ರಾಮದ ಬೀದಿ ಬೀದಿಗಳಲ್ಲಿ ಜಾಥ ನಡೆಸುವ ಮೂಲಕ ಜನರಲ್ಲಿ ಅರಿವು ಮೂಡಿಸಿ ಪ್ರೇರೇಪಣೆ ಮಾಡಲಾಯಿತು

ಹೀಗೆ ಪಂಚಾಯಿತಿ ಪ್ರತಿನಿಧಿಗಳ ನಿರಂತರ ಪರಿಶ್ರಮ ಹಾಗೂ ಕಾಲ ಕಾಲಕ್ಕೆ ಬೇಕಾದ ನೆರವು ಅಗತ್ಯ ಮಾಹಿತಿಯನ್ನು ಜಿಲ್ಲಾ ನೆರವು ಘಟಕದವತಿಯಿಂದ ಪಡೆದು ಹುಲಿಕೋಟೆ ಗ್ರಾಮದ ಎಲ್ಲಾ ಕುಟುಂಬಗಳು ಶೌಚಾಲಯವನ್ನು ನಿರ್ಮಾಣ ಮಾಡಿಕೊಂಡು ಬಳಸುತ್ತಿವೆ. ಇದರ ಜತೆಗೆ ಇಂಟರ್ ನ್ಯಾಷನಲ್ ಸಂಸ್ಥೆಯು ಇಲ್ಲಿನ ಜನರಿಗೆ ಅನುಕೂಲ ಮಾಡುವ ಸಲುವಾಗಿ 4 ಸುಲಭ ಸಮುದಾಯ ಶೌಚಾಲಯವನ್ನು ನಿರ್ಮಾಣ ಮಾಡಿದೆ. ಇದರ ಪರಿಣಾಮ 2010ನೇ ಸಾಲಿನ ರಾಷ್ಟ್ರೀಯ ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಭಾಜನವಾಯಿತು.

## ಹುಲಿಕೋಟೆ ಗ್ರಾಮದಲ್ಲಿ ಸ್ವಚ್ಛತೆಯ ಕಲರವ

ನಿರ್ಮಲ ಗ್ರಾಮ ಪುರಸ್ಕಾರ ಪಡೆದ ಈ ಗ್ರಾಮ ಪಂಚಾಯಿತಿ ಇಂದು ಜಿಲ್ಲೆಯಲ್ಲಿ ಹೆಗ್ಗಳಿಕೆ ಪಡೆದ ಗ್ರಾಮವಾಗಿದೆ, ಕಾರಣ ಇಡೀ ಜಿಲ್ಲೆಯಲ್ಲಿ ಒಳಚರಂಡಿ ವ್ಯವಸ್ಥೆ (ಯು.ಜಿ.ಡಿ) ಹೊಂದಿರುವ ಗ್ರಾಮ ಇದಾಗಿದೆ.. ಗ್ರಾಮದಲ್ಲಿ ಸ್ವಚ್ಛತೆಯ ಸುಸ್ಥಿರತೆಗೆ ಹೆಚ್ಚಿನ ಆದ್ಯತೆ ನೀಡಲಾಗಿದೆ. ಗ್ರಾಮದ ಎಲ್ಲಾ ಜನರು ಸೇರಿ ಪ್ರತಿವಾರ ಒಂದು ವಾರ್ಡ್‌ನ್ನು ಸ್ವಚ್ಛ ಮಾಡುವುದು ಇಲ್ಲಿ ರೂಢಿಯಲ್ಲಿದೆ.

ಇದರ ಜತೆಗೆ ಮನೆಯಲ್ಲಿನ ಕಸ-ಕಡ್ಡಿಗಳನ್ನು ಗ್ರಾಮದ ರಸ್ತೆ ಬದಿಯಲ್ಲಿ ಹಾಕದೇ ಪ್ರತಿಯೊಂದು ಕುಟುಂಬವು ಪಂಚಾಯಿತಿ ನಿರ್ಮಿಸಿರುವ ಕಸದ ತೊಟ್ಟಿಗಳಲ್ಲೇ ವಿಲೇವಾರಿ ಮಾಡುತ್ತಾರೆ. ಹಾಗೂ ಗ್ರಾಮ ಪಂಚಾಯಿತಿ ವತಿಯಿಂದ ಪ್ರತಿಯೊಂದು ಕುಟುಂಬಕ್ಕೆ ಪ್ಲಾಸ್ಟಿಕ್ ಬಕೆಟ್‌ಗಳನ್ನು ನೀಡಿ



ತಮ್ಮ ಮನೆಯಲ್ಲಿನ ಕೊಳೆಯುವ ಕಸವನ್ನು ಅದರಲ್ಲಿ ಶೇಖರಿಸಿಡಲಾಗುತ್ತಿದೆ. ಈ ರೀತಿ ಮನೆಗಳಲ್ಲಿ ಶೇಖರಿಸಿಟ್ಟ ಕಸವನ್ನು ಪಂಚಾಯಿತಿವತಿಯಿಂದ ಕ್ರೋಡಿಕರಿಸಿ ಅದನ್ನು ಕಾಂಪೋಸ್ಟ್ ಮಾಡಿ ಆ ಗೊಬ್ಬರವನ್ನು ರೈತರು ತಮ್ಮ ಬೇಸಾಯಕ್ಕೆ ಬಳಸುತ್ತಿದ್ದಾರೆ.

ಊರಿನ ಮದ್ಯೆಯಿದ್ದ ತಿಪ್ಪೆಗುಂಡಿಗಳನ್ನು ಬೇರೆಡೆಗೆ ಸ್ಥಳಾಂತರ ಮಾಡಲಾಗಿದೆ, ಪ್ರತಿವಾರ ಪಂಚಾಯಿತಿ ಸಿಬ್ಬಂದಿಯೇ ಗ್ರಾಮದಲ್ಲಿನ ಚರಂಡಿ,ರಸ್ತೆ ಸ್ವಚ್ಛಗೊಳಿತ್ತಾರೆ.

ಶುದ್ಧ ಕುಡಿಯುವ ನೀರಿನ ಘಟಕ : ಹುಲಿಕೋಟಿ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಘಟಕವನ್ನು ಸ್ಥಾಪಿಸಲಾಗಿದು ಪ್ರತಿಯೊಂದು ಕುಟುಂಬಕ್ಕೂ ಶುದ್ಧ ಕುಡಿಯುವ ನೀರನ್ನು ಒದಗಿಸಲಾಗುತ್ತಿದೆ. ಒಳಚರಂಡಿ ವ್ಯವಸ್ತೆಯಿರುವ ಈ ಗ್ರಾಮದಲ್ಲಿ ನೀರು ಶುದ್ಧಿ ಘಟಕವನ್ನು ಸಹ ಸ್ಥಾಪಿಸಿ, ಬಳಕೆಯಾದ ನೀರನ್ನು ಶುದ್ಧಿಕರಿಸಿ ಆ ನೀರನ್ನು ಪುನಃ ಗ್ರಾಮದಲ್ಲಿರುವ ಉದ್ಯಾನವನ, ಕೈತೋಟ, ಹೊಲಗಳಿಗೆ ಬಳಸಲಾಗುತ್ತಿದೆ.

ಒಟ್ಟಾರೆ ಹುಲಿಕೋಟಿ ಗ್ರಾಮ ಪಂಚಾಯಿತಿಯು ನಿರ್ಮಲ ಗ್ರಾಮ ಪುರಸ್ಕಾರ ಪಡೆದು ಇಂದಿಗೂ ಸಹ ಗ್ರಾಮದಲ್ಲಿ ನೈರ್ಮಲ್ಯವನ್ನು ಕಾಪಾಡಿಕೊಳ್ಳುವುದರ ಜತೆಗೆ ಸುಸ್ಥಿರತೆಯನ್ನು ಕಾಯ್ದು ಕೊಂಡಿದೆ.

❑




ಡಾ. ಟಿ. ರಮೇಶ್ *

ಮೊಬೈಲ್ : 9844775678


# ಜನರಲ್ಲಿ ಸ್ವಚ್ಛತಾ ಆಂದೋಲನದ ಅರಿವು

ಮೈಸೂರು ಮಹಾನಗರ ಪಾಲಿಕೆ ಕಳೆದ ಎರಡು ವಾರಗಳ ಹಿಂದೆ ಭಾರಿ ಸುದ್ದಿಯಲ್ಲಿತ್ತು. ಹೀಗೆ ಸುದ್ದಿಯಲ್ಲಿರುವುದು ಮೈಸೂರು ಮಹನಗರ ಪಾಲಿಕೆಗೆ ಹೊಸದೇನಲ್ಲ. ಆದರೆ ಈ ಬಾರಿ ಅದು ಕೈಗೊಂಡ ಕ್ರಮ ಸಾಕಷ್ಟು ವಿಮರ್ಶೆ/ಚರ್ಚೆಗೆ ಅನುವು ಮಾಡಿಕೊಟ್ಟಿತು. ಕಡು ಬೇಸಿಗೆಯ ಝಳ ಅನುಭವಿಸುತ್ತಿರುವ ಮೈಸೂರಿನ ಜನತೆ ಅನೇಕ ಸಾಂಕ್ರಾಮಿಕ ರೋಗಗಳನ್ನೂ ಅನುಭವಿಸುತ್ತಿರುವುದನ್ನು ಗಮನಿಸಿದ ಮಹಾನಗರ ಪಾಲಿಕೆ ಅದರ ತಡೆಗಟ್ಟುವಿಕೆಗಾಗಿ ಹಲವಾರು ಯೋಜನೆಗಳನ್ನು ರೂಪಿಸಿತು. ಅದರಲ್ಲಿ ಬಹುಮುಖ್ಯವಾದದ್ದು ಸ್ವಚ್ಛತೆಗೆ ಆದ್ಯತೆ ಕೊಟ್ಟು ಪಾನಿಪುರಿ, ಗೋಬಿ ಹಾಗೂ ಇತರೆ ಹೋಟೆಲ್‌ಗಳನ್ನು ಮುಚ್ಚಿಸುವ ಕ್ರಮ. ಇದಕ್ಕೆ ವಿರೋಧಗಳೇ ಹೆಚ್ಚಾಗಿ ಬಂದರೂ ಸ್ವಚ್ಚತೆಯನ್ನು ಸಾಧಿಸಲು ಕೆಲವು ಮಾನವೀಯ ವಿಚಾರಗಳನ್ನು ಬದಿಗಿಟ್ಟು ರಸ್ತೆ ಬದಿಯ ಹೋಟೆಲ್‌ಗಳನ್ನು ಮುಚ್ಚಿಸಲಾಯಿತು. ಈ ಕ್ರಮ ನಿಜಕ್ಕೂ ಸ್ವಚ್ಚತೆಯ ನಿಟ್ಟಿನಲ್ಲಿ ಬಹುದೊಡ್ಡ ಸಾಧನೆ.

ಭಾರತದಲ್ಲಿ ಸ್ವಚ್ಚತೆಯ ಬಗೆಗೆ ಕೈಗೊಳ್ಳುತ್ತಿರುವ ಇಂತಹ ಕ್ರಮಗಳು ಇಂದು ನಿನ್ನೆಯದೇನಲ್ಲಾ, ಸ್ವಾತಂತ್ರ್ಯ ಪೂರ್ವದಿಂದಲೂ ಇದೆ. ಗಾಂಧೀಜಿಯವರ ಮುಖ್ಯ ವಿಚಾರಧಾರೆಗಳಲ್ಲಿ ಸ್ವಚ್ಛತಾ ಆಂದೋಲನವೂ ಪ್ರಮುಖವಾಗಿದೆ. ಭಾರತದ ಹೆಚ್ಚಿನ ಹಳ್ಳಿಗಳು ಆಗಾಗ ಸಾಂಕ್ರಮಿಕ ರೋಗಗಳಿಗೆ ತುತ್ತಾಗಿ ಹೆಚ್ಚಿನ ಸಾವು–ನೋವುಗಳನ್ನು ಅನುಭವಿಸುತ್ತಿತ್ತು. ಇದಕ್ಕೆ ಕಾರಣಗಳನ್ನು ಹುಡುಕಿದಾಗ ಕಾಣಿಸಿಕೊಂಡ ಮುಖ್ಯ ಅಂಶ ಸ್ವಚ್ಛತೆ ಇಲ್ಲದೆ

ಗ್ರಾಮೀಣ ಪ್ರದೇಶಗಳಲ್ಲಿ ಕೆರೆಯ ನೀರನ್ನು ಬಟ್ಟೆ ಒಗೆಯಲು, ಪಾತ್ರೆ ತೊಳೆಯಲು, ಅಡುಗೆ ಮಾಡಲು ಉಪಯೋಗಿಸುವುದಷ್ಟೇ ಅಲ್ಲ, ನಿತ್ಯಕರ್ಮಗಳಿಗೂ ಉಪಯೋಗಿಸುವುದರಿಂದ ರೋಗಗಳು ಬಹುಬೇಗ ಹರಡಿಬಿಡುತ್ತವೆ.




* ಉಪನ್ಯಾಸಕರು, ಬಾಸುದೇವ ಸೋಮಾನಿ ಪ್ರಥಮ ದರ್ಜೆ ಕಾಲೇಜು, ಕುವೆಂಪುನಗರ, ಮೈಸೂರು.

ಇರುವುದಾಗಿತ್ತು. ಮಲಿನಗೊಂಡ ಕೆರೆ, ಬಾವಿಗಳ ನೀರನ್ನು ಶುದ್ಧೀಕರಿಸದೇ ಹಾಗೇ ಬಳಸುವುದು ಸಾಂಕ್ರಾಮಿಕ ರೋಗಗಳು ಹರಡಲು ಬಹುಮುಖ್ಯ ಕಾರಣಗಳಾಗಿದ್ದವು.

ಗ್ರಾಮೀಣ ಪ್ರದೇಶಗಳಲ್ಲಿ ಕೆರೆಯ ನೀರನ್ನು ಬಟ್ಟೆ ಒಗೆಯಲು, ಪಾತ್ರೆ ತೊಳೆಯಲು, ಅಡುಗೆ ಮಾಡಲು ಉಪಯೋಗಿಸುವುದಷ್ಟೇ ಅಲ್ಲ, ನಿತ್ಯಕರ್ಮಗಳಿಗೂ ಉಪಯೋಗಿಸುವುದರಿಂದ ರೋಗಗಳು ಬಹುಬೇಗ ಹರಡಿಬಿಡುತ್ತವೆ. ಗಾಂಧೀಜಿಯವರು ಈ ಮಲಿನತೆಯನ್ನು ಹೋಗಲಾಡಿಸಲು ಸಾಕಷ್ಟು ಶ್ರಮ ವಹಿಸಿದರು. ತಾವು ಭೇಟಿ ನೀಡುತ್ತಿದ್ದಂತಹ ಹಳ್ಳಿಗಳಲ್ಲಿ ತಾವೇ ಸ್ವತಃ ಸ್ವಚ್ಛತಾ ಕಾರ್ಯಗಳಲ್ಲಿ ಭಾಗವಹಿಸುತ್ತಿದ್ದರು. 'ಗ್ರಾಮದ ಕೆರೆ, ಕಟ್ಟೆಗಳು, ಬಾವಿಗಳು ಮುಂತಾದ ನೀರಿನ ಆಸರೆಗಳನ್ನು ಆಗಾಗ್ಗೆ ಸ್ವಚ್ಛಮಾಡಿ ಸುತ್ತಲಿನ ಕಸದ ಗುಂಡಿಗಳನ್ನು ತೆಗೆದು ನಿರ್ಮಲವಾಗಿಡುವುದು ಅಗತ್ಯ. ಈ ಕೆಲಸ ಮಾಡಲು ತಾವೇ ಮುಂದಾಗಿ ಸ್ವಯಂ ಸೇವಕರು ಸಂಬಳದ ನೌಕರರಂತೆ ಪ್ರಾರಂಭಿಸಬೇಕು. ದಿನದಿನವೂ ಅದು ನಡೆಯುತ್ತಾ ಗ್ರಾಮಸ್ಥರೂ ತಮ್ಮೊಡನೆ ಸೇರಿಕೊಳ್ಳಲು ಪ್ರೋತ್ಸಾಹಿಸಿದರೆ ಕ್ರಮೇಣ ಅವರೇ ಗ್ರಾಮನೈರ್ಮಲ್ಯ ಕಾರ್ಯ ಮಾಡಿಕೊಳ್ಳುತ್ತಾರೆ'. ಎಂದು ಗಾಂಧೀಜಿಯವರು ತರುಣರಿಗೆ ಕಿವಿಮಾತುಗಳನ್ನು ಹೇಳುತ್ತಿದ್ದರು.

ದುರಾದೃಷ್ಟ ಸಂಗತಿ ಎಂದರೆ ಗಾಂಧೀಜಿಯವರ ಈ ಕನಸು 8–10 ದಶಕಗಳಾದರೂ ಈಡೇರದೇ ಇಂದಿಗೂ ಹಳ್ಳಿಗಳಲ್ಲಿ ಶೌಚಕ್ರಿಯೆಗೆ ಬಯಲನ್ನೇ ಉಪಯೋಗಿಸುತ್ತಿದ್ದಾರೆ. ಕುಡಿಯುವ ನೀರಿನ ಉತ್ತಮ ವ್ಯವಸ್ಥೆ ಇಲ್ಲದೆ, ಕೆರೆ, ಬಾವಿಗಳನ್ನೇ ಗೃಹಕೃತ್ಯಗಳಿಗೆ ಆಶ್ರಯಿಸಿದ್ದಾರೆ. ಆದ್ದರಿಂದ ಈಗಲೂ ಅನೇಕ ಸಾಂಕ್ರಾಮಿಕ ರೋಗಗಳು ಗ್ರಾಮೀಣ ಜನತೆಯನ್ನು ಪೀಡಿಸುತ್ತಿವೆ.

ಇನ್ನು ನಗರ ಪ್ರದೇಶಗಳು ಸ್ವಚ್ಛತೆ ಸಾಧಿಸುವಲ್ಲಿ ವಿಫಲವಾಗಿದ್ದು, ಸಾಂಕ್ರಾಮಿಕ ರೋಗಗಳ ಪುನರುತ್ಥಾನ ನಡೆಯುತ್ತಲೇ ಇದೆ. ನಗರ ಪ್ರದೇಶಗಳಲ್ಲಿ ಹೆಚ್ಚುತ್ತಿರುವ ಜನಸಂಖ್ಯೆಗೆ ಅನುಗುಣವಾಗಿ ಮೂಲ ಸೌಲಭ್ಯಗಳು ಹೆಚ್ಚಿಸಲು ಸಾಧ್ಯವಾಗದೆ, ಕೊಳಚೆ ಪ್ರದೇಶಗಳ ಸೃಷ್ಟಿ ಗಣನೀಯವಾಗುತ್ತಿದೆ. ಸಹಜವಾಗಿ ಮೇಲಿನ ವಾತಾವರಣ ಸೃಷ್ಟಿಯಾಗುತ್ತವೆ. ಜೊತೆಗೆ ಹೆಚ್ಚುತ್ತಿರುವ ರಸ್ತೆ ಬದಿಯ ತಿನಿಸುಗಳ ಅಂಗಡಿಗಳು ಸ್ವಚ್ಛತೆಗೆ ಹೆಚ್ಚು ಆದ್ಯತೆ ನೀಡದಿರುವುದರಿಂದ ಕಾಯಿಲೆಗಳು ಹೆಚ್ಚು ಆದ್ಯತೆ ಪಡೆದುಕೊಳ್ಳುತ್ತಿವೆ.

ಕೇಂದ್ರ ಸರ್ಕಾರ ಮತ್ತು ರಾಜ್ಯ ಸರ್ಕಾರಗಳು ಸ್ವಚ್ಛತಾ ಕಾರ್ಯಕ್ಕಾಗಿ ಹಲವಾರು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಿದ್ದರೂ ಅವುಗಳು ವಿಫಲವಾಗುತ್ತಲೇ ಇವೆ. ಇದಕ್ಕೆ ಕಾರಣ ಜನರಲ್ಲಿ ಜಾಗೃತಿ ಮೂಡದಿರುವುದೇ ಆಗಿದೆ. ಶೌಚಾಲಯಗಳನ್ನು ಉಪಯೋಗಿಸುವುದು ಮೈಲಿಗೆ ಎಂಬ ಭಾವನೆಯಿಂದ ಬದುಕುತ್ತಿರುವುದು ಸುತ್ತಮುತ್ತಲಿನ ವಾತಾವರಣದ ಬಗೆಗೆ ಅಲಕ್ಷ್ಯದಿಂದ ಇರುವುದು ಕೊಳಕಿಗೆ ಮೂಲವಾಗಿದೆ. ಇಂತಹ ಸ್ವಚ್ಛತಾ ಕಾರ್ಯದಲ್ಲಿ ಕೇವಲ ಸರ್ಕಾರದ ಪ್ರಯತ್ನ ಮಾತ್ರ ಫಲಿಸಲು ಸಾಧ್ಯವಿಲ್ಲ. ಸ್ವಚ್ಛತಾ ಆಂದೋಲನಗಳಲ್ಲಿ ಜನರೇ ನೇರವಾಗಿ ಭಾಗವಹಿಸಬೇಕು. ಆಗ ನೈರ್ಮಲ್ಯತೆ ಸಾಧಿಸಲು ಸಾಧ್ಯ ಎಂಬುದರಲ್ಲಿ ಸಂದೇಹವಿಲ್ಲ ಅದಕ್ಕಾಗಿ ಪ್ರತಿಯೊಂದು ಜಿಲ್ಲೆಯಲ್ಲಿಯೂ ಆಯಾಯ ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್‌ಗಳ ಮೂಲಕ ಗ್ರಾಮೀಣ ಪ್ರದೇಶಗಳ ಸ್ವಚ್ಛತೆ ಕುರಿತು ಅರಿವು ಮೂಡಿಸಲು ಸ್ವಚ್ಛತಾ ಉತ್ಸವ, ಸ್ವಚ್ಛತಾ ಅಭಿಯಾನ, ಬೀದಿ ನಾಟಕ, ವಿಚಾರ ಸಂಕಿರಣ, ಜಾಗೃತ ಕಾರ್ಯಾಗಾರ, ಜನಪರ ಹಾಡುಗಳು, ದೂರದರ್ಶನ, ರೇಡಿಯೋ, ರಥಯಾತ್ರೆಗಳು ಎಲ್ಲಕ್ಕಿಂತ ಮಿಗಿಲಾಗಿ ಜನರ ಸಹಭಾಗಿತ್ವ ಅತ್ಯಂತ ಪ್ರಧಾನವಾದದ್ದು, ಸಮುದಾಯ, ಸರ್ಕಾರೇತರ ಸಂಸ್ಥೆಗಳು, ಸರ್ಕಾರದ ವಿವಿಧ ಇಲಾಖೆಗಳು ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದರ ಮೂಲಕ ಜನರಲ್ಲಿ ಅರಿವು ಮೂಡಿಸಲು ಮಾತ್ರ ಸಾಧ್ಯ. ಜೊತೆಗೆ ಶಾಲಾ ವಿದ್ಯಾರ್ಥಿಗಳಿಗೆ ಸ್ವಚ್ಛತಾ ಆಂದೋಲನಕ್ಕೆ ಸಂಬಂಧಿಸಿದಂತೆ ಚಿತ್ರಕಲೆ, ಪ್ರಬಂಧ ಸ್ಪರ್ಧೆ, ಭಾಷಣ ಸ್ಪರ್ಧೆಗಳನ್ನು ನಡೆಸುವುದು ಅತ್ಯಗತ್ಯವಾದುದಾಗಿದೆ.

ಈಗಾಗಲೇ ಸಂಪೂರ್ಣ ಸ್ವಚ್ಛತಾ ಆಂದೋಲನ ಯಶಸ್ವಿಗೊಳಿಸಲು ಸರ್ಕಾರ ನೈರ್ಮಲ್ಯ ಪ್ರಶಸ್ತಿ, ಸ್ವರ್ಣ ನೈರ್ಮಲ್ಯ ಪ್ರಶಸ್ತಿ, ರಜತ ನೈರ್ಮಲ್ಯ ಪ್ರಶಸ್ತಿಗಳನ್ನು ನೀಡಿ, ಪ್ರೋತ್ಸಾಹ ಜಾಗೃತಿಯನ್ನು ನೀಡುತ್ತಿದೆ. ವ್ಯಕ್ತಿಗತ ಪ್ರಶಸ್ತಿಯಲ್ಲದೆ ಪ್ರದೇಶವಾರು ಪ್ರಶಸ್ತಿಗಳನ್ನು ನೀಡುವುದರ ಜೊತೆಗೆ, ಸರ್ಕಾರಗಳು ಕಡ್ಡಾಯವಾಗಿ ಶಾಲಾ–ಕಾಲೇಜು ವಿದ್ಯಾರ್ಥಿಗಳು, ಎನ್.ಎಸ್.ಎಸ್ ಸ್ವಯಂಸೇವಕರು, ಸ್ಕೌಟ್ಸ್ ಮತ್ತು ಗೈಡ್ಸ್ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದ ಮಹಿಳಾ ಸ್ವಸಹಾಯ ಗುಂಪಿನ ಸದಸ್ಯರುಗಳ ಮೂಲಕ ಜಾಥಾ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತಹ ಯೋಜನೆಗಳನ್ನು ಜಾರಿಗೆ ತರುವುದರಿಂದ ಜನರಲ್ಲಿ ಹೆಚ್ಚಿನ ರೀತಿಯಲ್ಲಿ ಸ್ವಚ್ಛತಾ ಆಂದೋಲನದ ಬಗ್ಗೆ ಜಾಗೃತಿ ಉಂಟು ಮಾಡಲು ಮಾತ್ರ ಸಾಧ್ಯ. ❑

# 'ಸಂಪೂರ್ಣ ಸ್ವಚ್ಛತಾ ಆಂದೋಲನ ಕೇವಲ ಸರ್ಕಾರದ್ದೆ ?'

ಮಾನವ ವಿಚಾರವಂತ, ಬುದ್ಧಿವಂತ ಪ್ರಾಣಿ ಎಂಬ ಖ್ಯಾತಿ ಪಡೆದಿರುವನು. ಆದ್ದರಿಂದ ಅವನು ತನ್ನ ನಿತ್ಯ ಕರ್ಮಗಳನ್ನು ಪ್ರಾಣಿ ಸದೃಶ್ಯರೂಪದಲ್ಲಿ ಮಾಡಲಾರ. ನಮ್ಮ ಹಳ್ಳಿಗಳಲ್ಲಿ ಮಲ, ಮೂತ್ರ ವಿಸರ್ಜನೆ ಎಂಬುದು ಒಂದು ದೊಡ್ಡ ತಲೆನೋವು. ಹಳ್ಳಿಗರು ತಮ್ಮೂರಿನ ರಸ್ತೆಗಳ ಪಕ್ಕದಲ್ಲೇ ಮಲ, ಮೂತ್ರ ವಿಸರ್ಜಿಸಲು ಹೇಸಲಾರರು, ನಾಚಿಕೆಯನ್ನು ಪಟ್ಟುಕೊಳ್ಳಲಾರರು. ಸರ್ಕಾರವು ಸಂಪೂರ್ಣ ಸ್ವಚ್ಛತಾ ಆಂದೋಲನ ಹಾಕಿಕೊಂಡು ಗ್ರಾಮದಲ್ಲಿನ ಪ್ರತಿ ಮನೆಗೂ ಶೌಚಾಲಯ ನಿರ್ಮಾಣಕ್ಕೆ ಧನಸಹಾಯ ನೀಡುತ್ತಿದ್ದರೂ ಅದರ ಸರಿಯಾದ ಉಪಯೋಗವಾಗುತ್ತಿಲ್ಲ. ಒಂದು ವೇಳೆ ಪಂಚಾಯತಿ ಶೌಚಾಲಯ ಕಟ್ಟಿಸಿಕೊಟ್ಟರೂ ಹಳ್ಳಿಗರು ಅದನ್ನು ತಮ್ಮ ಕಟ್ಟಿಗೆ, ಉರುವಲುಗಳನ್ನು ಸಂರಕ್ಷಿಸಿ ಇಟ್ಟುಕೊಳ್ಳುವ ಚಿಕ್ಕಕೋಣೆನ್ನಾಗಿ ಮಾಡಿಕೊಂಡಿದ್ದಾರೆ. ಸರ್ಕಾರವು ಹಳ್ಳಿಗರಿಗೆ ನೈರ್ಮಲ್ಯ, ಸ್ವಚ್ಛತೆ ಬಗ್ಗೆ ಶೌಚಾಲಯದ ಮಹತ್ವ ಕುರಿತು ಹಲವಾರು ಬೀದಿ ನಾಟಕಗಳನ್ನು ಹಾಕಿಕೊಂಡು ತಿಳಿಸಿಕೊಟ್ಟಿದೆ. ಸರ್ಕಾರದ ಪ್ರಯತ್ನದೊಂದಿಗೆ ಹಳ್ಳಿಗಳಲ್ಲಿರುವ ವಿದ್ಯಾವಂತ ಯುವಕರು ನೈರ್ಮಲ್ಯದ ಕುರಿತು ಹಳ್ಳಿಗರಿಗೆ ಮಹತ್ವ ತಿಳಿಸಿದಾಗ ಮಾತ್ರ ನರಕ ಯಾತನೆ ತಪ್ಪಿಸಿ ಗ್ರಾಮಗಳನ್ನು ನಂದವನಗಳಾಗಿ ಮಾಡಬಹುದಲ್ಲವೆ?




**ಈ ನಿಟ್ಟಿನಲ್ಲಿ ಆತ್ಮಾವಲೋಕನಕ್ಕಾಗಿ ಕೆಲವು ಪ್ರಶ್ನೆಗಳು**

1. ನಿತ್ಯವೂ ಬೆಳಿಗ್ಗೆ ಶುದ್ಧವಾದ ಗಾಳಿ ಉಸಿರಾಡಬೇಕಾದ ನಮ್ಮ ದೇಹ, ಮಲ, ಮೂತ್ರಗಳ ವಾಸನೆ ಪಡೆಯುವುದು ದೇಹಕ್ಕೆ ನೋವಲ್ಲವೆ?
2. ಬಯಲು ಜಾಗದಲ್ಲಿ ಹೊಲಸು ಮಾಡುವುದರಿಂದ ಸೊಳ್ಳೆ, ನೊಣ ಮುಂತಾದ ಕ್ರಿಮಿ ಕೀಟಗಳಿಂದ ಮಾನವನಿಗೆ ಮಾರಣಾಂತಿಕ ಕಾಯಿಲೆಗಳು ಬರುವುದಿಲ್ಲವೆ?
3. ನಮ್ಮ ಮನೆ, ಅಂಗಳ ಸ್ವಚ್ಛ ಇಟ್ಟುಕೊಳ್ಳುವುದು – ನಮ್ಮ ಕರ್ತವ್ಯ ಇದ್ದಂತೆ, ನಮ್ಮೂರನ್ನು ಸ್ವಚ್ಛ ಇಟ್ಟುಕೊಳ್ಳುವುದು ನಮ್ಮ ಕರ್ತವ್ಯ ಅಲ್ಲವೇ?
4. ಗ್ರಾಮದಲ್ಲಿರುವ ಹಿರಿಯ ನಾಗರಿಕರು, ವಿದ್ಯಾವಂತ ಯುವಕ, ಯುವತಿಯರು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗುವುದು ಅವಶ್ಯಕವಲ್ಲವೆ?
5. ಈ ಕಾರ್ಯಕ್ಕೆ ಸಂಬಂಧಿಸಿದಂತೆ ಸರ್ಕಾರವು ಸಂಬಂಧಿಸಿದ ಅಧಿಕಾರಿಗಳ ಮೇಲೆ ಸರಿಯಾದ ನಿಗಾ ಇಡಬೇಕಲ್ಲವೆ?
6. ನಮ್ಮ ಹಳ್ಳಿಗಳಿಗೆ ಮಹಾನ್ ವ್ಯಕ್ತಿಗಳು, ಗಣ್ಯರು ಇದನ್ನು ಕಂಡು ಅಸಹ್ಯಪಟ್ಟುಕೊಂಡರೆ ನಮಗಾಗುವ ಅವಮಾನ ಎಂಥದ್ದು?

**– ಚೇತನ್‌ಕುಮಾರ್ ಎಸ್. ರಾಂಪೂರ**

ಮು॥ ಪೋ॥ ಕೋರಹಳ್ಳಿ – 586202, ತಾ॥ ಸಿಂಧಗಿ,
ಜಿ॥ ಬಿಜಾಪೂರ.

ವಿ.ಸೂ. ಓದುಗರು ಸಹ ತಾವು ನೋಡಿದ, ಕೇಳಿದ, ಓದಿದ ಘಟನೆ ಮತ್ತು ಅದಕ್ಕೆ ಪೂರಕವಾದ ಪ್ರಶ್ನೆಗಳನ್ನು ಬರೆದು ಪ್ರಕಟಣೆಗೆ ಕಳುಹಿಸಬಹುದಾಗಿದೆ. ಆಯ್ಕೆಯಾಗಿ ಪ್ರಕಟವಾದ ಪ್ರಶ್ನೆಗಳಿಗೆ ರೂ. 500/- ಬಹುಮಾನ ನೀಡಲಾಗುವುದು.

**ಡಿ.ವಿ. ಸದಾನಂದಗೌಡ**
ಮುಖ್ಯ ಮಂತ್ರಿಗಳು,

ವಿಧಾನ ಸೌಧ
ಬೆಂಗಳೂರು – 560 001

ಸಂಖ್ಯೆ : ಗ್ರಾಅಪ /ರಾನೀನೈಮಿ /ಸಂಸ್ವಾಆಂ /49 /2011–12

ದಿನಾಂಕ : 30–01–2012

**ಮಾನ್ಯರೆ**

**ವಿಷಯ : ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಪ್ರಥಮ ಆದ್ಯತೆಯ ಮೇರೆಗೆ ಅನುಷ್ಠಾನಗೊಳಿಸುವ ಕುರಿತು.**

* * *

ಶುದ್ಧ ಕುಡಿಯುವ ನೀರು, ಸ್ವಚ್ಛ ಪರಿಸರ ಹಾಗೂ ಉತ್ತಮ ನೈರ್ಮಲ್ಯ ವ್ಯವಸ್ಥೆಗಳು ಗ್ರಾಮೀಣ ಪ್ರದೇಶಗಳಿಗೆ ಅತ್ಯಂತ ಪ್ರಮುಖ ಅವಶ್ಯಕತೆಗಳಾಗಿವೆ. ನೈರ್ಮಲ್ಯ ಎಂಬುದು ನಿರ್ಲಕ್ಷಿಸುವ ಸಂಗತಿಯಲ್ಲ, ಅದೊಂದು ಅತ್ಯಂತ ಮಹತ್ವದ ಹಾಗೂ ಆಧ್ಯತೆಯ ವಲಯವಾಗಿದೆ. ಯಾಕೆಂದರೆ ನೈರ್ಮಲ್ಯಕ್ಕೂ ಆರೋಗ್ಯಕ್ಕೂ ನೇರ ಸಂಬಂಧವಿದ್ದು, ಬಯಲುಮಲ ವಿಸರ್ಜನೆಯಂತ ಕೆಟ್ಟ ಪದ್ಧತಿಯಿಂದಾಗಿ ಹಲವಾರು ಸಾಂಕ್ರಾಮಿಕ ರೋಗಗಳು ಹೆಚ್ಚುತ್ತಲೇ ಸಾಗಿವೆ. ನೈರ್ಮಲ್ಯ ಸುಧಾರಿಸಿದರೆ ಜನರ ಆರೋಗ್ಯವೂ ಸುಧಾರಿಸುತ್ತದೆ, ಇದರೊಂದಿಗೆ ಜನರ ದುಡಿಮೆಯ ಶಕ್ತಿ ಹಾಗೂ ಜೀವನ ಗುಣಮಟ್ಟವೂ ಸುಧಾರಿಸುತ್ತದೆ. ಅಲ್ಲದೇ 'ನೈರ್ಮಲ್ಯ' ಎಂಬುದು ಮಾನವ ಅಭಿವೃದ್ಧಿಯ ಸೂಚಕವಾಗಿದ್ದು, ಜಾಗತಿಕ ಮಹತ್ವವನ್ನು ಪಡೆದುಕೊಂಡಿದೆ.

ಗ್ರಾಮೀಣ ಪ್ರದೇಶಗಳಲ್ಲಿನ ಅನೈರ್ಮಲ್ಯವನ್ನು ತೊಡೆದುಹಾಕುವ ಉದ್ದೇಶದೊಂದಿಗೆ ಅಕ್ಟೋಬರ್ 2, 2005 ರಿಂದ ಸಂಪೂರ್ಣ ಸ್ವಚ್ಛತಾ ಅಂದೋಲನ ಕಾರ್ಯಕ್ರಮವನ್ನು ರಾಜ್ಯದಾದ್ಯಂತ ಎಲ್ಲ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ. ಅದಾಗ್ಯೂ ಸಹ ರಾಜ್ಯದ ಬಹುತೇಕ ಜಿಲ್ಲೆಗಳ ಗ್ರಾಮೀಣ ಪ್ರದೇಶಗಳಲ್ಲಿ ಬಯಲು ಮಲವಿಸರ್ಜನೆಯಂತ ಕೆಟ್ಟ ಪದ್ಧತಿ ವ್ಯಾಪಕವಾಗಿ ಮುಂದುವರೆದಿರುವುದನ್ನು ಗಮನಿಸಲಾಗಿದೆ. **ಸಂಪೂರ್ಣ ಸ್ವಚ್ಛತಾ ಆಂದೋಲನದಂತಹ ಮಹತ್ವಾಕಾಂಕ್ಷೆಯ ಕಾರ್ಯಕ್ರಮವನ್ನು ಸಮರೋಪಾದಿಯಲ್ಲಿ ಅನುಷ್ಠಾನಗೊಳಿಸಬೇಕಿದ್ದು, ಈ ನಿಟ್ಟಿನಲ್ಲಿ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೆಚ್ಚಿನ ಆಧ್ಯತೆ ನೀಡದಿರುವುದು ನನ್ನ ಗಮನಕ್ಕೆ ಬಂದಿರುತ್ತದೆ.**

**ಆದ್ದರಿಂದ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಪ್ರಪ್ರಥಮ ಆಧ್ಯತೆಯಲ್ಲಿ ಪರಿಗಣಿಸಿ, ಎಲ್ಲಾ ಕುಟುಂಬಗಳು ಶೌಚಾಲಯಗಳನ್ನು ನಿರ್ಮಿಸಿಕೊಂಡು ಬಳಸುವುದರ ಮೂಲಕ ಬಯಲು ಮಲವಿಸರ್ಜನೆಯನ್ನು ಸಂಪೂರ್ಣವಾಗಿ ತೊಡೆದು ಹಾಕಿ ಗ್ರಾಮೀಣ ನೈರ್ಮಲ್ಯವನ್ನು ಕಾಪಾಡಲು ಅಗತ್ಯಕ್ರಮ ತೆಗೆದುಕೊಳ್ಳುವಂತೆ ಈ ಮೂಲಕ ಸೂಚಿಸಿದೆ.**

**ತಮ್ಮ ವಿಶ್ವಾಸಿ**

**(ಡಿ.ವಿ. ಸದಾನಂದ ಗೌಡ)**

**ಜಿಲ್ಲಾಧಿಕಾರಿಗಳು, ಎಲ್ಲಾ ಜಿಲ್ಲೆಗಳು**
**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ಜಿಲ್ಲಾ ಪಂಚಾಯತ್‌ಗಳು**

**ಜಗದೀಶ್ ಶೆಟ್ಟರ**
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು
ಹಾಗೂ
ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು

ದೂರವಾಣಿ (ಕ) : 080–22251798
22033489
(ಕಾವೇರಿ ಗೃಹ ) : 08022340279
ಟೆಲಿಫ್ಯಾಕ್ಸ್ : 080–22251798
ಕೊಠಡಿ ಸಂಖ್ಯೆ : 316, 316ಎ, 3ನೇ ಮಹಡಿ
ವಿಧಾನ ಸೌಧ, ಬೆಂಗಳೂರು – 560 001

ಸಂಖ್ಯೆ : ಗ್ರಾಅಪಂರಾಸ/50/ಟಿ/2012

ದಿನಾಂಕ : 11–01–2012

# ಟಿಪ್ಪಣಿ

**ವಿಷಯ** : ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಪಂಚಾಯತ್ ರಾಜ್ ಸಂಸ್ಥೆಗಳು ಪ್ರಪ್ರಥಮ ಆಧ್ಯತೆಯ ಮೇರೆಗೆ ಅನುಷ್ಠಾನಗೊಳಿಸುವ ಕುರಿತು.

* * *

ಗ್ರಾಮೀಣ ಪ್ರದೇಶಗಳಲ್ಲಿ ನೈರ್ಮಲ್ಯವನ್ನು ಕಾಪಾಡುವ ಮೂಲಕ ಶುದ್ಧ ಕುಡಿಯುವ ನೀರು, ಹಾಗೂ ನಿರ್ಮಲ ಪರಿಸರವನ್ನು ಪಡೆಯಬಹುದಾಗಿದೆ. ಬಯಲು ಮಲವಿಸರ್ಜನೆಯಂತಹ ಕೆಟ್ಟ ಪದ್ಧತಿಯಿಂದ ಬಹುತೇಕ ಜಲಮೂಲಗಳು ಕಲುಶಿತಗೊಂಡು ನೀರು ಮತ್ತು ನೈರ್ಮಲ್ಯಕ್ಕೆ ಸಂಬಂಧಿಸಿದ ಹಲವಾರು ಸಾಂಕ್ರಾಮಿಕ ರೋಗಗಳು ಹಬ್ಬುತ್ತಿವೆ. ಆದ್ದರಿಂದ ಬಯಲು ಮಲವಿಸರ್ಜನಾ ಮುಕ್ತ ರಾಜ್ಯವಾಗಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಅಕ್ಟೋಬರ್ 2, 2005 ರಿಂದ ಸಂಪೂರ್ಣ ಸ್ವಚ್ಛತಾ ಆಂದೋಲನವು ಜಾರಿಗೊಳ್ಳುತ್ತಿದ್ದರೂ ಸಹ ಬಹುತೇಕ ಜಿಲ್ಲೆಗಳಲ್ಲಿ ನಿರೀಕ್ಷಿತ ಪ್ರಗತಿಯನ್ನು ಸಾಧಿಸಲಾಗಿರುವುದಿಲ್ಲ. ಗ್ರಾಮೀಣ ಜನರು ಬಯಲಲ್ಲಿ ಮಲವಿಸರ್ಜಿಸುವ ಅನಿಷ್ಟ ಪದ್ಧತಿಯನ್ನು ಈಗಲೂ ಮುಂದುವರೆಸಿರುತ್ತಾರೆ.

**ಸಂಪೂರ್ಣ ಸ್ವಚ್ಛತಾ ಆಂದೋಲನದಂತಹ ಮಹತ್ವಾಕಾಂಕ್ಷೆಯ ಕಾರ್ಯಕ್ರಮವನ್ನು ಸಮರೋಪಾದಿಯಲ್ಲಿ ಅನುಷ್ಠಾನಗೊಳಿಸಬೇಕಿದ್ದು, ಈ ನಿಟ್ಟಿನಲ್ಲಿ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹೆಚ್ಚಿನ ಆಧ್ಯತೆ ನೀಡದಿರುವುದು ನನ್ನ ಗಮನಕ್ಕೆ ಬಂದಿರುತ್ತದೆ. ಗ್ರಾಮೀಣ ಪ್ರದೇಶಗಳ ಎಲ್ಲ ಕುಟುಂಬಗಳು ಶೌಚಾಲಯಗಳನ್ನು ನಿರ್ಮಿಸಿಕೊಂಡು ಬಳಸುವಂತೆ ಮಾಡುವುದು ಪಂಚಾಯತ್‌ರಾಜ್ ಸಂಸ್ಥೆಗಳ ಪ್ರಪ್ರಥಮ ಕರ್ತವ್ಯವಾಗಿರುತ್ತದೆ.**

ಆದ್ದರಿಂದ ಸಂಬಂಧಿಸಿದ ಜಿಲ್ಲಾ ಪಂಚಾಯತ್‌ಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಗ್ರಾಮೀಣ ಪ್ರದೇಶಗಳಲ್ಲಿ ಎಲ್ಲ ಕುಟುಂಬಗಳೂ ಶೌಚಾಲಯ ಹೊಂದುವಂತೆ ಮತ್ತು ಬಳಸುವಂತೆ ಮಾಡಿ, ಗ್ರಾಮೀಣ ಪರಿಸರವನ್ನು ಸ್ವಚ್ಚ ಹಾಗೂ ಸುಂದರ ಪರಿಸರವನ್ನಾಗಿ ರೂಪಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲು ಸೂಚಿಸಿದೆ.

(ಜಗದೀಶ ಶೆಟ್ಟರ)

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಎಲ್ಲಾ ಜಿಲ್ಲಾ ಪಂಚಾಯತ್‌ಗಳು

ಕರ್ನಾಟಕ ಸರ್ಕಾರ

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**
**ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ**
**ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ**
**ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ**

---

ಸಂ.ಗ್ರಾಅಪ/ಸಂಸ್ವಆಂ/ಐಇಸಿ/39/2008 ದಿನಾಂಕ : 26-11-2011

# ಸುತ್ತೋಲೆ

ಮಾನ್ಯರೆ,

**ವಿಷಯ : ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಸಹಭಾಗಿತ್ವದೊಂದಿಗೆ ಅನುಷ್ಠಾನಗೊಳಿಸುವ ಬಗ್ಗೆ.**

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯಾದ್ಯಂತ ಜಾರಿಯಲ್ಲಿರುವ ಸಂಪೂರ್ಣ ಸ್ವಚ್ಛತಾ ಆಂದೋಲನವು ಗ್ರಾಮೀಣ ಜನರಲ್ಲಿ ರೂಢಿಯಲ್ಲಿರುವ ಅನೈರ್ಮಲ್ಯದ ಅಭ್ಯಾಸಗಳಲ್ಲಿ ಬದಲಾವಣೆ ತರುವ ಮೂಲಕ ಅವರ ಆರೋಗ್ಯ, ದುಡಿಮೆಯ ಶಕ್ತಿ ಹಾಗೂ ಜೀವನ ಮಟ್ಟದಲ್ಲಿ ಸುಧಾರಣೆ ತರುವ ಮಹತ್ವದ ಯೋಜನೆಯಾಗಿದೆ. ಗೃಹ ಶೌಚಾಲಯ ಶಾಲಾ ಶೌಚಾಲಯ, ಅಂಗನವಾಡಿ ಶೌಚಾಲಯ ಹಾಗೂ ಆರೋಗ್ಯವಂತ ಸಮಾಜ ನಿರ್ಮಾಣವೇ ಸಂಪೂರ್ಣ ಸ್ವಚ್ಛತಾ ಆಂದೋಲನದ ಬಹುಮುಖ್ಯ ಉದ್ದೇಶವಾಗಿದೆ. ಮಹಿಳೆಯರು ಮತ್ತು ಮಕ್ಕಳ ಅಭ್ಯುದಯ ಆಂದೋಲನದ ಪ್ರಮುಖ ಗುರಿಯಾಗಿದೆ. ಸಂಪೂರ್ಣ ಸ್ವಚ್ಛತಾ ಆಂದೋಲನವು ಒಂದು ಜನಾಂದೋಲನವಾಗಿದ್ದು, **ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ಹಾಗೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಗಳ ಸಹಭಾಗಿತ್ವ ಅತ್ಯಂತ ಪ್ರಮುಖವಾಗಿದೆ.** ಈ ಇಲಾಖೆಗಳು, ಜನಸಮುದಾಯ ಹಾಗೂ ಪಂಚಾಯತ್ ರಾಜ್ ಸಂಸ್ಥೆಗಳು ಸಹಭಾಗಿತ್ವದಿಂದ ಕಾರ್ಯನಿರ್ವಹಿಸುವ ಮೂಲಕ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಆದ್ಯತೆಯ ಮೇರೆಗೆ ಅನುಷ್ಠಾನಗೊಳಿಸಬೇಕಿರುತ್ತದೆ.

ಶಾಲಾ ಮಕ್ಕಳಲ್ಲಿ ಅಕ್ಷರ ಕಲಿಕೆಯೊಂದಿಗೆ, ಶೌಚಾಲಯ ಬಳಕೆ ಹಾಗೂ ಸ್ವಚ್ಛತೆಯ ಅಭ್ಯಾಸಗಳನ್ನು ಉತ್ತೇಜಿಸುವ ಮೂಲಕ ಗ್ರಾಮೀಣ ಶಾಲೆಗಳನ್ನು ಸುಂದರ ತಾಣಗಳನ್ನಾಗಿ ರೂಪಿಸಬೇಕಿರುತ್ತದೆ. ಸ್ವಚ್ಛ ಮಕ್ಕಳು ಹಾಗೂ ಸ್ವಚ್ಛ ಶಾಲೆಗಳು ಸ್ವಸ್ಥ ಸಮಾಜದ ನಿಜವಾದ ಪ್ರತೀಕಗಳಾಗಿದ್ದು, ಶಿಕ್ಷಣ ಇಲಾಖೆಯ ಸಹಭಾಗಿತ್ವದಿಂದ ಮಾತ್ರ ಇದು ಸಾಧ್ಯವಾಗುತ್ತದೆ.

ಅಂಗನವಾಡಿಯ ಪುಟ್ಟ ಮಕ್ಕಳಲ್ಲಿ ಸ್ವಚ್ಛತೆಯ ಅಭ್ಯಾಸಗಳನ್ನು ಉತ್ತೇಜಿಸುವ ಮೂಲಕ ಎಳೆಯ ವಯಸ್ಸಿನಿಂದಲೇ ನೈರ್ಮಲ್ಯದ ಅಭ್ಯಾಸಗಳನ್ನು ರೂಢಿಸುವುದು ಅತ್ಯಂತ ಅವಶ್ಯವಿರುತ್ತದೆ. ಸ್ವಚ್ಛ ಮಗು ಹಾಗೂ ಸಶಕ್ತ ಮಹಿಳೆ ದೇಶವೊಂದರ ಅಭ್ಯುದಯದ ಸಂಕೇತಗಳಾಗಿದ್ದು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಭಾಗಿತ್ವದಿಂದ ಮಾತ್ರ ಇದು ಸಾಧ್ಯವಾಗುತ್ತದೆ.

ಜನರ ಆರೋಗ್ಯ ರಕ್ಷಣೆ ಹಾಗೂ ಜನರ ಜೀವನ ಮಟ್ಟ ಸುಧಾರಣೆಗಳು ಆರೋಗ್ಯಕರ ಸಮಾಜ ನಿರ್ಮಾಣದ ಸಂಕೇತಗಳು. ಜನರಲ್ಲಿ ರೂಢಿಯಲ್ಲಿರುವ ಅನೈರ್ಮಲ್ಯದ ಅಭ್ಯಾಸಗಳ ಸುಧಾರಣೆಯಾಗದೆ ಅವರ ಆರೋಗ್ಯ ಸುಧಾರಣೆ ಅಸಾಧ್ಯ, ಆರೋಗ್ಯ ಸುದಾರಣೆಯಾಗದೆ ಅವರ ಜೀವನ ಮಟ್ಟ ಸುದಾರಣೆ ಸಾಧ್ಯವಾಗದ ಮಾತು. ಆದ್ದರಿಂದ ಸ್ವಚ್ಛತೆಯ ಸಾಧನೆಯಲ್ಲಿ ಆರೋಗ್ಯ ಇಲಾಖೆಯ ಪಾತ್ರ ಪ್ರಮುಖವಾದುದಾಗಿದೆ.

ಈ ಎಲ್ಲ ಅಂಶಗಳ ಹಿನ್ನೆಲೆಯಲ್ಲಿ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗಳು ಸಹಭಾಗಿತ್ವದಿಂದ ಕಾರ್ಯನಿರ್ವಹಿಸಿದಲ್ಲಿ ಮಾತ್ರ ಗ್ರಾಮ ನೈರ್ಮಲ್ಯ, ಶಾಲಾ ನೈರ್ಮಲ್ಯ, ಅಂಗನವಾಡಿ ನೈರ್ಮಲ್ಯ ಹಾಗೂ ಜನರ ಆರೋಗ್ಯ ಸುಧಾರಣೆ ಸಾಧ್ಯವಾಗುತ್ತದೆ. ಆದ್ದರಿಂದ ಈ ಇಲಾಖೆಗಳ ಜಿಲ್ಲಾ, ತಾಲೂಕು, ಗ್ರಾಮ ಪಂಚಾಯತ್ ಹಂತಗಳ ಅಧಿಕಾರಿಗಳು ಪಂಚಾಯತ್ ರಾಜ್ ಸಂಸ್ಥೆಗಳೊಂದಿಗೆ ಕೈಜೋಡಿಸಿ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಅನುಷ್ಠಾನಗೊಳಿಸಲು ಸಹಭಾಗಿತ್ವದೊಂದಿಗೆ ಕಾರ್ಯನಿರ್ವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿಗಳು,

**ಡಾ|| ಅಮಿತಾ ಪ್ರಸಾದ್,** ಐ.ಎ.ಎಸ್.
ಪ್ರಧಾನ ಕಾರ್ಯದರ್ಶಿಗಳು
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ,

**ಜಿ. ಕುಮಾರ್ ನಾಯಕ್,** ಐ.ಎ.ಎಸ್
ಕಾರ್ಯದರ್ಶಿಗಳು
ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ.

**ರಮೇಶ್. ಬಿ. ಝುಳಕಿ,** ಐ.ಎ.ಎಸ್.
ಕಾರ್ಯದರ್ಶಿಗಳು
ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ,

**ಇ.ವಿ. ರಮಣ ರೆಡ್ಡಿ,** ಐ.ಎ.ಎಸ್
ಕಾರ್ಯದರ್ಶಿಗಳು
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.

ಡಾ|| ಅಮಿತಾ ಪ್ರಸಾದ್, ಭಾ.ಆ.ಸೇ.
ಪ್ರಧಾನ ಕಾರ್ಯದರ್ಶಿ

**Dr. Amita Prasad, IAS**
Principal Secretary

ಕರ್ನಾಟಕ ಸರ್ಕಾರ ಸಚಿವಾಲಯ
ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯತ್ ರಾಜ್ ಇಲಾಖೆ

Karnataka Government Secretariat
Rural Develolpment & Panchayat Raj Department

ಸಂ: ಗ್ರಾಅಪ/ರಾನೀನೈಮಿ/ಸಂಸ್ವಆಂ/49/2011–12 ದಿನಾಂಕ : 07–01–2012

**ಮಾನ್ಯರೆ**

ವಿಷಯ : ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮವನ್ನು ಯಶಸ್ವಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ

* * *

ಸಂಪೂರ್ಣ ಸ್ವಚ್ಛತಾ ಆಂದೋಲನವು ರಾಜ್ಯದಲ್ಲಿ ಅಕ್ಟೋಬರ್ 2, 2005 ರಿಂದ ಜಾರಿಯಲ್ಲಿರುತ್ತದೆ. ಯೋಜನೆಯ ಪೂರ್ವನಿರ್ಣಯದಂತೆ ಯೋಜನೆಯನ್ನು 2012ರ ಅಂತ್ಯದೊಳಗೆ ಮುಕ್ತಾಯಗೊಳಿಸಬೇಕಿತ್ತು. ಆದರೆ ನಿರೀಕ್ಷಿತ ಸಾಧನೆ ಆಗಿಲ್ಲವಾದ್ದರಿಂದ ಕೇಂದ್ರ ಸರ್ಕಾರವು ಅನಿವಾರ್ಯವಾಗಿ 2017ರವರೆಗೆ ಯೋಜನೆಯನ್ನು ಮುಂದುವರೆಸಿರುತ್ತದೆ. ಈಗಲಾದರೂ ಎಲ್ಲ ಗ್ರಾಮೀಣ ಕುಟುಂಬಗಳೂ ಶೌಚಾಲಯಗಳನ್ನು ನಿರ್ಮಿಸಿಕೊಂಡು ಬಳಸುವಂತೆ ಮಾಡಲು ಪಂಚಾಯತ್ ರಾಜ್ ಸಂಸ್ಥೆಗಳು ಕ್ರಮವಹಿಸಬೇಕಿರುತ್ತದೆ. ಬಹುತೇಕ ಜಿಲ್ಲೆಗಳಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನವು ನಿರೀಕ್ಷಿತ ಪ್ರಗತಿಯನ್ನು ಸಾಧಿಸಿರುವುದಿಲ್ಲ. ವಿಶೇಷವಾಗಿ ಹೈದರಾಬಾದ್ ಕರ್ನಾಟಕದ ಎಲ್ಲ ಜಿಲ್ಲೆಗಳು ಯೋಜನೆಯ ಅನುಷ್ಠಾನದಲ್ಲಿ ಅತ್ಯಂತ ಹಿಂದುಳಿದಿರುತ್ತವೆ. ದಿನಾಂಕ: 5–1–2012 ರಂದು ಮಾನ್ಯ ಕಾರ್ಯದರ್ಶಿಗಳು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಮಂತ್ರಾಲಯ, ಭಾರತ ಸರ್ಕಾರ, ಇವರು ಪರಿಶೀಲನೆ ನಡೆಸಿರುತ್ತಾರೆ. ಮುಂದುವರೆದು ಮಾನ್ಯ ಮುಖ್ಯಮಂತ್ರಿಗಳು, ದಿನಾಂಕ: 6–1–2012 ರ ವಿಡಿಯೋ ಕಾನ್ಫರೆನ್ಸ್ ಮುಂಖಾಂತರ, ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಎಲ್ಲ ಜಿಲ್ಲೆಗಳಲ್ಲಿ ಆದ್ಯತೆಯ ಮೇಲೆ ಅನುಷ್ಠಾನ ಮಾಡಿ ಪೂರ್ಣ ಗುರಿ ಸಾಧಿಸಲು ತಮ್ಮೆಲ್ಲರಿಗೂ ತಿಳಿಸಿರುತ್ತಾರೆ.

ಆದ್ದರಿಂದ ಗ್ರಾಮೀಣ ಪ್ರದೇಶಗಳಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಪರಿಪೂರ್ಣವಾಗಿ ಯಶಸ್ವಿಗೊಳಿಸುವ ಹೊಣೆಗಾರಿಕೆ ನಿಮ್ಮ ಮೇಲಿರುತ್ತದೆ. **ನಿಮ್ಮ ಮುಂದಿನ ವಾರ್ಷಿಕ ಕಾರ್ಯನಿರ್ವಹಣಾ ವರದಿಗಳನ್ನು ಸಂಪೂರ್ಣ ಸ್ವಚ್ಛತಾ ಆಂದೋಲನದ ಯಶಸ್ಸು ಆಧರಿಸಿ ಬರೆಯುಲಾಗವುದು. ಅದರಂತೆ ನೀವು ಸಹ, ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮದ ಗುರಿಗಳನ್ನು ಪ್ರತಿಯೊಬ್ಬ ಇಲಾಖಾ ಅಧಿಕಾರಿಗಳಿಗೂ ನಿಗಧಿಪಡಿಸುವುದು ಹಾಗೂ ಸಂಪೂರ್ಣ ಸ್ವಚ್ಛತಾ ಆಂದೋಲನವನ್ನು ಅನುಷ್ಠಾನ ಮಾಡುವುದನ್ನು ಆಧರಿಸಿ ನಿಮ್ಮ ಅಧೀನ ಅಧಿಕಾರಿಗಳ ವಾರ್ಷಿಕ ಕಾರ್ಯನಿರ್ವಹಣಾ ವರದಿಯನ್ನು ಬರೆಯತಕ್ಕದ್ದು. ಅನುಷ್ಠಾನವನ್ನು ನಿರ್ಲಕ್ಷಿಸುವ ಅಧಿಕಾರಿಗಳ ಮೇಲೆ ನಿಗಾವಹಿಸಿ ಅಂತಹವರ ಮೇಲೆ ನಿರ್ದಾಕ್ಷಿಣ್ಯವಾಗಿ ಶಿಸ್ತಿನ ಕ್ರಮ ತೆಗೆದುಕೊಳ್ಳಲು ಈ ಮೂಲಕ ಸೂಚಿಸಿದೆ.**

ತಮ್ಮ ವಿಶ್ವಾಸಿ

(ಡಾ|| ಅಮಿತಾ ಪ್ರಸಾದ್)

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,**
**ಎಲ್ಲ ಜಿಲ್ಲಾ ಪಂಚಾಯತ್‌ಗಳು**

ಬಹುಮಹಡಿ ಕಟ್ಟಡ, 3ನೇ ಮಹಡಿ, ಬೆಂಗಳೂರು – 560 001. M.S. Building, 3rd Floor, Bangalore – 560 001.
Tel : 2235 3929 / 2203 2446 Fax : 080-2235 3927 e-mail: secyrd@karnataka.gov.in

**ಕರ್ನಾಟಕ ಸರ್ಕಾರ**

**ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ**

# ರಾಜ್ಯ ನೀರು ಮತ್ತು ನೈರ್ಮಲ್ಯ ಮಿಷನ್

## ಸಂವಹನ ಮತ್ತು ಸಾಮರ್ಥ್ಯ ಅಭಿವೃದ್ಧಿ ಘಟಕ

---

ಸಂಖ್ಯೆ : ಗ್ರಾಅಪ/ರಾನೀನೈಮಿ/ಸಂಸ್ವಆಂ/100/09/2011–12 ದಿನಾಂಕ : 04.07.2011

**ರವರಿಗೆ,**

ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು,
ಎಲ್ಲಾ ಜಿಲ್ಲಾ ಪಂಚಾಯತ್.

**ಮಾನ್ಯರೇ,**

**ವಿಷಯ** : ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮದಡಿಯಲ್ಲಿ ವೈಯಕ್ತಿಕ ಶೌಚಾಲಯದ (ಕೇಂದ್ರದ ಪಾಲು) ಪ್ರೋತ್ಸಾಹ ಧನವನ್ನು ಹೆಚ್ಚಿಸುವ ಕುರಿತು.

**ಉಲ್ಲೇಖ** : ಕೇಂದ್ರ ಸರ್ಕಾರದ ಪತ್ರ ಸಂಖ್ಯೆ : W-11013/37/2010-CRSP, Dt : 21.6.2011

* * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಕೇಂದ್ರ ಸರ್ಕಾರವು ಸಂಪೂರ್ಣ ಸ್ವಚ್ಛತಾ ಆಂದೋಲನ ಕಾರ್ಯಕ್ರಮದಡಿಯಲ್ಲಿ ವೈಯಕ್ತಿಕ ಶೌಚಾಲಯ ನಿರ್ಮಿಸಿಕೊಂಡ ಬಿಪಿಎಲ್ ಕುಟುಂಬಗಳಿಗೆ ನೀಡಲಾಗುತ್ತಿರುವ ಪ್ರೋತ್ಸಾಹಧನವನ್ನು ದಿನಾಂಕ 01.06.2011 ರಿಂದ ಜಾರಿಗೆ ಬರುವಂತೆ ರೂ. 1500/– ರಿಂದ ರೂ. 2200/–ಕ್ಕೆ ಹೆಚ್ಚಿಸಲಾಗಿದೆ. ಆದ್ದರಿಂದ ಬಿಪಿಎಲ್ ಫಲಾನುಭವಿಗಳಿಗೆ ಪಾವತಿಸಬೇಕಾಗಿರುವ ಪ್ರೋತ್ಸಾಹಧನದ ವಿವರ ಈ ಕೆಳಗಿನಂತಿರುತ್ತದೆ.

| | | |
|---|---|---|
| ಕೇಂದ್ರ ಸರ್ಕಾರದ ಪ್ರೋತ್ಸಾಹಧನ | – | 2200.00 |
| ರಾಜ್ಯ ಸರ್ಕಾರದ ಪ್ರೋತ್ಸಾಹಧನ | – | 1500.00 |
| **ಒಟ್ಟು** | – | **3700.00** |

(ಮೂರು ಸಾವಿರದ ಏಳುನೂರು ರೂಪಾಯಿಗಳು ಮಾತ್ರ)

ತಮ್ಮ ವಿಶ್ವಾಸಿ,

**(ಪಿ.ಎ. ಮೇಘಣ್ಣವರ)**
ಮಿಷನ್ ನಿರ್ದೇಶಕರು,
ರಾ.ನೀ.ನೈ.ಸಂಸ್ಥೆ ಹಾಗೂ ಸರ್ಕಾರದ
ಪದನಿಮಿತ್ತ ಜಂಟಿ ಕಾರ್ಯದರ್ಶಿಗಳು,
ಗ್ರಾ ಅ ಮತ್ತು ಪಂಚಾಯತ್ ರಾಜ್ ಇಲಾಖೆ (ಹೆಚ್ಚುವರಿ ಪ್ರಭಾರ)

---

2ನೇ ಮಹಡಿ, ಕೆ.ಹೆಚ್.ಬಿ. ಬಿಲ್ಡಿಂಗ್, ಕಾವೇರಿಭವನ, ಬೆಂಗಳೂರು – 560 009.
ದೂರವಾಣಿ ಸಂ. 22221861 : – ಫ್ಯಾಕ್ಸ್ : 22221862 E-mail : wsrdpr@gmail.com



ಬೆಕ್ಕಿನಕೆರೆ ಗ್ರಾಮ ಪಂಚಾಯತಿಯ ಜನರಿಗೆ ಸ್ವಚ್ಛತೆಯ ಕುರಿತು
ಮಾಹಿತಿ ನೀಡುತ್ತಿರುವ ಗ್ರಾಮ ಪಂಚಾಯತ್ ಅಧಿಕಾರಿಗಳು





ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಂಪೂರ್ಣ ಸ್ವಚ್ಛತಾ ಆಂದೋಲನದ
ಬಗ್ಗೆ ಬೀದಿ ನಾಟಕ ಪ್ರದರ್ಶನ

# KARNATAKA VIKAS : MAY 2012

A Monthly Magazine for Rural Development and Panchayat Raj Department, Government of Karnataka

Regd. No. KA/BGGPO/2531/2012-14, Licence to post "Without Prepayment" WPP-32

RNI No. 28103/1976 Total No. of Page 52. Posted at Bangalore GPO on 9th,10th,11th of every month




ಬೆಲೆ : 5 ರೂಪಾಯಿಗಳು
Price : Rs. 5-00

Despatcher

OFFICE OF THE CHIEF EDITOR, KARNATAKA VIKAS

Rural Development and Panchayat Raj Department, Government of Karnataka

No. 309, 3rd Floor, Gate No.1, Multistoried Building, Dr. Ambedkar Veedhi, Bengaluru-560 001

Printed at : GEETANJALI GRAPHICS

B-71 (New No. 84), KSSIDC Indl. Estate, 6th Block, Rajajinagar, Bengaluru-10. Tel : 23404232 / 4235 1346